ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 28 ಭಾನುವಾರ 2024

₹4


ಸಂಪುಟ: 44 | ಸಂಚಿಕೆ: 280 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಹೊಸ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಾಜಿ ಸಿಎಂ ದೇವರಾಜ ಅರಸು ಪ್ರತಿಮೆ ಸ್ಥಾಪನೆ

ಸರ್ಕಾರದ ಆದೇಶ, ಇದಕ್ಕಾಗಿ 92 ಲಕ್ಷ ಬಿಡುಗಡೆ



ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು

“ಮೈಸೂರಿನ ಹೊಸ ಜಿಲ್ಲಾಧಿಕಾರಿ ಕಚೇರಿ ಮುಂದೆ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಪ್ರತಿಮೆ ಸ್ಥಾಪನೆಗೆ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ 92 ಲಕ್ಷ ರೂ. ಮಂಜೂರು ಮಾಡಿದ್ದರು. ಆಡಳಿತಾತ್ಮಕ ಅನುಮೋದನೆ ದೊರೆಯುವುದರೊಳಗೆ ಬದಲಾದ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅನುದಾನ ಬಿಡುಗಡೆ ಮಾಡಿ, ಆಡಳಿತಾತ್ಮಕ ಅನುಮೋದನೆ ನೀಡಿದೆ. ಅರಸು ಅವರ ಮುಂದಿನ ಹುಟ್ಟುಹಬ್ಬದ ವೇಳೆಗೆ ಪ್ರತಿಮೆ ಕಾರ್ಯ ಪೂರ್ಣಗೊಂಡು ಲೋಕಾರ್ಪಣೆಯಾಗಲಿ.

– ರಘು ಕೌಟಿಲ್ಯ, ಅಧ್ಯಕ್ಷರು, ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ

ಮೈಸೂರು, ಜ. 27– ಮೈಸೂರಿನ ಹೊಸ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಪ್ರತಿಮೆ ಸ್ಥಾಪನೆಯಾಗಲಿದೆ. ಹೊಸ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಮೆ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ 92 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರ ಮುಖಾಂತರ ಮೈಸೂರು ಜಿಲ್ಲಾಧಿಕಾರಿಗಳಿಗೆ 92 ಲಕ್ಷ ರೂ. ಬಿಡುಗಡೆ ಮಾಡಲಾಗಿದ್ದು, ಅಂದಾಜು ಪಟ್ಟಿ ಮತ್ತು ವೆಚ್ಚಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದು ಪರಿಶೀಲಿಸಿ, ಸರ್ಕಾರಕ್ಕೆ ಸಲ್ಲಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಬೇಕು. ಮಂಜೂರು ಮಾಡಿದ ಹಣ ಸಮರ್ಪಕವಾಗಿ ಬಳಕೆಯಾದ ಬಗ್ಗೆ ಲೆಕ್ಕ ಪರಿಶೋಧಕರಿಂದ ದೃಢೀಕರಿಸಿದ ಲೆಕ್ಕಪಟ್ಟಿ ಹಾಗೂ ಹಣ ಬಳಕೆ ಪ್ರಮಾಣಪತ್ರ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕು, ಬಿಡುಗಡೆ ಮಾಡಲಾದ ಅನುದಾನ ಹೊರತುಪಡಿಸಿ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದಲ್ಲ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನ ಕಾರ್ಯದರ್ಶಿ ಎಸ್.ಗೀತಾಬಾಯಿ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ಶ್ರೀ ಭಗವದ್ಗೀತಾ ಅಭಿಯಾನ

ಮೈಸೂರು, ಜ.27–ನಗರದ ಅಗ್ರಹಾರ ಖಿಲ್ಲೆ ಮೊಹಲ್ಲಾದಲ್ಲಿರುವ ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಮತ್ತು ಅನುಗ್ರಹದಿಂದ ಜ.28ರಿಂದ ಫೆ.1ರವರೆಗೆ ಪ್ರತಿದಿನ ಸಂಜೆ 6.30ರಿಂದ 7.30ರವರೆಗೆ ನಾಡಿನ ಸುಪ್ರಸಿದ್ಧ ಪ್ರವಚನಕಾರರಾದ ಪಂ.ಶ್ರೀ ಶ್ರೀನಿಧಿ ಆಚಾರ್ಯ ಜಮನಿಸ್ ರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 15 ಎಂಬ ವಿಷಯದ ಕುರಿತು ಎಂಟನೇ ತಿಂಗಳ ಪ್ರವಚನವನ್ನು ಆಯೋಜಿಸಲಾಗಿದೆ ಎಂದು ಮಠದ ಪ್ರಧಾನ ವ್ಯವಸ್ಥಾಪಕರಾದ ಪಂ.ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿಯವರು ತಿಳಿಸಿದ್ದಾರೆ. ಭಗವದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ. ಮಾಹಿತಿಗೆ ಮೊಬೈಲ್ 9448147459 ಸಂಪರ್ಕಿಸಬಹುದು.

ಭಗವದ್ಗೀತೆ 15ನೇ ಅಧ್ಯಾಯದ ಪ್ರವಚನ

ಮೈಸೂರು, ಜ.27– ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಜ.28ರಿಂದ ಫೆ.1ರವರೆಗೆ ಪ್ರತಿದಿನ ಸಂಜೆ 5ರಿಂದ 6ರವರೆಗೆ ಪಂಡಿತ್ ಶ್ರೀ ಶ್ರೀನಿಧಿ ಆಚಾರ್ಯ ಜಮನಿಸ್ ಅವರಿಂದ 'ಭಗವದ್ಗೀತೆ 15ನೇ ಅಧ್ಯಾಯ'ದ ಪ್ರವಚನವನ್ನು ಏರ್ಪಡಿಸಲಾಗಿದೆ. ಎಲ್ಲಾ ಆಸಕ್ತರು ಭಾಗವಹಿಸಬೇಕೆಂದು ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿಯ ಪರವಾಗಿ ಕೋರಲಾಗಿದೆ. ಮಾಹಿತಿಗೆ 0821–2511355 ಸಂಪರ್ಕಿಸಬಹುದು.

ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಖದೀಮನ ಸೆರೆ

ಮೈಸೂರು, ಜ. 27(ಆರ್‌ಕೆ)– ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಮನೆ ಬಾಗಿಲು ಮುರಿದು ಕಳವು ಮಾಡಿದ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕು, ಕೊಪ್ಪ ನಿವಾಸಿ ಜಮಾಲ್ ಬಂಧಿತ ಅಂತರ ಜಿಲ್ಲಾ ಖದೀಮ. ಮೈಸೂರಿನ ವಿಜಯನಗರ ಪೊಲೀಸ್ ಠಾಣೆ, ಜಿಲ್ಲೆಯ 3, ಮಂಡ್ಯ ಜಿಲ್ಲೆಯ 2 ಹಾಗೂ ಹಾಸನದ ಒಂದು ಮನೆ ಕಳವು ಮಾಡಿದ್ದ ಆತ, ನಾಲ್ಕೈದು ವರ್ಷಗಳಿಂದ ಸಮನ್ಸ್, ವಾರಂಟ್ ನೀಡಿದ್ದರೂ ಕೋರ್ಟ್‌ಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ನ್ಯಾಯಾಲಯದಿಂದ ಬಂಧನ ವಾರಂಟ್ ಜಾರಿಯಾಗಿದ್ದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ವಿಜಯನಗರ ಠಾಣೆ ಸಬ್ ಇನ್ಸ್‌ಪೆಕ್ಟರ್ ಕೆ. ವಿಶ್ವನಾಥ್ ಹಾಗೂ ತಂಡದ ಸಿಬ್ಬಂದಿಗಳು ಬಾತ್ಮೀದಾರರು ನೀಡಿದ ಮಾಹಿತಿಯ ಜಾಡು ಹಿಡಿದು ಜನವರಿ 22ರಂದು ಜಮಾಲ್‌ನನ್ನು ಬಂಧಿಸಿ ಮೈಸೂರಿನ 5ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಡಿಸಿಪಿ ಎಸ್. ಜಾಹ್ನವಿ, ವಿಜಯನಗರ ಎಸಿಪಿ ಜಿ.ಎಸ್. ಗಜೇಂದ್ರಪ್ರಸಾದ್ ಮಾರ್ಗದರ್ಶನದಲ್ಲಿ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಎಸ್.ಡಿ. ಸುರೇಶ್‌ಕುಮಾರ್, ಸಿಬ್ಬಂದಿಗಳಾದ ಉಮೇಶ್, ಎಂ.ಜೆ.ಶಂಕರ, ಬಿ. ಸ್ವಾಮಾರಾಧ್ಯ, ತಿಲಕಕುಮಾರ, ಪ್ರದೀಪ್‌ಕುಮಾರ್, ಜೆ. ಚಂದ್ರ, ಕೆ.ಎನ್ ಮಂಜುನಾಥ್, ಸಂಜಯ್ ಹಾಗೂ ಇತರರು ಪತ್ತೆ ಕಾರ್ಯದಲ್ಲಿ ಭಾಗವಹಿಸಿದ್ದರು.

ಎಪಿಎಂಸಿ ಮಾರುಕಟ್ಟೆ ಕೂಲಿ ಕಾರ್ಮಿಕರಿಗೆ ಗೌರವ ಸಮರ್ಪಣೆ



ಮೈಸೂರು,ಜ.27(ಆರ್‌ಕೆ)–75ನೇ ಗಣರಾಜ್ಯೋತ್ಸವದ ಅಂಗವಾಗಿ ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಮಾರುಕಟ್ಟೆ ಅವರಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 25 ಮಂದಿ ಕೂಲಿ ಕಾರ್ಮಿಕರಿಗೆ ಆರ್ಥಿಕ ನೆರವಿನ ಚೆಕ್ ನೀಡಿ ಆತ್ಮೀಯವಾಗಿ ಗೌರವಿಸಲಾಯಿತು.

ಮೈಸೂರು ಜಿಲ್ಲಾ ಲೋಡರ್ಸ್ ಟ್ರಾನ್ಸ್‌ಪೋರ್ಟ್ ಮತ್ತು ಜನರಲ್ ವರ್ಕರ್ಸ್ ಅಸೋಸಿಯೇಷನ್ ಮೃತ ಕೂಲಿ ಕಾರ್ಮಿಕರ ಕುಟುಂಬದ ಸದಸ್ಯರಿಗೆ 50000 ರೂ. ಪರಿಹಾರ ಹಾಗೂ ನಿವೃತ್ತ 25 ಮಂದಿ ಹಿರಿಯ ಕೂಲಿ ಕಾರ್ಮಿಕರಿಗೆ ತಲಾ 25,000 ರೂ. ಆರ್ಥಿಕ ನೆರವಿನ ಚೆಕ್ ನೀಡಿ ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್‌ವಿ.ರವಿಕುಮಾರ ಅವರು, ಮಳೆ, ಬಿಸಿಲು, ಚಳಿಗೆ ಮೈಯೊಡ್ಡಿ ಸ್ವಾಭಿಮಾನದಿಂದ ಜೀವನ ನಡೆಸಿ ನಿವೃತ್ತರಾಗಿರುವ ಶ್ರಮ ಜೀವಿಗಳನ್ನು ಗುರುತಿಸಿ ನೆರವು ನೀಡುತ್ತಿರುವುದು, ಅದೇ ವೃತ್ತಿಯಲ್ಲಿರುವಾಗಲೇ ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ಪರಿಹಾರ ನೀಡಿ ಆಸರೆಯಾಗಿರುವ ಸಂಘದ ಕಾರ್ಯ ಶ್ಲಾಘನೀಯವಾದದ್ದು, ಈ ಸಮುದಾಯದ ಕ್ಷೇಮಾಭಿವೃದ್ಧಿಗೆ ಸರ್ಕಾರ, ಸಂಘ ಸಂಸ್ಥೆಗಳು ಕೈಜೋಡಿಸುವುದು ಉತ್ತಮ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ, ಎಪಿಎಂಸಿ ಸದಸ್ಯ ಎನ್.ಪ್ರಕಾಶ್, ಮೈಸೂರು ಡಿಸ್ಟ್ರಿಕ್ಟ್ ಲೋಡರ್ಸ್ ಟ್ರಾನ್ಸ್‌ಪೋರ್ಟ್ ಮತ್ತು ಜನರಲ್ ವರ್ಕರ್ಸ್ ಅಸೋಸಿಯೇಷನ್ ಅಧ್ಯಕ್ಷ ಎನ್.ಪುರುಷೋತ್ತಮ್, ಉಪಾಧ್ಯಕ್ಷ ಮುನಾವರ ಪಾಷಾ, ಪ್ರಧಾನ ಕಾರ್ಯದರ್ಶಿ ಆಸಿಫ್ ಅಹಮದ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

34 ಶಾಸಕರಿಗೆ ನಿಗಮ–ಮಂಡಳಿ ಅಧ್ಯಕ್ಷ ಸ್ಥಾನ

ಮುಡಾ, ಕಾಡಾ, ಮೈಲ್ಯಾಕ್, ವಸ್ತುಪ್ರದರ್ಶನ, ಮೃಗಾಲಯ ಪ್ರಾಧಿಕಾರಗಳಿಗೆ ಸದ್ಯದಲ್ಲೇ ನೇಮಕ



ಮುಡಾ



ಕಾಡಾ



ಮೈಲ್ಯಾಕ್



ವಸ್ತುಪ್ರದರ್ಶನ ಪ್ರಾಧಿಕಾರ



ಮೃಗಾಲಯ

ಮೈಸೂರು, ಜ. 27(ಆರ್‌ಕೆ)– ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು, ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ, ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ಅರಸೀಕೆರೆ ಶಾಸಕ ಶಿವಲಿಂಗೇಗೌಡ ಸೇರಿದಂತೆ ರಾಜ್ಯದ 34 ಶಾಸಕರಿಗೆ ಸಂಪುಟ ದರ್ಜೆಯ ಸ್ಥಾನಮಾನದೊಂದಿಗೆ ವಿವಿಧ ನಿಗಮ–ಮಂಡಳಿ ಅಧ್ಯಕ್ಷ ಸ್ಥಾನ ನೀಡಿ, ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ.

ಅನಿಲ್ ಚಿಕ್ಕಮಾದು ಅವರಿಗೆ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್, ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡರಿಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಚಾಮರಾಜನಗರದ ಸಿ. ಪುಟ್ಟರಂಗಶೆಟ್ಟಿಗೆ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಅರಸೀಕೆರೆಯ ಶಿವಲಿಂಗೇಗೌಡರಿಗೆ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರನ್ನಾಗಿ ಸರ್ಕಾರದ ಅಧೀನ ಕಾರ್ಯದರ್ಶಿ ಪಿ.ಎನ್. ನಾಗಪ್ರಶಾಂತ ಜ.26ರಂದು ಆದೇಶ ಹೊರಡಿಸಿದ್ದಾರೆ.

ರಾಜ್ಯದ ಇತರ ಕ್ಷೇತ್ರಗಳ ಕಾಂಗ್ರೆಸ್ ಶಾಸಕರುಗಳಾದ ಹಂಪನಗೌಡ ಬಾದರ್ಲಿ ಅವರಿಗೆ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ, ಅಪ್ಪಾಜಿ ಸಿ.ಎಸ್.ನಾಡಗೌಡ, ಭರಮಗೌಡ ಆಲನಗೌಡ ಕಾಗೆ, ಹುಲ್ಲಪ್ಪ ಯಮನಪ್ಪ ಮೇಟಿ, ಎಸ್.ಆರ್. ಶ್ರೀನಿವಾಸ, ಬಸವರಾಜ್ ನೀಲಪ್ಪ ಶಿವಣ್ಣನವರ, ಬಿ.ಜಿ. ಗೋವಿಂದಪ್ಪ, ಹೆಚ್.ಸಿ. ಬಾಲಕೃಷ್ಣ, ಜಿ.ಎಸ್. ಪಾಟೀಲ, ಎನ್.ಎ. ಹ್ಯಾರಿಸ್, ಕೌಜಲಗಿ ಮಹಾಂತೇಶ ಶಿವಾನಂದ ಸೇರಿದಂತೆ ರಾಜ್ಯದ 34 ಮಂದಿಗೆ ಸಂಪುಟ ದರ್ಜೆಯ ಸ್ಥಾನಮಾನದೊಂದಿಗೆ ನಿಗಮ–ಮಂಡಳಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಈ ಮಧ್ಯೆ ಮೈಸೂರಿನ ಕಾವೇರಿ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ (ಕಾಡಾ), ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ), ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ (ಕೆಇಎ), ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆ (ಮೈಲ್ಯಾಕ್), ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕಾ ನಿಗಮ (ಕೆಎಸ್‌ಎಸ್‌ಐಸಿ)ಗಳ ಅಧ್ಯಕ್ಷರ ನೇಮಕಾತಿ ಸದ್ಯದಲ್ಲೇ ಆಗಲಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಬಹುಶಃ ಸೋಮವಾರ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ. ಮೊದಲ ಹಂತದಲ್ಲಿ ಶಾಸಕರಿಗೆ ಅಧ್ಯಕ್ಷ ಸ್ಥಾನ ನೀಡುವ ಮೂಲಕ ಮಂತ್ರಿಗಿರಿಗೆ ಬೇಡಿಕೆ ಇಟ್ಟವರನ್ನು ಸಮಾಧಾನಪಡಿಸಿರುವ ಕಾಂಗ್ರೆಸ್ ಹೈಕಮಾಂಡ್, 2ನೇ ಹಂತದಲ್ಲಿ ಮಾಜಿ ಶಾಸಕರು, ವಿವಿಧ ಜಿಲ್ಲೆ ಹಾಗೂ ನಗರ ಕಾಂಗ್ರೆಸ್ ಅಧ್ಯಕ್ಷರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರ ತ್ಯಾಗ ಮಾಡಿದವರು ಹಾಗೂ ಪಕ್ಷಕ್ಕಾಗಿ ದುಡಿದ ಕಾಂಗ್ರೆಸ್ ನಿಷ್ಠಾವಂತ ಕಾರ್ಯಕರ್ತರನ್ನು ಗುರ್ತಿಸಿ ಉಳಿದಿರುವ ನಿಗಮ–ಮಂಡಳಿ ಪ್ರಾಧಿಕಾರಕ್ಕೆ ನೇಮಿಸಲು ರಾಜ್ಯ ಸರ್ಕಾರ ಪಟ್ಟಿ ಸಿದ್ಧಪಡಿಸಿದೆ.

ಮೈಸೂರು ಭಾಗದಲ್ಲಿ ಹಿರಿಯ ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕರುಗಳಾದ ಎಂ.ಕೆ. ಸೋಮಶೇಖರ್, ಹೆಚ್.ಪಿ. ಮಂಜುನಾಥ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ, ಮಾಜಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಕೆ. ಮರೀಗೌಡ ಸೇರಿದಂತೆ ಹಲವು ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ ಕಲ್ಪಿಸಬೇಕಾಗಿದೆ. ಈ ನಡುವೆ ಲೋಕಸಭಾ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವುದರಿಂದ ಅಭ್ಯರ್ಥಿ ಆಕಾಂಕ್ಷಿಗಳಾಗಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ, ಡಾ.ಶುಶ್ರುತ್‌ಗೌಡ, ಡಾ. ಬಿ.ಜೆ.ವಿಜಯಕುಮಾರ್ ಹಾಗೂ ಎಂ.ಲಕ್ಷ್ಮಣ ಹೆಸರುಗಳು ಕೇಳಿಬರುತ್ತಿದ್ದು, ಕಾಂಗ್ರೆಸ್ ಹೈಕಮಾಂಡ್ ಈಗಾಗಲೇ ಅಭಿಪ್ರಾಯ ಸಂಗ್ರಹಿಸಿ ಸಮೀಕ್ಷಾ ವರದಿಯನ್ನು ತರಿಸಿಕೊಂಡಿದೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಒಕ್ಕಲಿಗ ಸಮುದಾಯದ ಅಭ್ಯರ್ಥಿಯನ್ನೇ ಸ್ಪರ್ಧೆಗಿಳಿಸಬೇಕೆಂದು ಪಕ್ಷ ನಿರ್ಧರಿಸಿದೆಯಾದರೂ, ಯಾರನ್ನು ಕಣಕ್ಕಿಳಿಸಬೇಕೆಂಬುದರ ಬಗ್ಗೆ ಖಚಿತ ನಿಲುವಿಗೆ ಬಾರದಿರುವುದರಿಂದ ಇನ್ನೂ ಈ ವಿಷಯದಲ್ಲಿ ಗೊಂದಲ ಮುಂದುವರಿದಿದೆ. ಆದರೆ, ಮುಡಾಗೆ ಕೆ. ಮರೀಗೌಡ ಪ್ರಬಲ ಆಕಾಂಕ್ಷಿಯಾಗಿದ್ದು, ಕಳೆದ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಬಯಸಿದ್ದರಾದರೂ, ಮಾವಿನಹಳ್ಳಿ ಸಿದ್ದೇಗೌಡರಿಗೆ ಅಭ್ಯರ್ಥಿ ಸ್ಥಾನ ಬಿಟ್ಟುಕೊಟ್ಟಿದ್ದ ಮರೀಗೌಡರಿಗೆ ಮುಂದೆ ಮುಡಾ ಅಧ್ಯಕ್ಷ ಸ್ಥಾನ ನೀಡುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದ್ದರು ಎಂದು ಹೇಳಲಾಗಿದೆ.

ಅಭ್ಯರ್ಥಿ ಸ್ಥಾನ ಬಿಟ್ಟುಕೊಟ್ಟಿರುವ, ಪಕ್ಷಕ್ಕಾಗಿ ನಿಷ್ಠಾವಂತರಾಗಿ ಹಲವು ವರ್ಷ ದುಡಿದಿರುವ ಕಾರ್ಯಕರ್ತರು, ಮಾಜಿ ಶಾಸಕರುಗಳನ್ನು ನಿಗಮ–ಮಂಡಳಿಗಳಿಗೆ ನೇಮಕ ಮಾಡಿ ಅಧಿಕಾರ ನೀಡುವ ಮೂಲಕ ಅತೃಪ್ತರಿಗೆ ಸಮಾಧಾನ ಮಾಡುವ ತಂತ್ರಗಾರಿಕೆ ನಡೆಸುತ್ತಿರುವ ಕಾಂಗ್ರೆಸ್ ನಾಯಕರು, ಈಗಾಗಲೇ ಪಟ್ಟಿ ಸಿದ್ಧಪಡಿಸಿದ್ದು, ಹೈಕಮಾಂಡ್ ಅಂಕಿತ ಬಾಕಿ ಇದೆ. ಲೋಕಸಭಾ ಚುನಾವಣಾ ಅಧಿಸೂಚನೆ ಪ್ರಕಟವಾಗುವ ಮುನ್ನವೇ ಉಳಿದಿರುವ ಎಲ್ಲಾ ನಿಗಮ–ಮಂಡಳಿ ಮತ್ತು ಪ್ರಾಧಿಕಾರಗಳಿಗೆ ಅಧ್ಯಕ್ಷರುಗಳ ನೇಮಕವಾಗಲಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಜಗದೀಶ್ ಶೆಟ್ಟರ್ ಘನತೆಗೆ ಶೋಭೆ ತರಲ್ಲ; ವ್ಯಕ್ತಿತ್ವಕ್ಕೆ ಕಪ್ಪು ಚುಕ್ಕೆ



ಮೈಸೂರು, ಜ. 27– ರಾಜಕಾರಣದಲ್ಲಿ ಅಧಿಕಾರಕ್ಕಾಗಿ ಪಕ್ಷ ತೊರೆಯುವ ವಿಚಾರ ಸರ್ವೆ ಸಾಮಾನ್ಯವಾದರೂ ಒಬ್ಬ ಹಿರಿಯ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾಗಿದ್ದು ಅವರ ವ್ಯಕ್ತಿತ್ವಕ್ಕೆ ಕಪ್ಪುಚುಕ್ಕೆಯಾಗಿದೆ ಎಂದು ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ಟೀಕಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣಾ ಹೊತ್ತಲ್ಲಿ ಟಿಕೆಟ್ ಸಿಗಲಿಲ್ಲವೆಂದು ಕುಪಿತಗೊಂಡ ಜಗದೀಶ್ ಶೆಟ್ಟರ್ ಅವರು ತಮ್ಮ ಕೋಪವನ್ನು ಬದಿಗಿರಿಸಿ ಪಕ್ಷದ ಪರವಾಗಿ ಕೆಲಸ ಮಾಡಬಹುದಾಗಿತ್ತು. ತಮಗೆ ಹಲವಾರು ಹುದ್ದೆಯನ್ನು ನೀಡಿದ ಬಿಜೆಪಿ ಬಿಡುವ ಬದಲಿಗೆ ಅಲ್ಲೇ ಉಳಿಯಬಹುದಾಗಿತ್ತು. ಆದರೆ ಕಾಂಗ್ರೆಸ್ ಸೇರಿಕೊಂಡು ಚುನಾವಣೆಯಲ್ಲಿ ನಿಂತು ಪರಾಭವಗೊಂಡರು. ಹೀಗಿದ್ದರೂ ಕಾಂಗ್ರೆಸ್ ಹೈಕಮಾಂಡ್ ಅವರ ಹಿರಿತನ, ಅನುಭವಕ್ಕೆ ಧಕ್ಕೆ ಆಗದಂತೆ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿ ಗೌರವದಿಂದ ನಡೆಸಿಕೊಂಡಿತ್ತು. ಹೀಗಿದ್ದರೂ ಕಾಂಗ್ರೆಸ್ ತೊರೆದು ಮರಳಿ ಬಿಜೆಪಿ ಸೇರಿದ್ದು ಅವರ ವ್ಯಕ್ತಿತ್ವಕ್ಕೆ ಅವರೇ ಮಸಿ ಬಳಿದುಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ರಾಜೀವ್ ಸ್ನೇಹ ಬಳಗದ ವತಿಯಿಂದ ಅಯೋಧ್ಯೆ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನಾ ಅಂಗವಾಗಿ ಪಿ. ಪುರುಷೋತ್ತಮ್ ಅವರನ್ನು ಸನ್ಮಾನಿಸಲಾಯಿತು. 23ನೇ ವಾರ್ಡ್ ಕಾಂಗ್ರೆಸ್ ಮುಖಂಡರಾದ ರಾಜೀವ್, ವಾರ್ಡ್ ಅಧ್ಯಕ್ಷ ಆನಂದ್, ಜ್ಞಾನೇಶ್, ಚಂದ್ರ, ಜಗದೀಶ್, ಯೂತ್ ಕಾಂಗ್ರೆಸ್ ಅಧ್ಯಕ್ಷರು ಪವನ್ ಉಪಸ್ಥಿತರಿದ್ದರು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.1.2024 ಭಾನುವಾರ, ಮಳೆ ನಕ್ಷತ್ರ: ಶ್ರವಣ 24.1.2024 ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಮಖ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ನವಕರ್ನಾಟಕ ಪ್ರಕಾಶನ** : ಪುಸ್ತಕ ಪ್ರದರ್ಶನ, ಸ್ಥಳ: ನವಕರ್ನಾಟಕ ಪ್ರಕಾಶನ, ರಾಮಸ್ವಾಮಿ ಸರ್ಕಲ್ ಬಳಿ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ** : ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ವ್ಯವಸ್ಥಾಪಕರು** : ಪ್ರೊ. ಸಿ.ಕೆ. ರೇಣುಕಾರ್ಯರ ಜನ್ಮ ದಿನದ ಗೌರವ ವಂದನೆ ಕಾರ್ಯಕ್ರಮ, ಸ್ಥಳ: ಯೂಥ್ ಹಾಸ್ಟೆಲ್, ಗಂಗೋತ್ರಿ ಲೇಔಟ್, ಬೆಳಗ್ಗೆ 10ಕ್ಕೆ

■ **ಮೈಸೂರು ಜಿಲ್ಲಾ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್** : ಗಣರಾಜ್ಯೋತ್ಸವ ಪ್ರಯುಕ್ತ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿ, ಸ್ಥಳ: ನ್ಯಾಷನಲ್ ಸ್ಪೋರ್ಟ್ಸ್ ಕ್ಲಬ್, ಸುಬ್ಬರಾಯನಕೆರೆ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್** : ಅಭಿನವ ಸಾಮ್ರಾಟ್ ಡಾ. ಪುನೀತ್ ಚುಟುಕುಗಳು ಕೃತಿ ಲೋಕಾರ್ಪಣೆ ಸಮಾರಂಭ, ಚುಟುಕು ಕವಿಗೋಷ್ಠಿ ಉದ್ಘಾಟನೆ : ಮಾಜಿ ಸಚಿವ ಎಂ. ಶಿವಣ್ಣ, ಉದ್ಘಾಟನೆ : ಚಲನಚಿತ್ರ ನಿರ್ಮಾಪಕ ಎಸ್.ಎ. ಗೋವಿಂದರಾಜು, ಪುನೀತ್ ಭಾವಚಿತ್ರ ಅನಾವರಣ : ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ತೋಂಟದಾರ್ಯ, ಕೃತಿ ಲೋಕಾರ್ಪಣೆ : ಶ್ರೀಮತಿ ಲಕ್ಷ್ಮೀ ಗೋವಿಂದರಾಜು, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಡಾ. ಎಂ.ಜಿ.ಆರ್. ಅರಸ್, ಡಾ. ರತ್ನ ಹಾಲಪ್ಪಗೌಡ, ಎಸ್.ಎ. ಶ್ರೀನಿವಾಸ್, ಡಾ. ಹೆಚ್.ಎನ್. ಲೋಕೇಶಪ್ಪ, ಸ್ಥಳ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು, ಮೈಸೂರು ಸೈನ್ಸ್ ಫೌಂಡೇಷನ್** : ದಿ ವಾರಿಯರ್ ಆಫ್ ರಿಯಲ್ ಇಂಡಿಪೆಂಡೆನ್ಸ್ ನೇತಾಜಿ ಸುಭಾಷ್ ಚಂದ್ರ ಬೋಸ್ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಪಸ್ಥಿತರು : ಡಾ. ಸಿ.ಜಿ. ಬೆಟಸೂರಮಠ, ಪ್ರೊ. ಎಸ್.ಪಿ. ಮಂಜುನಾಥ್, ಪ್ರೊ. ಆರ್. ಮುರುಗೇಶಪ್ಪ, ಬಿ. ನಿರಂಜನಮೂರ್ತಿ, ಡಾ. ಎಂ. ಪೂರ್ಣಿಮಾ, ಶಿವಾನಂದ ಶಿಂದಕೇರಾ, ಸಿ. ಕೃಷ್ಣೇಗೌಡ, ಡಾ. ಕೆ.ಸಿ. ಮಹದೇಶ್, ಡಾ. ಪಿ. ಹರಿಪ್ರಸಾದ್, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ** : ಆಡಳಿತಾಧಿಕಾರಿಗಳಿಗೆ 'ಸಮಯದ ಕರೆ –ಸಕಾರಾತ್ಮಕ ಬದಲಾವಣೆ' ಎಂಬ ವಿಷಯದ ಕುರಿತು ವಿಚಾರಗೋಷ್ಠಿ, ಉದ್ಘಾಟನೆ ಮತ್ತು ಪ್ರಾಸ್ತಾವಿಕ ಭಾಷಣ: ದೆಹಲಿಯ ಆಡಳಿತಾಧಿಕಾರಿಗಳ ವಿಭಾಗದ ಅಧ್ಯಕ್ಷೆ ರಾಜಯೋಗಿನಿ ಬಿಕೆ ಆಶಾಜಿ, ಮುಖ್ಯ ಅತಿಥಿಗಳು: ಮೈಸೂರು ನೈರುತ್ಯ ರೈಲ್ವೆ ವಿಭಾಗೀಯ ರೈಲ್ವೆ ಪ್ರಬಂಧಕರಾದ ಶ್ರೀಮತಿ ಶಿಲ್ಪ ಅಗರವಾಲ್, ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಎಮ್.ಎಸ್.ಗೀತಾ, ಚಾಮರಾಜನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾ ದಂಡಾಧಿಕಾರಿ ಶ್ರೀಮತಿ ಗೀತಾ ಹುದೇದ್, ಆಶೀರ್ವಚನ : ಈವಿವಿ ಮೈಸೂರು ಉಪ ವಿಭಾಗದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿಕೆ ಲಕ್ಷ್ಮೀಜಿ, ಸ್ಥಳ: ಹುಣಸೂರು ರಸ್ತೆಯಲ್ಲಿರುವ ಲಿಂಗದೇವರುಕೊಪ್ಪಲಿನ ಜ್ಞಾನ ಸರೋವರ ರಿಟ್ರೀಟ್ ಸೆಂಟರ್, ಬೆಳಿಗ್ಗೆ 10.30ಕ್ಕೆ

■ **ವೆಂಕಟಗಿರಿ ಪ್ರಕಾಶನ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಅರೋಹಿ ಟ್ರಸ್ಟ್** : ಬೆಳ್ಳಾಳೆ ಬೆಟ್ಟೇಗೌಡ ಅವರ 'ಜೀವ ಅಂತರ್ಜಲ' ಕವನ ಸಂಕಲನ ಬಿಡುಗಡೆ ಸಮಾರಂಭ, ಕವನ ಸಂಕಲನ ಬಿಡುಗಡೆ : ಜನಪದ ವಿದ್ವಾಂಸ ಡಾ. ಪಿ.ಕೆ. ರಾಜಶೇಖರ್, ಪುಸ್ತಕ ಕುರಿತು ಮಾತನಾಡುವವರು : ಪ್ರೊ.; ರಾಜಪ್ಪ ದಳವಾಯಿ, ಅಧ್ಯಕ್ಷತೆ : ವಿಚಾರವಾದಿ ಪ್ರೊ. ಜಿ.ಟಿ. ವೀರಪ್ಪ, ಉಪಸ್ಥಿತರು : ಕೃತಿಯ ಕರ್ತೃ ಬೆಳ್ಳಾಳೆ ಬೆಟ್ಟೇಗೌಡ, ಹೊರೆಯಾಲ ದೊರೆಸ್ವಾಮಿ ಬಡಗಲಪುರ ನಾಗೇಂದ್ರ, ಪ್ರೊ. ನೀ. ಗಿರಿಗೌಡ, ಸ್ಥಳ: ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಜುವಲ್ ಆರ್ಟ್** : ಡಾ. ವಿಠ್ಠಲರೆಡ್ಡಿ ಎಫ್. ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11 ರಿಂದ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು** : 119ನೇ ರಾಷ್ಟ್ರಪತಿ ಕುವೆಂಪು ಜನ್ಮ ದಿನೋತ್ಸವ ಮತ್ತು ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಕುವೆಂಪು ವಿಶ್ವಮಾನವ ಲಯನ್ಸ್ ಸಂಸ್ಥೆ ಕಾರ್ಯದರ್ಶಿ ಡಿ.ವಿ. ದಯಾನಂದ ಸಾಗರ್, ಮುಖ್ಯ ಅತಿಥಿಗಳು : ಕುವೆಂಪು ವಿವಿ ನಿವೃತ್ತ ಕುಲಪತಿ ಡಾ. ಕೆ. ಚಿದಾನಂದಗೌಡ, ಮೈಸೂರು ಗ್ರಾಹಕ ಪರಿಷತ್ ಸಂಸ್ಥಾಪಕ ಸಂಚಾಲಕ ಡಾ. ಭಾಮೀ ವಿ. ಶೆಣೈ, ಸಾಹಿತಿ ಡಾ. ತಾರಿಣಿ ಚಿದಾನಂದ, ಹಿರಿಯ ವಿಜ್ಞಾನಿ ಡಾ. ಜಿ. ಪಾಂಡುರಂಗಮೂರ್ತಿ, ಕಲಾವಿದ ಆಜ್ಮಿ ಮೊಹಮ್ಮದ್ ಖಾನ್, ಎಂ. ಕಲ್ಪನ ಕುಟ್ಟಪ್ಪ, ಸ್ಥಳ: ಆರ್ಟ್ ಆಲ್ಟರ್‌ನೇಟಿವ್ ಸಂಸ್ಥೆ, ವಿ.ವಿ. ಮೊಹಲ್ಲಾ, ಬೆಳಗ್ಗೆ 11ಕ್ಕೆ.

■ **ಶ್ರೀ ನಿಮಿಷಾಂಬಾ ಡ್ಯಾನ್ಸ್ ಪ್ರಮೋಟರ್ಸ್** : ಹೆಜ್ಜೆ ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ, ವಿದ್ವಾನ್ ಶ್ರೀಧರ್ ಜೈನ್ ಅವರೊಂದಿಗೆ 350 ಕಲಾವಿದರಿಂದ ದೇವ–ದೇವಿ ವೈಭವ ನೃತ್ಯೋತ್ಸವ, ಉದ್ಘಾಟನೆ : ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಹೆಜ್ಜೆ ಗೆಜ್ಜೆ ಪುರಸ್ಕೃತರು : ವಿದ್ವಾನ್ ಸುಧೀರ್ ವಿದುಷಿ ಮಾನಸಿ ಸುಧೀರ್, ಡಾ. ಸಂಜಯ್ ಶಾಂತಾರಾಂ, ದಿಲೀಪ್‌ರಾಜ್ ಶ್ರೀ ವಿದ್ಯಾರಾಜ್, ಸನ್ಮಾನ : ಎಸ್. ಬಾಲಾಜಿ, ಹರ್ಷ, ಟಿ.ವಿ. ವೆಂಕಟೇಶ್, ರಾಜೇಶ್ ಜೈನ್, ಡಾ. ಆರ್.ಬಸವರಾಜ್, ಡಾ. ಹೆಚ್.ಆರ್. ಸಂಜಯ್, ಡಾ. ಎಂ.ವಿ. ಗಿರೀಶ್‌ಕುಮಾರ್, ಉಪಸ್ಥಿತರು : ಸಂಗೀತ ನಿರ್ದೇಶಕ ಗುರುಕಿರಣ್, ಸ್ಥಳ: ಪ್ಲಾಟಿನಂ ಜ್ಯೂಬಿಲಿ ಹಾಲ್, ಜೆ.ಕೆ. ಮೈದಾನ, ಸಂಜೆ 5ಕ್ಕೆ.

■ **ನೃತ್ಯ ವಿದ್ಯಾಪೀಠ** : ಕು. ವಿದುಷಿ ಎಂ.ಎಸ್. ಅಮೃತ ಅವರಿಂದ ನೃತ್ಯಾಮೃತ, ಗುರುವಂದನಾಪೂರ್ವಕ ಭರತನಾಟ್ಯ ರಂಗ ಪ್ರವೇಶ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಆರ್ಟ್ ಗ್ಯಾಲರಿ ಕಾರ್ಯದರ್ಶಿ ಡಾ. ಜಮುನಾರಾಣಿ ವಿ. ಮಿರ್ಲೆ, ಗುರು ವಂದನಂ : ಗುರು ವಿದುಷಿ ಸಿ.ಎನ್. ಅನಿತಾ, ಗುರು ವಿದುಷಿ ಅನುಷಾ ನಿರ್ಮಲಾ, ಪಕ್ಕವಾದ್ಯ : ಗುರು ವಿದುಷಿ ಸಿ.ಎನ್. ಅನಿತಾ–ನಟುವಾಂಗ, ವಿದ್ವಾನ್ ರಾಖೇಶ್ ಸುಧೀರ್–ಗಾಯನ, ವಿದ್ವಾನ್ ಕಲಾಮಂಡಲಮ್ ಹರಿದೇವ್ –ಮೃದಂಗ, ಅಂಕುಶ್ ಎಸ್. ಕಡಬ–ಕೊಳಲು, ಸ್ಥಳ: ಕಿರು ರಂಗಮಂದಿರ, ಸಂಜೆ 5.30ಕ್ಕೆ

■ **ರಂಗಾಂತರಂಗ, ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ಗಾಂಧಿನಗರ** : ಮಕ್ಕಳ ರಂಗ ತರಬೇತಿ, ಉಪಸ್ಥಿತರು : ಅಂಬೇಡ್ಕರ್ ಸಂಶೋಧನಾ ಸಂಸ್ಥೆ ಸಲಹೆಗಾರ ಬಸವರಾಜ್ ದೇವನೂರು, ಡಾ. ಎಸ್. ತುಕಾರಾಮ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಎನ್. ಮುನಿರಾಜು, ಕೆ. ಸಿದ್ದಲಿಂಗು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಪಿ. ಲಂಕೇಶ್‌ರವರ ಕಥೆ ಆಧಾರಿತ ಮುಟ್ಟಿಸಿಕೊಂಡವನು ನಾಟಕ ಪ್ರದರ್ಶನ, ನಿರ್ದೇಶನ : ಕೆ.ಎಂ. ಕೀರ್ತಿರಾಜ್, ಸ್ಥಳ: ಹರಳಯ್ಯ ರಂಗಮಂದಿರ, ಗಾಂಧಿನಗರ, ಸಂಜೆ 4.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ** : ಹಬೀಬ್ ತನ್ವೀರ್ ರಚಿಸಿರುವ ಮಂಡ್ಯ ರಮೇಶ್ ನಿರ್ದೇಶನದ ಚೋರ ಚರಣದಾಸ ನಾಟಕ ಪ್ರದರ್ಶನ, ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ** : ಸುಪ್ರಸಿದ್ಧ ಪ್ರವಚನಕಾರರಾದ ಪಂಡಿತ್ ಶ್ರೀ ಶ್ರೀನಿಧಿ ಆಚಾರ್ಯ ಜಮನಿಸ್ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ–15 ಕುರಿತು ಪ್ರವಚನ, ಸ್ಥಳ: ಉತ್ತರಾದಿ ಮಠ, ಸಂಜೆ 6.30 ರಿಂದ.

■ **ಅಷ್ಟಾಂಗಯೋಗವಿಜ್ಞಾನ ಮಂದಿರಂ** : ಕೆ. ಸುದರ್ಶನ್ ಅವರಿಂದ ಆತ್ಮಗುಣಗಳು ಕುರಿತು ಪ್ರವಚನ, ಸ್ಥಳ:ಅಷ್ಟಾಂಗಯೋಗವಿಜ್ಞಾನ ಮಂದಿರಂ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ.

ಚಿಕ್ಕಲ್ಲೂರು, ಕೊಳ್ಳೇಗಾಲ ತಾಲೂಕು

■ **ಬೋಧಿ ಪ್ರಕಾಶನ** : ಡಾ. ಲಕ್ಷ್ಮಣ ಕೌಂಟೆ ಬರೆದಿರುವ ಧರೆಯ ತಂದವರು ಕೃತಿ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಸಾಹಿತಿ ಪ್ರೊ. ಹೆಚ್.ಎಸ್. ಶಿವಪ್ರಕಾಶ್, ಉಪಸ್ಥಿತರು : ಶ್ರೀ ಮಂಟೇಸ್ವಾಮಿ ಮಠದ ಮಠಾಧಿಪತಿ ಶ್ರೀ ಜ್ಞಾನಾನಂದ ಚನ್ನರಾಜೇ ಅರಸ್, ಶಾಸಕರಾದ ಎಂ.ಆರ್. ಮಂಜುನಾಥ್, ಎ.ಆರ್. ಕೃಷ್ಣಮೂರ್ತಿ, ಪುಟ್ಟರಂಗಶೆಟ್ಟಿ, ಅಧ್ಯಕ್ಷತೆ : ಮಹಾದೇವ ಶಂಕನಪುರ, ಸ್ಥಳ: ಹಳೇಮಠ ಹಿಂಭಾಗದ ತೋಪು, ಚಿಕ್ಕಲ್ಲೂರು, ಕೊಳ್ಳೇಗಾಲ ತಾ., ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ– ಸೈಬರ್ ಮಿತ್ರ, ಸೈಬರ್ ಸುರಕ್ಷೆ:ವಾರದ ಮಾತು, ಪ್ರಸ್ತುತಿ–ಸತೀಶ್ ವಿ. ಪ್ರಾಯೋಜಕರು cybermitra.in ಮೈಸೂರು, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಡಾ. ಟಿ.ವಿ. ಸತ್ಯನಾರಾಯಣ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ – ಬಹುರೋಗ ನಿವಾರಕ ಅಮೃತ ಬಳ್ಳಿ ಕುರಿತು ಡಾ. ಮಧುಮಾಲತಿ ಬಿ.ವಿ. ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ –ಮೈಸೂರಿನ ಸದ್ವಿದ್ಯಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕೀ ಬಾತ್–ದೇಶದ ಜನತೆಯನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕೀ ಬಾತ್–ದೇಶದ ಜನತೆಯನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ : 12.30 ದೇವರನಾಮ–ವೃಂದಗಾನ, ಮಾಧವಗುಡಿ, 12.45 ಜನಪದ ಸಂಗೀತ–ಚಿನ್ನಮ್ಮ ಹಾಗೂ ಸಂಗಡಿಗರಿಂದ ಜೋಗುಳ ಪದ, 1.20 ಭಾವಗೀತೆ – ರಮಾ ರಾಮಕೃಷ್ಣ, 4.00 ಯಕ್ಷಗಾನ ತಾಳ ಮದ್ದಲೆ–ಸಂಪೂರ್ಣ ಮಹಾಭಾರತ ಸರಣಿ ಪ್ರಸಂಗ– ಕರ್ಣ ಪಟ್ಟಾಭಿಷೇಕ ಪ್ರಸ್ತುತಿ–ಕೆ.ಎ. ಪದ್ಮನಾಭ ಪೂಜಾರಿ ಮತ್ತು ಬಳಗ, ಕಾಸರಗೊಡು, 6.50 ಕೃಷಿರಂಗ–ಪಶುರಂಗ –ನಾಟಕ "ಎಚ್ಚರ, ಇದು ರೇಬಿಸ್" ರಚನೆ–ಡಾ. ಕೆ.ಎಂ. ನಾಗರಾಜ್ ಹಾಗೂ ಡಾ. ಡಿ. ಶಶಿಧರ್ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, ರೇಬೀಸ್ ಕುರಿತು ಮಾತನಾಡುತ್ತಾರೆ ಪಶುವೈದ್ಯರಾದ ವೈ.ಡಿ.ರಾಜಣ್ಣ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಪಂಡಿತ್ ನಿಶೀಂದ್ರ ಕಿಂಜಾಲ್ಕ್–ಸಿತಾರ್ ವಾದನ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 28 ಭಾನುವಾರ 2024

ಸಂಪುಟ: 44 | ಸಂಚಿಕೆ: 280 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಹಳೆ ಬೇರು ಹೊಸ ಚಿಗುರು ಕೂಡಿದರೆ ಗೆಲುವು ನಿಶ್ಚಿತ!

● ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹೊಸ ಫಾರ್ಮುಲಾ ● ಕೇಂದ್ರ ಸಚಿವ ಭೂಪೇಂದ್ರ ಯಾದವ್ ಸಮ್ಮುಖದಲ್ಲಿ ರಾಜ್ಯ ಕಾರ್ಯಕಾರಿಣಿಯಲ್ಲಿ ಕಾರ್ಯತಂತ್ರ ● ಕಳೆದ ವಿಧಾನಸಭೆ ಚುನಾವಣೆ ಸೋಲಿನಿಂದ ಎಚ್ಚೆತ್ತಿರುವ ಕಮಲ ಪಾಳಯ



ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಬಿಜೆಪಿ ರಾಜ್ಯ ವಿಶೇಷ ಕಾರ್ಯಕಾರಿಣಿ ಸಭೆಯನ್ನು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಉದ್ಘಾಟಿಸಿದರು. ಚಿತ್ರದಲ್ಲಿ ಮಾಜಿ ಸಿಎಂ ಯಡಿಯೂರಪ್ಪ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇನ್ನಿತರರಿದ್ದಾರೆ.

ಬೆಂಗಳೂರು, ಜ.27(ಕೆಎಂಶಿ)– ಕಿರಿಯರ ಜೊತೆ ಹಿರಿಯರನ್ನು ಕೈಜೋಡಿಸಿಕೊಂಡು ಮುಂಬರುವ ಲೋಕಸಭಾ ಚುನಾವಣೆ ಎದುರಿಸಲು ಬಿಜೆಪಿ ನಿರ್ಣಯಿಸಿದೆ.

ಕೇಂದ್ರ ಸಚಿವ ಭೂಪೇಂದ್ರ ಯಾದವ್ ಸಮ್ಮುಖದಲ್ಲಿ ನಗರದ ಅರಮನೆ ಮೈದಾನದಲ್ಲಿ ನಡೆದ ಬಿಜೆಪಿ ರಾಜ್ಯ ವಿಶೇಷ ಕಾರ್ಯಕಾರಿಣಿ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿರುವುದಲ್ಲದೆ, 28 ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೊಡುಗೆ ನೀಡಲು ನಿರ್ಣಯಿಸಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಆದ ಲೋಪಗಳನ್ನು ಸರಿಪಡಿಸಿಕೊಂಡು ಎನ್‌ಡಿಎ ಮೈತ್ರಿಕೂಟ ಸೇರಿರುವ ಜೆಡಿಎಸ್ ಜೊತೆ ಒಗ್ಗಟ್ಟಿನಿಂದ ಚುನಾವಣೆಗೆ ಈಗಿನಿಂದಲೇ ಶ್ರಮಿಸಲು ತೀರ್ಮಾನಿಸಲಾಗಿದೆ. ಕರಾವಳಿ, ಮಲೆನಾಡು, ಮುಂಬೈ ಹಾಗೂ ಹೈದರಾಬಾದ್ ಕರ್ನಾಟಕ ಭಾಗದಲ್ಲಿ ನಮಗಿರುವ ಶಕ್ತಿಯನ್ನು ಮತ್ತಷ್ಟು ಬಲಪಡಿಸಿಕೊಳ್ಳಬೇಕು. ಜೆಡಿಎಸ್ ಪ್ರಾಬಲ್ಯವಿರುವ ಕಡೆಗಳಲ್ಲಿ ನಾವು ಅವರಿಗೆ ಹೊರಗಿನಿಂದ ಬಲ ಕೊಟ್ಟು ಈ ಬಾರಿ 28 ಕ್ಷೇತ್ರಗಳನ್ನು ಗೆಲ್ಲಲೇಬೇಕು. ವಿಧಾನಸಭೆ ಚುನಾವಣೆಯಲ್ಲಿ ಹಿರಿಯರನ್ನು ಕಡೆಗಣಿಸಿದ್ದು, ಮತ್ತು ನಮ್ಮಲ್ಲಿನ ಗುಂಪುಗಾರಿಕೆಯಿಂದ ಕಾಂಗ್ರೆಸ್ ಅಧಿಕಾರಕ್ಕೆ ● 9ನೇ ಪುಟಕ್ಕೆ

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ 400 ಸೀಟುಗಳು ಖಚಿತ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ 400 ಸೀಟುಗಳು ಸಿಗೋದು ಖಚಿತ. ಮತ್ತೆ ಮೋದಿಯವರು ಪ್ರಧಾನಿ ಆಗುವುದು ನಿಶ್ಚಿತ ಎಂದು ಕೇಂದ್ರ ಸಚಿವ ಭೂಪೇಂದ್ರ ಯಾದವ್ ವಿಶ್ವಾಸ ವ್ಯಕ್ತಪಡಿಸಿದರು. ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತಾಡಿದ ಭೂಪೇಂದ್ರ ಯಾದವ್, ರಾಜ್ಯ ಸರ್ಕಾರದಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ. ಕೇಂದ್ರದಿಂದ ಅನೇಕ ಅನುದಾನಗಳು, ಜಿಎಸ್‌ಟಿ ಬಾಕಿ ಬಂದರೂ ಅಭಿವೃದ್ಧಿ ಶೂನ್ಯ. ಗ್ಯಾರಂಟಿ ಹೆಸರಿನಲ್ಲಿ ಸುಳ್ಳು ಹೇಳಿಕೊಂಡು ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಜನರಿಗೆ ವಂಚಿಸುತ್ತಿದೆ ಎಂದು ಆರೋಪಿಸಿದರು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯದ 28 ಕ್ಷೇತದಲ್ಲೂ ಜಯಿಸಲಿದೆ. ಬಳಿಕ ರಾಜ್ಯದಲ್ಲಿ ಕಮಲ ಅರಳುವುದು ಗ್ಯಾರಂಟಿ. ● 9ನೇ ಪುಟಕ್ಕೆ

ಮೈಸೂರು ಲಲಿತಮಹಲ್ ಪ್ಯಾಲೇಸ್ ಪುನಶ್ಚೇತನಕ್ಕೆ ಶೀಘ್ರವೇ ಟೆಂಡರ್

ಮೈಸೂರಿನಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಮಾಹಿತಿ

● ಅಂದಾಜು 40 ಕೋಟಿ ವೆಚ್ಚ ● ಫ್ಯಾನ್ಸಿ ವಸ್ತುಗಳ ಬಳಕೆ ● ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆ ಇಲ್ಲ





ಮೈಸೂರು, ಜ.27(ಬಿಎಲ್‌ಯು)– ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಪುನಶ್ಚೇತನಗೊಳಿಸಲು ಶೀಘ್ರವೇ ಟೆಂಡರ್ ಕರೆಯಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ಕಲಾ ಕಾಲೇಜ್‌ನಲ್ಲಿ ಇಂದು ಪತ್ರಕರ್ತರೊಡನೆ ಮಾತನಾಡಿದ ಅವರು, ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಪುನಶ್ಚೇತನಕ್ಕೆ ಸುಮಾರು 30 ರಿಂದ 40 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ ಎಂದು ಹೇಳಿದರು. ಪುನಶ್ಚೇತನ ವೇಳೆ ಬಹಳಷ್ಟು ಫ್ಯಾನ್ಸಿ ವಸ್ತುಗಳನ್ನು ಬಳಸಬೇಕಿದೆ. ಇದರಿಂದ ಪುನಶ್ಚೇತನ ವೆಚ್ಚ ಹೆಚ್ಚಾಗಲೂಬಹುದು. ಆದರೆ ಎಲ್ಲಾ ಕಾರ್ಯ ಮುಗಿದ ನಂತರ ಅಂತಿಮ ವೆಚ್ಚ ಎಷ್ಟಾಗಲಿದೆ ಎಂದು ತಿಳಿಯಲಿದೆ ಎಂದರು. ಪಾರಂಪರಿಕ ಶೈಲಿಯ ● 9ನೇ ಪುಟಕ್ಕೆ

ಮೈಸೂರಿನ ಹಳೆ ಡಿಸಿ ಕಚೇರಿ ಮ್ಯೂಸಿಯಂ ಆಗಿ ಮಾರ್ಪಾಡು

ಪಾರಂಪರಿಕ ಶೈಲಿಯಲ್ಲಿರುವ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯನ್ನು ಪುರಾತತ್ವ ವಸ್ತುಗಳ ಮ್ಯೂಸಿಯಂ ಆಗಿ ಮಾರ್ಪಡಿಸಲು ಸರ್ಕಾರದ ಮುಂದೆ



ಪ್ರಸ್ತಾಪ ಇಡಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದರು. ಮೈಸೂರಿನಲ್ಲಿ ಪ್ರಾಚ್ಯ ವಸ್ತುಗಳ ದೊಡ್ಡ ಖಜಾನೆಯೇ ಇದೆ. ಎಲ್ಲಾ ವಸ್ತುಗಳನ್ನು ಬಳಸಿಕೊಂಡು ಅದ್ಭುತವಾದ ಮ್ಯೂಸಿಯಂ ನಿರ್ಮಾಣ ಮಾಡಬಹುದು ಎಂದರು. ● 9ನೇ ಪುಟಕ್ಕೆ

ಮೈಸೂರು ಅರಮನೆಯಲ್ಲಿ ಪ್ರತಿದಿನ ವಿಶಿಷ್ಟ ಸಂಗೀತ ಕಾರ್ಯಕ್ರಮ



ದೇಶ ವಿದೇಶದ ಪ್ರವಾಸಿಗರು ಮೈಸೂರು ನಗರದಲ್ಲಿ ಕನಿಷ್ಠ ಒಂದು ದಿನವಾದರೂ ವಾಸ್ತವ್ಯ ಹೂಡುವಂತೆ ಮಾಡಲು ಮೈಸೂರು ಅರಮನೆಯಲ್ಲಿ ಪ್ರತಿ ದಿನ ವಿಶಿಷ್ಟ ಸಂಗೀತ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದರು.


ದೇಶ–ವಿದೇಶದಿಂದ ಬರುವ ಬಹಳಷ್ಟು ಪ್ರವಾಸಿಗರು ಬೆಳಿಗ್ಗೆಯಿಂದ ಸಂಜೆ ತನಕ ಮೈಸೂರಿನ ಪ್ರವಾಸಿ ತಾಣಗಳನ್ನು ವೀಕ್ಷಣೆ ಮಾಡಿ ರಾತ್ರಿ ವೇಳೆ ಬೇರೆ ಕಡೆ ಹೋಗುತ್ತಿದ್ದು, ಮೈಸೂರಿನಲ್ಲಿ ● 9ನೇ ಪುಟಕ್ಕೆ

ಇಂದು ನಿತೀಶ್ ಕುಮಾರ್ ಸಿಎಂ ಸ್ಥಾನಕ್ಕೆ ರಾಜೀನಾಮೆ ಸಾಧ್ಯತೆ



ಬಿಹಾರ: ಬಿಹಾರದಲ್ಲಿ ರಾಜಕೀಯ ಅನಿಶ್ಚಿತತೆ ಮುಂದುವರೆದಿದ್ದು, ನಿತೀಶ್‌ಕುಮಾರ್ ನಾಳೆ ಬೆಳಗ್ಗೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆಯಿದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ಈ ಬಗ್ಗೆ ಯಾವುದೇ ಅಧಿಕೃತ ಹೇಳಿಕೆಗಳು ಹೊರಬಿದ್ದಿಲ್ಲ. ನಿತೀಶ್ ಕುಮಾರ್ ಇಂದೇ ರಾಜೀನಾಮೆ ನೀಡುತ್ತಾರೆ ಎಂದು ಹೇಳಲಾಗಿತ್ತು. ಆದರೆ, ಎಲ್ಲಾ ಜೆಡಿಯು ಶಾಸಕರು ಬೆಂಬಲ ಪತ್ರ ನೀಡದ ಹಿನ್ನೆಲೆಯಲ್ಲಿ ವಿಳಂಬವಾಗಿದ್ದು, ಭಾನುವಾರ ಬೆಳಗ್ಗೆ ಖಂಡಿತವಾಗಿಯೂ ● 9ನೇ ಪುಟಕ್ಕೆ

ರಾಹುಲ್ ಗಾಂಧಿ ವಯನಾಡಿನಿಂದಲೇ ಸ್ಪರ್ಧೆ



ಕೋಝಿಕ್ಕೋಡು: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ವಯನಾಡ್ ಕ್ಷೇತ್ರದಿಂದಲೇ ಸ್ಪರ್ಧಿಸಲಿದ್ದಾರೆ ಎಂದು ಕಾಂಗ್ರೆಸ್ ಸಂಸದ ಕೆ. ಮುರಳೀಧರನ್ ಹೇಳಿದ್ದಾರೆ. ಕಣ್ಣೂರು ಹೊರತುಪಡಿಸಿ ಕೇರಳದ ಎಲ್ಲಾ ಹಾಲಿ ಸಂಸದರು ಅದೇ ಕ್ಷೇತ್ರದಿಂದ ಸ್ಪರ್ಧಿಸುವ ನಿರೀಕ್ಷೆಯಿದೆ ಎಂದು ಮುರಳೀಧರ್ ಹೇಳಿದ್ದಾರೆ. ರಾಹುಲ್ ಗಾಂಧಿಯವರು ವಯನಾಡಿನಿಂದ ಸ್ಪರ್ಧಿಸುತ್ತಾರೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಅವರು ಕೋಝಿಕ್ಕೋಡ್‌ನಲ್ಲಿ ಸುದ್ದಿಗಾರರಿಗೆ ತಿಳಿಸಿದರು. 2019ರ ಲೋಕಸಭೆ ಚುನಾವಣೆಯಲ್ಲಿ ವಯನಾಡ್ ಕ್ಷೇತ್ರದಿಂದ ರಾಹುಲ್‌ಗಾಂಧಿ ಆಯ್ಕೆಯಾಗಿ ಬಂದಿದ್ದರು. ಮುರಳೀಧರನ್ ಇಂಡಿಯಾ ಮೈತ್ರಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲ ಎಂದರು. ಕೇರಳ ಮತ್ತು ಪಂಜಾಬ್‌ನಂತಹ ಕೆಲವು ರಾಜ್ಯಗಳಲ್ಲಿ ಮೈತ್ರಿಕೂಟದ ಸದಸ್ಯರ ನಡುವೆ ಸ್ಪರ್ಧೆಗಳು ನಡೆಯು ತ್ತವೆ, ಆದರೆ ಮತ ವಿಭಜನೆಯಿಂದ ಬಿಜೆಪಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದರು.

ಬಿ.ವೈ.ರಾಘವೇಂದ್ರರನ್ನು ಮತ್ತೊಮ್ಮೆ ಗೆಲ್ಲಿಸಿ

ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪರ ಈ ಹೇಳಿಕೆಯಿಂದ ಕಂಗೆಟ್ಟ ಕಾಂಗ್ರೆಸ್

ಶಿವಮೊಗ್ಗ: ಯಡಿಯೂರಪ್ಪ ಪುತ್ರ ಬಿವೈ ರಾಘವೇಂದ್ರರನ್ನು ಮತ್ತೊಮ್ಮೆ ಗೆಲ್ಲಿಸಿ ಎಂದು ಕಾಂಗ್ರೆಸ್ ಹಿರಿಯ ನಾಯಕ ದಾವಣಗೆರೆ ದಕ್ಷಿಣ ಕ್ಷೇತ್ರ ಶಾಸಕ, ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ. ಬೆಕ್ಕಿನಕಲ್ಮಠದಲ್ಲಿ ಜಗದ್ಗುರು ಶ್ರೀ ಗುರುಬಸವ ಸ್ವಾಮೀಜಿಗಳ 112ನೇ ಪುಣ್ಯ ಸ್ಮರಣೋತ್ಸವ ಪ್ರಯುಕ್ತ ಶುಕ್ರವಾರ ಆಯೋಜಿಸಿದ್ದ ಭಾವೈಕ್ಯ ಸಮ್ಮೇಳನ ಹಾಗೂ ಗುರುಬಸವಶ್ರೀ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಶಾಮನೂರು ಶಿವಶಂಕರಪ್ಪ ಅವರು, ರಾಘವೇಂದ್ರ ಅವರಂತಹ ಸಂಸತ್ ಸದಸ್ಯರನ್ನು ಪಡೆದ ನೀವೇ ಧನ್ಯರು. ಏಕೆಂದರೆ ತಮ್ಮ ಕ್ಷೇತ್ರದಲ್ಲಿ ಯಾವ ಕೆಲಸಗಳಾಗಬೇಕೆಂದು ನೋಡಿಕೊಂಡು ಆ ಎಲ್ಲವನ್ನು ತಮ್ಮ ಕೈಯಿಂದ ಆಗದೇ ಇದ್ದರೂ ಸಹ ಆಗುವಂತಹ ರೀತಿಯಲ್ಲಿ ಕೆಲಸಗಳನ್ನು ಮಾಡಿ ತೋರಿಸಿಕೊಟ್ಟ ಧೀಮಂತ ನಾಯಕ ಎಂದರೆ ತಪ್ಪಾಗಲಾರದು ಎಂದರು. ● 7ನೇ ಪುಟಕ್ಕೆ





ಶಾಮನೂರು ಶಿವಶಂಕರಪ್ಪ ಬಿ.ವೈ.ರಾಘವೇಂದ್ರ

ಡಿಸಿಎಂ ಡಿಕೆಶಿ ಸಿಡಿಮಿಡಿ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸಂಸದ ಬಿವೈ ರಾಘವೇಂದ್ರ ಗೆಲ್ಲಬೇಕು ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಹೇಳಿರುವುದಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಕೋಪಗೊಂಡಿದ್ದಾರೆ. ಶಾಮನೂರು ಹೇಳಿಕೆಗೆ ತಿರುಗೇಟು ನೀಡಿದ ಅವರು, ಶಿವಮೊಗ್ಗದಲ್ಲಿ ಮುಂದಿನ ಚುನಾವಣೆಯಲ್ಲಿ ಗೆಲ್ಲುವುದು ಕಾಂಗ್ರೆಸ್ ಎಂದಿದ್ದಾರೆ. ಶಾಮನೂರು ಶಿವಶಂಕರಪ್ಪ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ಪ್ರಧಾನಿ ಮೋದಿ ಉತ್ತಮ ಕೆಲಸ ಮಾಡಿದ್ದಾರೆ. ● 7ನೇ ಪುಟಕ್ಕೆ

ಡಿಸಿಎಂ ಡಿಕೆಶಿ ಭೇಟಿಯಾದ ರೇವಣ್ಣ ಪುತ್ರ ಸೂರಜ್

● ಗೌಡರ ಮನೆಯಲ್ಲಿ ಮಾತ್ರವಲ್ಲ, ಜೆಡಿಎಸ್‌ನಲ್ಲಿ ಭಾರೀ ಸದ್ದು ● ಹಾಸನದಲ್ಲಿ ಪ್ರಜ್ವಲ್ ರೇವಣ್ಣ ಬದಲು ಪರ್ಯಾಯ ಅಭ್ಯರ್ಥಿಗೆ ಕುಮಾರಸ್ವಾಮಿ ಶೋಧ? ● ಎಲ್ಲಾ ವಿಚಾರದಲ್ಲೂ ಮಾಜಿ ಸಿಎಂ ಕುಮಾರಸ್ವಾಮಿ ತಮ್ಮನ್ನು ಕಡೆಗಣಿಸುತ್ತಿರುವ ಬಗ್ಗೆ ಬೇಸರ ● ಡಿಕೆಶಿಯೊಂದಿಗೆ ಗೌಪ್ಯ ಮಾತುಕತೆ; ಚರ್ಚೆ ವೇಳೆ ಯಾರನ್ನೂ ಹತ್ತಿರ ಸುಳಿಯಗೊಡದ ಉಪ ಮುಖ್ಯಮಂತ್ರಿ ಆಸಕ್ತಿ!

ಬೆಂಗಳೂರು, ಜ.27(ಕೆಎಂಶಿ)–ಹಾಸನ ಲೋಕಸಭಾ ಕ್ಷೇತ್ರದಿಂದ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜೆಡಿಎಸ್ ಟಿಕೆಟ್ ತಪ್ಪಬಹುದು ಎಂಬ ಹಿನ್ನಲೆಯಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ಕುಟುಂಬ ಕಾಂಗ್ರೆಸ್ ಬಾಗಿಲು ತಟ್ಟಿದೆ.

ಹಠಾತ್ ಬೆಳವಣಿಗೆಯಲ್ಲಿ ರೇವಣ್ಣ ಅವರ ಹಿರಿಯ ಪುತ್ರ ಡಾ.ಸೂರಜ್ ರೇವಣ್ಣ ಅವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅವರ ಸರ್ಕಾರಿ ನಿವಾಸದಲ್ಲಿ ಭೇಟಿ ಮಾಡಿ, ಗೌಪ್ಯ ಮಾತುಕತೆ ನಡೆಸಿದ್ದಾರೆ. ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಕಾಂಗ್ರೆಸ್ ತೊರೆದ ನಂತರ ಕಿಡಿಕಾರಿದ್ದ ಶಿವಕುಮಾರ್, ನಾವು ಕೈ ಹಾಕಿದರೆ ಎಲ್ಲರ ಮನೆ ಖಾಲಿಯಾಗುತ್ತವೆ ಎಂಬ ಹೇಳಿಕೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ. ಜೆಡಿಎಸ್, ಎನ್‌ಡಿಎ ಮೈತ್ರಿಕೂಟ ಸೇರಿದ ನಂತರ ಬಿಜೆಪಿ ಜತೆಗೂಡಿ ಲೋಕಸಭಾ ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದ್ದು, ಸಮೀಕ್ಷಾ ವರದಿಯಂತೆ ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಪರ್ಯಾಯ ಅಭ್ಯರ್ಥಿ ಕಣಕ್ಕಿಳಿಸಲು ಗಮನಹರಿಸಿದ್ದಾರೆ. ಆದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರಜ್ವಲ್ ರೇವಣ್ಣ ಅವರೇ ಅಭ್ಯರ್ಥಿ ಎಂದು ಪದೇ ಪದೆ ಹೇಳಿದ್ದರೂ ರೇವಣ್ಣ ಅವರ ಕುಟುಂಬಕ್ಕೆ ವಿಶ್ವಾಸ ಮೂಡುತ್ತಿಲ್ಲ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಹಾಸನ ವಿಧಾನಸಭಾ ಕ್ಷೇತ್ರದಿಂದ ರೇವಣ್ಣ ಮತ್ತು ಅವರ ಕುಟುಂಬದವರು ಭವಾನಿ ರೇವಣ್ಣ ಅವರನ್ನು ಕಣಕ್ಕಿಳಿಸಲು ಭಾರೀ ಕಸರತ್ತು ನಡೆಸಿದ್ದರು. ಆದರೆ, ತಾವು ಹಿಡಿದ ಹಠದಂತೆ ಕುಮಾರಸ್ವಾಮಿ ಅವರು, ಕಾರ್ಯಕರ್ತನಿಗೆ ● 9ನೇ ಪುಟಕ್ಕೆ



ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಪುತ್ರ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನ ಕುಮಾರ್ ಪಾರ್ಕ್ ಸರ್ಕಾರಿ ನಿವಾಸದಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ನಕ್ಕರೆ ಅದೇ ಸ್ವರ್ಗ

ಗಂಡ : ಲೇ, ಸಿನಿಮಾದ ಅಂತಿಮ ದೃಶ್ಯ ಹೃದಯಸ್ಪರ್ಶಿಯಾಗಿತ್ತು. ನನಗಂತೂ ಅಳು ತಡೆಯೋಕೆ ಆಗಲಿಲ್ಲ. ನಿಂಗೆ ಅಳು ಬರಲಿಲ್ಲವಾ?

ಹೆಂಡತಿ : ನಂಗೂ ಅಳು ಬಂತೂರಿ! ಆದರೆ ಮೇಕಪ್ ಹಾಳಾಗಿ ಬಿಡುತ್ತದೇಂತ ಅಳಲಿಲ್ಲ ಅಷ್ಟೇ.

ಮೈಸೂರು ಮಿತ್ರ
ಭಾನುವಾರ, 28 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡುವುದರಿಂದ ಮಾತ್ರ ತನ್ನ ಒಳ್ಳೆಯದನ್ನು ಸಾಧಿಸಬಹುದು – ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ { ಕಷ್ಟವಿಲ್ಲದೆ
ಗಾದೆ ಸುಳ್ಳಾಗದು { ಇಷ್ಟ ಈಡೇರದು

ನಿಮ್ಮ ಪತ್ರಗಳು

ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದನ್ನು ನಿಷೇದಿಸಬೇಕಿದೆ!

ಮಾನ್ಯರೆ,

2024ನೇ ಲೋಕಸಭಾ ಚುನಾವಣೆಗಳು ಮುಂಬರುವ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ನಡೆಯುವ ಹಿನ್ನೆಲೆಯಲ್ಲಿ ರಾಜಕಾರಣಿಗಳು ಚುನಾವಣೆಯ ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸುವುದನ್ನು ತಡೆಯಲು ಕಾನೂನಿಗೆ ತಿದ್ದುಪಡಿ ತರುವುದು ಅವಶ್ಯಕವಾಗಿದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಚುನಾವಣಾ ಕಾನೂನಿನ ಪ್ರಕಾರ ಯಾವುದೇ ಅಭ್ಯರ್ಥಿಯು ಸಾರ್ವತ್ರಿಕ ಚುನಾವಣೆ ಅಥವಾ ಉಪ ಚುನಾವಣೆಗಳಲ್ಲಿ ಎರಡು ವಿಭಿನ್ನ ಕ್ಷೇತ್ರಗಳಿಂದ ಸ್ಪರ್ಧಿಸಲು ಅನುಮತಿಸಲಾಗಿದೆ. ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸ್ಥಾನಗಳಿಂದ ಚುನಾಯಿತರಾದರೆ, ಆ ವ್ಯಕ್ತಿಯು ತಾನು ಗೆದ್ದ ಸ್ಥಾನಗಳಲ್ಲಿ ಒಂದನ್ನು ಮಾತ್ರ ಉಳಿಸಿಕೊಳ್ಳಬಹುದಾಗಿದೆ.

ಅಭ್ಯರ್ಥಿಯು ಎರಡು ಸ್ಥಾನಗಳಿಂದ ಸ್ಪರ್ಧಿಸಿ, ಎರಡನ್ನೂ ಗೆದ್ದರೆ ಒಂದನ್ನು ತೆರವು ಮಾಡಬೇಕಾಗುತ್ತದೆ. ಇದರಿಂದಾಗಿ ಸಾರ್ವಜನಿಕ ಬೊಕ್ಕಸಕ್ಕೆ ಆರ್ಥಿಕ ಹೊರೆ ಉಂಟಾಗುತ್ತದೆ. ಜೊತೆಗೆ ಮಾನವ ಸಂಪನ್ಮೂಲ, ಇತರ ಸಂಪನ್ಮೂಲಗಳು ವ್ಯಯವಾಗುತ್ತವೆ. ಅಲ್ಲದೇ ಕ್ಷೇತ್ರ ತೊರೆದು ಉಪ ಚುನಾವಣೆಗೆ ಕಾರಣವಾಗುವುದು ಕ್ಷೇತ್ರದ ಮತದಾರರಿಗೆ ಮಾಡಿದ ಅನ್ಯಾಯವೂ ಹೌದು. ಒಂದು ವೇಳೆ ಅಸ್ತಿತ್ವದಲ್ಲಿರುವ ನಿಬಂಧನೆಗಳನ್ನೇ ಉಳಿಸಿಕೊಳ್ಳುವುದಾದರೆ, ಎರಡು ಸ್ಥಾನಗಳಿಂದ ಸ್ಪರ್ಧಿಸಿ, ಎರಡರಲ್ಲೂ ಗೆಲ್ಲುವ ಅಭ್ಯರ್ಥಿ, ತಾನು ತೆರವು ಮಾಡುವ ಸ್ಥಾನದ ಉಪ ಚುನಾವಣೆಯ ವೆಚ್ಚವನ್ನು ಭರಿಸಬೇಕು ಎಂಬ ಕಠಿಣ ನಿರ್ಧಾರವನ್ನು ಮಾಡಬೇಕಿದೆ.

ಈಗಿರುವ ಜನಪ್ರತಿನಿಧಿ ಕಾಯಿದೆಗೆ ಸೂಕ್ತ ತಿದ್ದುಪಡಿ ಹಾಗೂ ಮಾರ್ಪಾಡುಗಳನ್ನು ತರುವುದು ಅವಶ್ಯಕವಾಗಿದೆ. ಏಕೆಂದರೆ ಸಾರ್ವಜನಿಕ ವಲಯದಲ್ಲಿ ಇದು ಹೆಚ್ಚು ಹೆಚ್ಚು ಚರ್ಚಿತವಾದಲ್ಲಿ ಶಾಸಕಾಂಗವೂ ಇದಕ್ಕೆ ಸಮ್ಮತಿಸಬಹುದು. ಸಾರ್ವಜನಿಕರು ಎಲ್ಲವನ್ನೂ ಮೌನವಾಗಿ ಸಹಿಸುತ್ತಾರೆ ಎಂಬ ಭಾವ, ಆಳುವ ಮಂದಿಗೆ ಬಾರದಿರಲು ಇಂತಹ ಚರ್ಚೆ, ಒತ್ತಾಸೆಗಳು ಅನಿವಾರ್ಯ. ಸುಶಿಕ್ಷಿತ ವರ್ಗ ಇಂತಹ ವಿಷಯಗಳಲ್ಲಿ ಸಕ್ರಿಯವಾಗಿ ಧ್ವನಿ ಎತ್ತಿದರೆ ಅಪೇಕ್ಷಿತ ಬದಲಾವಣೆಗಳು ಕಂಡು ಬಂದೀತು. ಹಾಗೆಯೇ ಈ ಬಗ್ಗೆ ಪ್ರಜ್ಞಾವಂತ ನಾಗರಿಕರೆಲ್ಲರೂ ದನಿ ಎತ್ತಬೇಕಾಗಿದೆ. ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆಯಾಗಬೇಕಿದೆ. ಈಗಿನ ಲೋಕಸಭಾ ಚುನಾವಣೆಯ ಸುಸಂದರ್ಭದಲ್ಲಿ ಒಬ್ಬ ವ್ಯಕ್ತಿ ಒಂದು ಬಾರಿಗೆ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಸ್ಪರ್ಧಿಸುವುದನ್ನು ತಡೆಯಲು ಸರ್ಕಾರ ಹಾಗೂ ಚುನಾವಣಾ ಆಯೋಗ ಮುಂದಾಗಬೇಕಿರುವುದು ಅವಶ್ಯಕ ಹಾಗೂ ಅನಿವಾರ್ಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಶೀಘ್ರ ರಸ್ತೆ ಕಾಮಗಾರಿ ಪೂರ್ಣಗೊಳಿಸಿ

ಮಾನ್ಯರೆ,



ಮೈಸೂರಿನ ನಜರ್‌ಬಾದ್‌ನ ಮುರುಘಾದೇವಿ ದೇವಸ್ಥಾನದ ರಸ್ತೆಯನ್ನು ಕಾಂಕ್ರೀಟ್ ರಸ್ತೆ ಮಾಡುವ ನೆಪದಲ್ಲಿ ಒಂದು ತಿಂಗಳ ಹಿಂದೆ ಅಗೆಯಲಾಗಿದೆ. ಇದರಿಂದಾಗಿ ಮೋರಿಗಳು ತುಂಬಿಕೊಂಡು ನೀರು ಸರಾಗವಾಗಿ ಹರಿಯದಂತಾಗಿದೆ. ಟೆಂಡರ್ ಪಡೆದ ಗುತ್ತಿಗೆದಾರರ ಜಾಣದಿಂದ ಅಗೆದ ಡಾಂಬರ್ ರಸ್ತೆಯ ಕಸವನ್ನು ಮತ್ತು JCB ವಾಹನವನ್ನು ರಸ್ತೆ ಮಧ್ಯ ದಲ್ಲೇ ಬಿಟ್ಟಿದ್ದಾರೆ. ಇದರಿಂದ ಇಲ್ಲಿನ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಅಲ್ಲದೆ ವಾಹನ ಸವಾರರಿಗೆ ತುಂಬಾ ಕಿರಿಕಿರಿ ಉಂಟಾಗುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ರಸ್ತೆ ಕಾಮಗಾರಿ ಪೂರ್ಣಗೊಳಿಸಬೇಕೆಂದು ಮನವಿ.

– ನೊಂದ ನಿವಾಸಿಗಳು, ಮೈಸೂರು.

ರಾಮ ಮಂದಿರ ರಾಷ್ಟದ ಮಂದಿರವಾಗಲಿ

ಮಾನ್ಯರೆ,

ಜನವರಿ 22 ರಂದು ನಿರ್ಮಾಣವಾದ ರಾಮಮಂದಿರ ಭಾರತದ ಅಸ್ಮಿತೆಯ ಪ್ರತೀಕವಾಗಿದ್ದು, ಕೋಟ್ಯಾಂತರ ರಾಮ ಭಕ್ತರಿಗೆ ತೀರ್ಥ ಕ್ಷೇತ್ರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ರಾಮಮಂದಿರ ಸಂಪೂರ್ಣ ಭಾರತೀಯರ ಆಸ್ತಿಯಾಗಬೇಕು. ಅಯೋಧ್ಯೆ ಜಗತ್ತಿನ ಪ್ರಮುಖ ತೀರ್ಥ ಕ್ಷೇತ್ರದ ಜೊತೆಗೆ ಪ್ರಸಿದ್ಧ ಪ್ರವಾಸಿತಾಣವಾಗುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿದ್ದು, ಮಂದಿರ ನಿರ್ಮಾಣದ ಸಮಯದಲ್ಲಿ ಸುಮಾರು ಇಪ್ಪತ್ತು ಸಾವಿರ ಜನರಿಗೆ ಉದ್ಯೋಗ ದೊರಕಿದ್ದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಪ್ರಸುತ್ತ ರಾಮ ಮಂದಿರ ನಿರ್ಮಾಣವಾಗಿದ್ದು ಉತ್ತರ ಪ್ರದೇಶ ಸೇರಿದಂತೆ ಭಾರತಕ್ಕೆ ದೇಶ ವಿದೇಶಗಳಿಂದ ಪ್ರವಾಸಿಗರು, ಭಕ್ತರು ಬರುವಂತಾಗುವ ಮೂಲಕ ಭಾರತೀಯ ಪ್ರವಾಸೋದ್ಯಮಕ್ಕೆ ಉತ್ತೇಜನ ದೊರಕುವಂತಾಗಬೇಕು. ಕೊರೊನಾ ಮುಂಚೆ ಪ್ರವಾಸೋದ್ಯಮವು 16ಲಕ್ಷ ಕೋಟಿಯಷ್ಟು ಆದಾಯವನ್ನು ಭಾರತದ ಜಿಡಿಪಿಗೆ ನೀಡುತ್ತಿತ್ತು ,ಅಂದಾಜಿನ ಪ್ರಕಾರ ಧಾರ್ಮಿಕ ಪ್ರವಾಸೋದ್ಯಮದ ಅಭಿವೃದ್ಧಿಯಿಂದಾಗಿ 2033 ರಲ್ಲಿ ಪ್ರವಾಸೋದ್ಯಮದ ಆದಾಯ 36ಲಕ್ಷ ಕೋಟಿಯಾಗುವ ಲಕ್ಷಣಗಳಿದ್ದು ಇದಕ್ಕೆ ಅಯೋಧ್ಯೆಯ ರಾಮ ಮಂದಿರದ ಕೊಡುಗೆ ಬಹುದೊಡ್ಡದಾಗಿದೆ.

85 ಸಾವಿರ ಕೋಟಿ ವೆಚ್ಚದಲ್ಲಿ ಅಯೋಧ್ಯೆಯ ನಗರದಲ್ಲಿ ಅಭಿವೃದ್ಧಿ ಕಾರ್ಯ ಮಾಡಲಾಗಿದ್ದು, ದೇಶದ ಎಲ್ಲಾ ನಗರಗಳಿಂದ ಅಯೋಧ್ಯೆಯನ್ನು ಸಂಪರ್ಕಿಸಲು ಬೇಕಾದ ವಿಮಾನ, ರೈಲು ಮತ್ತು ರಸ್ತೆಯ ನಿರ್ಮಾಣಕ್ಕೆ ಆದ್ಯತೆ ನೀಡುವ ಮೂಲಕ ಪ್ರವಾಸೋದ್ಯಮವನ್ನು ಉತ್ತೇಜಿಸಬಹುದಾಗಿದೆ. ಅಂಕಿ ಅಂಶಗಳು ಪ್ರಕಾರ ಪ್ರತಿ ವರ್ಷ ಅಯೋಧ್ಯೆಗೆ 5 ಕೋಟಿ ಪ್ರವಾಸಿಗರು ಬರುವ ನಿರೀಕ್ಷೆಯಿದ್ದು, ಇದು ಜಗತ್ತಿನ ಇತರೆ ಧಾರ್ಮಿಕ ಸ್ಥಳಗಳಿಗೆ ಬೇಟಿ ನಿಡುವ ಪ್ರವಾಸಿಗರಿಗಿಂತ ಹೆಚ್ಚಾಗುತ್ತದೆ.

ಭಾರತದ ಪ್ರಸಿದ್ಧ ಧಾರ್ಮಿಕ ಸ್ಥಳಗಳಾದ ತಿರುಪತಿಗೆ ವಾರ್ಷಿಕವಾಗಿ 2.5–3 ಕೋಟಿ ಪ್ರವಾಸಿಗರು ಮತ್ತು ಸ್ವರ್ಣ ಮಂದಿರಕ್ಕೆ 3–3.5 ಕೋಟಿ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಉಳಿದಂತೆ ಜಾಗತಿಕವಾಗಿ ವ್ಯಾಟಿಕನ್ ಸಿಟಿಗೆ 90 ಲಕ್ಷ ಪ್ರವಾಸಿಗರು ಬೇಟಿ ನೀಡುತ್ತಾರೆ. ಈ ಮೂಲಕ ಅಯೋಧ್ಯೆ ಜಗತ್ತಿನಲ್ಲಿ ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಸ್ಥಳವಾಗಲಿದ್ದು, ಪ್ರವಾಸೋದ್ಯಮಕ್ಕೆ ಬೇಕಾಗುವ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗಗಳು ಸೃಷ್ಟಿಯಾಗಲೆಂದು ಆಶಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಏನೇ ಮಾಡು; ನಿಷ್ಠೆಯಿಂದ ಮಾಡು!

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ, ಕೆಲಸದ ಮೂಲ ಉದ್ದೇಶವನ್ನು ಈ ಕೀರ್ತನೆ ಸಾರಿದರೂ ಪ್ರತಿಯೊಬ್ಬರೂ ಇದರಲ್ಲಿ ಭಾಗಿಳಾಗಿ ತಮ್ಮ ಇರುವಂತಿಕೆಯ ಭಾವವನ್ನು ವ್ಯಕ್ತಪಡಿಸುತ್ತಲೇ ಇರುತ್ತಾರೆ. ಉದ್ಯೋಗ ಎಂಬುದು ನಮ್ಮ ಬದುಕಿನ ನಡಿಗೆಯನ್ನು ತಿಳಿಸುವ ಕ್ರಿಯಾಶೀಲ ಚಟುವಟಿಕೆ. ಈ ಕ್ರಿಯಾಶೀಲತೆಯು ಒಬ್ಬ ವ್ಯಕ್ತಿಯನ್ನು ಚೈತನ್ಯ ಶಕ್ತಿಯಾಗಿಸುತ್ತದೆ. ದೇಹದ ಒಳಗಿನ ಪ್ರತಿಯೊಂದು ಅಂಗಗಳು ಪ್ರತಿ ಕ್ಷಣವೂ ಕ್ರಿಯೆಯಲ್ಲಿಯೇ ಮಗ್ನವಾಗಿರುತ್ತವೆ, ಅಂತೆಯೇ ನಮ್ಮ ಲೌಕಿಕ ಬದುಕು ಉತ್ತಮವಾಗಿ ಸಾಗಬೇಕಾದರೆ ಒಂದಲ್ಲ ಒಂದು ಬಗೆಯ ಕೆಲಸಕ್ಕೆ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು ಎಂದ ಮಾತ್ರಕ್ಕೆ ಅದನ್ನು ಪ್ರತಿಷ್ಠೆಯ ಗುರುತಾಗಿಸಿಕೊಳ್ಳದೆ ಜೀವನ ನಿರ್ವಹಣೆಯ ಹೆದ್ದಾರಿ, ಮಾರ್ಗ ಎಂಬ ಮನಸ್ಥಿತಿ ಪ್ರತಿಯೊಬ್ಬರಲ್ಲಿ ಪಡಿಯಚ್ಚಾಗಿರಬೇಕು. ಈ ನಿಟ್ಟಿನಲ್ಲಿ ಈ ಲೇಖನ ಪ್ರತಿಯೊಬ್ಬರನ್ನೂ ಜಾಗೃತಗೊಳಿಸುವ ಬರಹವಾಗಿದೆ.

ಕೆಲಸ ಮಾಡೋಕೆ ಅಂತಾನೇ ಬದುಕಬೇಕಾ? ಬದುಕಬೇಕು ಅಂತ ಕೆಲಸ ಮಾಡಬೇಕಾ? ಗೆಳೆಯನೊಬ್ಬನ ತರ್ಕದ ಪ್ರಶ್ನೆ ಕ್ಷಣಕಾಲ ಚಿಂತೆಗೀಡುಮಾಡುವಂತೆ ಮಾಡಿತು. ಅವನ ಈ ತರ್ಕದ ಪ್ರಶ್ನೆಯ ಹಿಂದೆ ಅವನು ಮಾಡುತ್ತಿದ್ದ ಕೆಲಸದ ಬಗ್ಗೆ ಒತ್ತಡ, ಬೇಸರವು ಚಿಗುರೊಡೆದದ್ದೇ ಕಾರಣವಾಗಿತ್ತು.


ಗೆಳೆಯನ ಈ ಮಾತು ಕೇಳಿ ಆಶ್ಚರ್ಯವಾಯಿತು. ಯಾಕೆಂದರೆ ಅವನು ಒಳ್ಳೆಯ ಕೆಲಸದಲ್ಲಿ ಇದ್ದಾನೆ, ಕೈ ತುಂಬಾ ಸಂಬಳ, ನೆಮ್ಮದಿಯಾಗಿದ್ದಾನೆ ಎಂದು ಮಾತನಾಡಿಕೊಳ್ಳುತ್ತಿದ್ದ ನಮಗೆ ಅವನ ಈ ನಿರ್ಲಕ್ಷ್ಯದ ಮಾತುಗಳು ಸೋಜಿಗವೆನಿಸಿದವು. ಅವನಿಗೆ ಅವನ ಕೆಲಸಕ್ಕಿಂತ ಉಳಿದವರ ಕೆಲಸವೇ ಶ್ರೇಷ್ಠ ಎಂದೆನಿಸಿತ್ತು. ಇದು ನಮ್ಮ ಗೆಳೆಯನೊಬ್ಬನ ಸಮಸ್ಯೆ ಅಲ್ಲ, ಬಹುತೇಕ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕರು ಹೇಳುವ ಸಾಮಾನ್ಯ ದೂರು.

ಜೀವನವನ್ನು ನಡೆಸಲು ಉದ್ಯೋಗದ ಅವಶ್ಯಕತೆ ಪ್ರತಿಯೊಬ್ಬರಿಗೂ ಇದ್ದೇ ಇರುತ್ತದೆ. ಮೊದಲೆಲ್ಲ ಉದ್ಯೋಗಂ ಪುರುಷ ಲಕ್ಷಣಂ ಎಂಬ ನಾಣ್ನುಡಿ ಜಾರಿಯಲ್ಲಿತ್ತು, ಆದರೆ ಈಗ ಹೆಂಗಸರು ಕೂಡ ದುಡಿಯಲು ಆರಂಭಿಸಿರುವುದರಿಂದ ಉದ್ಯೋಗ ಮಾಡಲು ಭೇದ–ಭಾವ ಇಲ್ಲವಾಗಿದೆ. ಅವರವರ ಅರ್ಹತೆಗೆ ತಕ್ಕಂತೆ ಕೆಲವೊಮ್ಮೆ ಕೆಲಸ ಸಿಗದೇ, ಕೆಲವೊಮ್ಮೆ ಸಿಕ್ಕರು ಅದರಲ್ಲಿ ಸಂತೋಷವಿಲ್ಲದೆ ಹೇಗೋ ಮಾಡಲು ಕೆಲಸ ಇದ್ದರೆ ಸಾಕು ಎಂಬಂತಹ ಮನಸ್ಥಿತಿ ಉಳ್ಳವರು ಎಲ್ಲೆಡೆಯು ಕಂಡುಬರುತ್ತಾರೆ.

ಕೆಲಸ ಎಂಬುದು ಹೊರೆ ಅನ್ನಿಸಿಕೊಳ್ಳದೇ ಇರಬೇಕಾದರೆ ಕೆಲವು ನಿಯಮಗಳನ್ನು ಪಾಲಿಸಬೇಕೆಂಬುದು ನನ್ನ ಅಭಿಮತ.

ಶ್ರದ್ಧೆ: ಮಾಡುವ ಕೆಲಸ ಯಾವುದಾದರೇನು ಮೊದಲು ನಮಗಿರಬೇಕಾಗಿದ್ದು ಶ್ರದ್ಧೆ. ಅಯ್ಯೋ ಹೋಗಿ ಸರ್ ಶ್ರದ್ಧೆ–ಗಿದ್ದೆ ಎಲ್ಲ ಯಾರಿಗೆ ಬೇಕು, ಏನೋ ಕೆಲಸ ಮಾಡಿದ್ರೆ ಸಾಕು ಎಂಬ ಮನೋಭಾವ ಮೊದಲು ತೊಲಗಬೇಕು. ನಾವು ಮಾಡುವ ಕೆಲಸ ಅದು ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ ಅದರ ಬಗ್ಗೆ ಮೊದಲು ನಮ್ಮಲ್ಲಿ ಶ್ರದ್ಧೆ ಇದ್ದರೆ ಆ ಕೆಲಸದಲ್ಲಿ ನಾವು ಅರ್ಧ ಯಶಸ್ವಿಯಾದಂತೆ ಸರಿ. ಉದಾಹರಣೆಗೆ: ನಾನು ಕಸಗುಡಿಸುವ ಕೆಲಸ ಮಾಡುವೆ ಎಂದು ಭಾವಿಸಿದರೆ ಆ ಕೆಲಸದಲ್ಲಿ ಮೊದಲಿಗೆ ನನಗೆ ಶ್ರದ್ಧೆ ಇರಬೇಕು. ಮಾಡುವ ಕೆಲಸದಲ್ಲಿ ತನ್ಮಯತೆ ಇರಬೇಕು. ಇವನಂತೆ ಇನ್ನೊಬ್ಬ ಕಸ ಗುಡಿಸಲು ಆಗಲಾರದು ಅಂತ ಇಲ್ಲದಿದ್ದರೂ ತುಂಬಾ ಅಚ್ಚುಕಟ್ಟಾಗಿ ತನ್ನ ಕೆಲಸವನ್ನು ಮಾಡುತ್ತಿದ್ದ ಎಂದು ನಾಲ್ಕಾರು ಜನರಾದರೂ ಮೆಚ್ಚುವಂತೆ ಕೆಲಸವನ್ನು ಮಾಡುವ ರೂಢಿ ಬೆಳೆಸಿಕೊಳ್ಳಬೇಕು. ನೀವು ವಕೀಲರಾಗಿ, ವೈದ್ಯರಾಗಿ, ಅಭಿಯಂತರರಾಗಿ, ರೈತರಾಗಿ, ಶಿಕ್ಷಕರಾಗಿ, ಹೋಟೆಲ್ ಕೆಲಸಗಾರರಾಗಿ ಏನೇ ಆದರೂ ಮೊದಲು ನೀವು ಮಾಡುವ ನಿಮ್ಮ ವೃತ್ತಿಯನ್ನು ಗೌರವಿಸಿ, ಆ ವೃತ್ತಿಯ ಬಗ್ಗೆ ಶ್ರದ್ಧೆ ಇಟ್ಟು ಕೆಲಸ ಮಾಡುವ ಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ ನಾವು ಯಶಸ್ವಿಯಾಗಲು ಸಾಧ್ಯ.

ಪ್ರಾಮಾಣಿಕತೆ: ಯಾವ ವೃತ್ತಿಯು ಕೀಳಲ್ಲ,ಯಾವ ವೃತ್ತಿಯು ಮೇಲಲ್ಲ. ಕೆಲವೊಮ್ಮೆ ಅರ್ಹತೆಗಳಿದ್ದರೂ ತಕ್ಕ ಉದ್ಯೋಗ ಸಿಗದೆ ಸಿಕ್ಕ ಉದ್ಯೋಗದಲ್ಲೇ ಬೇಸರದಿಂದ ಕಾಲಕಳೆಯುವ ಸಾಧ್ಯತೆಗಳಿರುತ್ತದೆ. ಚಿಂತೆ ಪಡಬೇಕಾಗಿಲ್ಲ ಯಾವ ಕೆಲಸ ಸಿಕ್ಕರೂ ಆ ಕೆಲಸವನ್ನು ಮಾಡುತ್ತಾ ಇರಿ, ಆದರೆ ನಿಮ್ಮಲ್ಲಿರುವ ಪ್ರಾಮಾಣಿಕತೆಯನ್ನು ಮರೆಯದಿರಿ. ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದಲ್ಲಿ ಖಂಡಿತವಾಗಿಯು ಅದು ಎಂದಿಗೂ ನಿಮಗೆ ಹಾನಿಯನ್ನುಂಟು ಮಾಡುವುದಿಲ್ಲ. ಬಹುಶಃ ಈಗಿನ ಕಾಲದಲ್ಲಿ ಪ್ರಾಮಾಣಿಕತೆಯಿಂದ ಇದ್ದರೆ ಬೆಲೆ ಇಲ್ಲ , ಪ್ರಾಮಾಣಿಕತೆ, ಸತ್ಯ ಇವೆಲ್ಲಾ ಓದೋಕೆ ಮಾತ್ರ ಚೆಂದ ಅನ್ವಯ ಮಾಡಿಕೊಳ್ಳಲು ಆಗೊಲ್ಲ ಎಂಬಂತಹ ಉತ್ತರಗಳನ್ನು ಕೆಲವರು ನೀಡಬಹುದು. ನಿಜ ಬದಲಾಗುತ್ತಿರುವ ಆಧುನಿಕತೆಯಲ್ಲಿ ಕೆಲವು ಮೌಲ್ಯಗಳಿಗೆ ದೊರಕಬಹುದಾದ ಮನ್ನಣೆ ಸಿಗದಿರಬಹುದು. ಆದರೆ ಖಂಡಿತವಾಗಿಯೂ ಒಂದಲ್ಲ ಒಂದು ದಿನ ತಕ್ಕ ಮನ್ನಣೆ ಸಿಕ್ಕೇ ಸಿಗುತ್ತದೆ. ಉದಾಹರಣೆಗೆ: ಸತ್ಯ ಹರಿಶ್ಚಂದ್ರನ ಕಾಲದಲ್ಲಿ ಅವನನ್ನು ಜನ ಒಂದೇ ಒಂದು ಸುಳ್ಳು ತಾನೇ ಹೇಳಬಹುದು, ಹೇಳಿದ್ರೆ ಸ್ಮಶಾನ ಕಾಯೋದು ತಪ್ಪಿ ಹೋಗುತ್ತಾ ಇತ್ತು, ಹೆಂಡತಿ ಮಕ್ಕಳನ್ನು ಮಾರಿಕೊಳ್ಳುವ ಪರಿಸ್ಥಿತಿ ಬರ್ತಾ ಇರಲಿಲ್ಲ ಎಂಬಿತ್ಯಾದಿಯಾಗಿ ಆಡಿಕೊಂಡಿರಲೂಬಹುದು. ಆದರೆ ಅವನು ತನ್ನ ಪ್ರಾಮಾಣಿಕತೆಯನ್ನು ಎಷ್ಟೇ ಕಷ್ಟಬಂದರೂ ಬಿಡದ ಕಾರಣದಿಂದಾಗಿಯೇ ಇಂದಿಗೂ ಜೀವಂತವಾಗಿದ್ದಾನೆ.



> ಬಹುಶಃ ಇಡೀ ವಿಶ್ವದಲ್ಲಿ ಯಾವಾಗಲೂ ಚಿಂತೆಯಲ್ಲಿ ಕಾಲ ಕಳೆಯುವ ಪ್ರಾಣಿ ಎಂದರೆ ಅದು ಮನುಷ್ಯ ಎಂದು ಹೇಳಬಹುದು. ಜೀವನ ನಡೆಸಲು ಒಂದು ಉದ್ಯೋಗ ಬೇಕು. ಆದರೆ ಸಿಕ್ಕ ಉದ್ಯೋಗದಲ್ಲಿ ಸಂತೃಪ್ತಿ ಇಲ್ಲದೇ ಅಯ್ಯೋ ಇದು ಒಂದು ಕೆಲಸನಾ? ಇದನ್ನ ನಾನು ಮಾಡಬೇಕಾ? ಅಂತ ಗೊಣಗಿಕೊಂಡು ಕೆಲಸ ಮಾಡುವವರನ್ನು ಎಚ್ಚರಿಸುವಂತಿದೆ ಈ ಕಗ್ಗ. ಇಂದಿನ ಬಹುಪಾಲು ಜನರಲ್ಲಿ ಈ ಮನೋಭಾವ ಇದೆ. ಖಾಸಗಿ ಉದ್ಯೋಗದಲ್ಲಿ ಇದ್ರೆ ಸರ್ಕಾರಿ ಕೆಲಸ ಬೇಕೆಂದು ಸರ್ಕಾರಿ ಕೆಲಸದಲ್ಲಿ ಇದ್ದರೆ ಬೇರೆ ವಿಭಾಗದಲ್ಲಿ ಇರಬೇಕೆಂದು ಪರಿತಪಿಸುವ ಜನರೇ ಹೆಚ್ಚಾಗಿ ಕಂಡು ಬರುತ್ತಾರೆ.

ಇದು ಸತ್ಯಕ್ಕೆ, ಪ್ರಾಮಾಣಿಕತೆಗೆ ಎಂದಿಗೂ ಸಿಗಬಹುದಾದ ಮನ್ನಣೆ. ಮಾಡುವುದು ಸಣ್ಣ ಕೆಲಸವಾಗಿದ್ದರೂ ಯೋಚಿಸಬೇಕಿಲ್ಲ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಳ್ಳಿ ಆಗ ನಿಜಕ್ಕೂ ಪ್ರತಿಫಲ ದೊರಕಬಲ್ಲದು.

ಸಂಬಳಕ್ಕಾಗಿ ಕೆಲಸ ಮಾಡಬೇಡಿ: ಬಹುಶಃ ಈ ಅಂಶವನ್ನು ನೋಡಿ ನಗು ಬರಬಹುದು. ಸಂಬಳಕ್ಕೆ ಕೆಲಸ ಮಾಡದೇ ಮತ್ಯಾವುದಕ್ಕೆ ಕೆಲಸ ಮಾಡಬೇಕು ಎಂಬ ಪ್ರಶ್ನೆ ಉದ್ಭವಿಸಬಹುದು. ಉತ್ತರ ಬಲು ಸುಲಭ, ನಾವು ಎಲ್ಲಿಯವರೆಗೆ ಸಂಬಳಕ್ಕಾಗಿ ಕೆಲಸ ಮಾಡುತ್ತೇವೆಯೋ ಅಲ್ಲಿಯವರೆಗೆ ನಮ್ಮ ಸ್ಥಿತಿ, ಪರಿಸ್ಥಿತಿ ಬದಲಾಗದು. ನಿಂತಲ್ಲೇ ನಿಲ್ಲುವ ನೀರಿನಂತಾಗುತ್ತದೆ ನಮ್ಮ ಬದುಕು. ಸಂಬಳ ಕೊಡ್ತಾರೆ, ಕೆಲಸ ಮಾಡಬೇಕು ಅನ್ನುವ ಮನೋಭಾವ ಮರೆಯಾಗಿ ಹೊಸದನ್ನು ಕಲಿಯುವೆ, ನನ್ನ ಸಾಮರ್ಥ್ಯಕ್ಕೆ ತಕ್ಕ ಸವಾಲುಗಳನ್ನು ಸ್ವೀಕರಿಸಿಕೊಳ್ಳುವೆ ಎಂಬ ಮನೋಭಾವ ಬಂದಾಗ ಮಾತ್ರ ನಾವು ಬೆಳೆಯಲು ಸಾಧ್ಯ. ಸದಾ ಕಲಿಯುವಂತಹ ಮನೋಭಾವ, ಏನೇ ಸವಾಲುಗಳು ಬಂದರೂ ಎದುರಿಸಿ ನಿಲ್ಲುವ ಚೈತನ್ಯ ನಮ್ಮಲ್ಲಿ ಬಂದಾಗ ಮಾತ್ರ ಮಾಡುವ ಕೆಲಸದಲ್ಲಿ ಯಶಸ್ವಿಯಾಗಲು ಸಾಧ್ಯ. ಇಲ್ಲದಿದ್ದರೆ ಗಂಟೆ ಹೊಡಿ, ಸಂಬಳ ಪಡಿ ಎಂಬ ನಾಣ್ಣುಡಿಯಂತೆ ನಿಂತ ನೀರಾಗಿ ಯಾವುದಕ್ಕೂ ಉಪಯೋಗಕ್ಕೆ ಬರದಂತಾಗುತ್ತೇವೆ.

ಬದಲಾಗುವ ವಿದ್ಯಾಮಾನಗಳಿಗೆ ತಕ್ಕಂತೆ ನೀವು ಬದಲಾಗಿ: ಕತ್ತಿ ಅಥವಾ ಚಾಕುವನ್ನು ಬಳಸಿದಂತೆಲ್ಲ ಅದು ಅದರ ಹರಿತವನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ. ಅದನ್ನು ಸಾಣೆ ಹಿಡಿಯುವ ಮೂಲಕ ಮತ್ತಷ್ಟು ಹರಿತವಾಗುವಂತೆ ಮಾಡಿ ಉಪಯೋಗಿಸುವುದು ಬುದ್ಧಿವಂತಿಕೆಯ ಲಕ್ಷಣ. ಇದು ನಮ್ಮ ಜೀವನದಲ್ಲಿಯೂ ಅನ್ವಯವಾಗಬೇಕು. ಆಧುನಿಕತೆ ಬೆಳೆದಂತೆ, ನವೀನ ಮಾದರಿಯ ವಿದ್ಯಮಾನಗಳಿಗೆ ತಕ್ಕಂತೆ ನಮ್ಮನ್ನು ನಾವು ಮಾರ್ಪಡಿಸಿಕೊಳ್ಳಬೇಕು. ಆಗ ಮಾತ್ರ ನಮ್ಮ ಕೆಲಸದಲ್ಲಿ ಪರಿಪೂರ್ಣತೆ ಹೊಂದಲು ಸಾಧ್ಯ

ಉದಾಹರಣೆಗೆ ಮೊದಲು ಉಪಯೋಗಿಸುತ್ತಿದ್ದ ಜಂಗಮವಾಣಿಗೂ (ಮೊಬೈಲ್) ಈಗ ಉಪಯೋಗಿಸುತ್ತಿರುವ ಜಂಗಮವಾಣಿಗೂ ಅಜಗಜಾಂತರ ವ್ಯತ್ಯಾಸ ಇದೆ. ಹೊಸ ಮಾದರಿಯ ಮೊಬೈಲ್ ಗೆ ನಾವು ಕೂಡ ಹೊಂದಾಣಿಕೆ ಆಗುತ್ತಾ ಬಳಕೆ ಮಾಡುತ್ತಾ ಇರುವೆವು. ಹಾಗೆಯೇ ಬದಲಾಗುತ್ತಾ ಇರುವ ವಿದ್ಯಮಾನಗಳಿಗೆ ತಕ್ಕಂತೆ ನಮ್ಮನ್ನು ನಾವು ಬದಲಿಸಿಕೊಂಡಲ್ಲಿ ಕೆಲಸದಲ್ಲಿ ಪಕ್ವತೆ ಹೊಂದಬಹುದು. ಮೊದಲೆಲ್ಲ ಶಾಲೆಯ ತರಗತಿಗಳಲ್ಲಿ ಕಪ್ಪು ಹಲಗೆಯಲ್ಲಿ ಬೋಧನೆ ಮಾಡುತ್ತಿದ್ದರು. ಕಾಲ ಬದಲಾದಂತೆ ಹಸಿರು ಹಲಗೆ, ಇತ್ತೀಚೆಗಂತೂ ನವೀನ ಮಾದರಿಗಳನ್ನು (ಸ್ಮಾರ್ಟ್ ಕ್ಲಾಸ್ ರೂಂ) ಬೋಧನೆ ಮಾಡುತ್ತಿಲ್ಲವೇ ? ಹಾಗೆ ಕಾಲಕ್ಕೆ ತಕ್ಕಂತೆ ನಮ್ಮನ್ನು ನಾವು ಬದಲಿಸಿಕೊಳ್ಳಬೇಕು.

ಇಂದು ಕಠಿಣ ಕೆಲಸ (ಹಾರ್ಡ್ ವರ್ಕ್) ಮಾಡುವವರಿಗಿಂತ ಸರಾಗವಾಗಿ, ಸುಲಭವಾಗಿ ಜಾಣ್ಮೆಯ ಕೆಲಸ (ಸ್ಮಾರ್ಟ್ ವರ್ಕ್) ಮಾಡುವವರು ಬೇಕಾಗಿದ್ದಾರೆ. ಇದನ್ನು ಹೇಳುವಾಗ ಹಿಂದೊಮ್ಮೆ ಓದಿದ ಪ್ರಸಂಗವೊಂದು ನೆನಪಾಗುತ್ತದೆ.

ಪ್ರಸಂಗ: ಒಂದು ಚಿಕ್ಕ ರಸ್ತೆ ಲಾರಿಯವನೊಬ್ಬ ರಸ್ತೆಯ ಅಳತೆಯನ್ನು ಗಮನಿಸದೆ ರಸ್ತೆಗೆ ಬಂದು ಬಿಟ್ಟಿದ್ದಾನೆ. ಸೇತುವೆಯ ಅಡಿಯಲ್ಲಿ ಲಾರಿ ಸಿಕ್ಕಿಕೊಂಡಿದೆ. ಮುಂದೆಯೂ ಬರಲಾಗದೇ ಹಿಂದೆಯೂ ಹೋಗಲಾಗದ ಪರಿಸ್ಥಿತಿ. ಏನು ಮಾಡಬೇಕೆಂದು ತೋಚದೇ ಲಾರಿ ಚಾಲಕ ಸಂದಿಗ್ಧ ಪರಿಸ್ಥಿತಿಯಲ್ಲಿ ಒದ್ದಾಡುತ್ತಿರುವಾಗ ಅದೇ ರಸ್ತೆಯಲ್ಲಿ ಇವರನ್ನು ನೋಡಿದ ಶಾಲಾ ಬಾಲಕನೊಬ್ಬ ಏನಾಯಿತು ಅಂಕಲ್? ನನ್ನಿಂದ ಏನಾದರೂ ಸಹಾಯ ಮಾಡಬಹುದಾ? ಎಂದು ಸಹಜ ರೀತಿಯಲ್ಲಿ ಕೇಳಿದ ಪ್ರಶ್ನೆ ಚಾಲಕನಿಗೆ ಕೋಪ ತರಿಸುತ್ತದೆ. ಆದರೂ ವಾಸ್ತವವನ್ನು ಹೇಳಿದಾಗ ಆ ಬಾಲಕ ಅಷ್ಟೇನಾ ಅಂಕಲ್ ಇದು ಸುಲಭವಾಗಿ ಬಗೆಹರಿಯುತ್ತದೆ – ಲಾರಿಯ ಚಕ್ರಗಳ ಗಾಳಿಯನ್ನು ಸ್ವಲ್ಪ, ಸ್ವಲ್ಪ ತೆಗೆದು ಬಿಡಿ, ಆಗ ಎತ್ತರ ಕಡಿಮೆ ಆಗುತ್ತದೆ. ಮುಂದೆ ಗಾಳಿಯನ್ನು ತುಂಬಿಸಿಕೊಂಡು ಹೋಗಿ ಎಂದುತ್ತರ ನೀಡಿದನಂತೆ.

ಈ ಪ್ರಸಂಗ ನಿಜವಾಗಲೂ ನಡೆದಿತ್ತೇ? ಸಾಧ್ಯವೇ? ಎಂಬ ಪ್ರಾಯೋಗಿಕ ನೆಲೆಯ ಪ್ರಶ್ನೆಗಳ ಕಡೆಗೆ ಗಮನ ಕೊಡದೇ ಆ ಬಾಲಕ ಕೊಟ್ಟ ಉತ್ತರದ ಶೈಲಿಯನ್ನು ಅರ್ಥಮಾಡಿಕೊಂಡರೆ ನಿಜಕ್ಕೂ ಬದಲಾವಣೆಗೆ ನಮ್ಮನ್ನು ನಾವು ಒಳಪಡಿಸಿಕೊಳ್ಳುವುದು ಎಷ್ಟರಮಟ್ಟಿಗೆ ಮುಖ್ಯವಾಗುತ್ತದೆ ಎಂಬುದು ತಿಳಿಯುತ್ತದೆ.

ಮೇಲರಿಮೆ – ಕೀಳರಿಮೆ ಬಿಡಿ: ಕೆಲಸವನ್ನು ಮಾಡುವಾಗ ಈ ಕೆಲಸ ಶ್ರೇಷ್ಠ ಆ ಕೆಲಸ ಕನಿಷ್ಠ ಎಂಬ ಮನೋಭಾವ ನಮ್ಮಲ್ಲಿ ಅನೇಕರಲ್ಲಿ ಮನೆ ಮಾಡಿದೆ ಯಾವುದೇ ಕೆಲಸವಾದರೂ ಅದನ್ನು ಅಚ್ಚುಕಟ್ಟಾಗಿ ಮಾಡುವಂಥದ್ದು, ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ನಾನು ದೊಡ್ಡ ಹುದ್ದೆಯಲ್ಲಿರುವೆ; ಹಾಗಾಗಿ ನನ್ನ ಕೈ ಕೆಳಗಿರುವವರನ್ನು ನಿಕೃಷ್ಟವಾಗಿ ನೋಡುವೆ ಎಂಬಂತಹ ಮೇಲರಿಮೆಯಾಗಲಿ, ಅಯ್ಯೋ ನಾನು ಮಾಡ್ತಾ ಇರೋ ಕೆಲಸ ಹೇಳಿಕೊಳ್ಳಲು ಸಂಕೋಚವಾಗುತ್ತದೆ ಎಂಬ ಕೀಳರಿಮೆಯಾಗಲಿ ನಮ್ಮಲ್ಲಿ ಇರಬಾರದು ಏಕೆಂದರೆ ಪ್ರತಿಯೊಂದು ಕೆಲಸಕ್ಕೂ ಅದರದೇ ಆದ ಮಹತ್ವ ಇರುತ್ತದೆ ಉದಾಹರಣೆಗೆ: ಬ್ಲೇಡ್ ಇಂದ ಗಡ್ಡ ಕತ್ತರಿಸಬಹುದೇ ವಿನಃ ಮರ ಕತ್ತರಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ಗರಗಸದಿಂದ ಮರ ಕತ್ತರಿಸಬಹುದೇ ವಿನಃ ಗಡ್ಡ ಕತ್ತರಿಸಲು ಸಾಧ್ಯವಿಲ್ಲ. ವಾಸ್ತವ ಹೀಗಿರುವಾಗ ಗಡ್ಡ ಕತ್ತರಿಸಲು ಆಗೊಲ್ಲ ಅಂತ ಗರಗಸನೇ ವ್ಯರ್ಥ ಅಂದರೆ ಹೇಗೆ? ಅಥವಾ ಮರ ಕತ್ತರಿಸಲು ಆಗೊಲ್ಲ ಅಂದರೆ ಬ್ಲೇಡ್ ಗೆ ಸಾಮರ್ಥ್ಯ ಇಲ್ಲ ಅದು ವ್ಯರ್ಥ ಎಂದರೆ ಅದು ಎಷ್ಟರ ಮಟ್ಟಿಗೆ ಸರಿ! ಅದರದರ ಸಾಮರ್ಥ್ಯ ಅದಕ್ಕಿರುತ್ತದೆ. ಯಾವುದನ್ನು ಕೂಡ ಕಡೆಗಣಿಸಬಾರದು.ಹಾಗೆಯೇ ನಮ್ಮಉದ್ಯೋಗವನ್ನು ಸಹ ಅದು ಸಣ್ಣ ಹುದ್ದೆಯಾದರೂ,ದೊಡ್ಡ ಹುದ್ದೆಯಾದರೂ ಮೇಲರಿಮೆ – ಕೀಳರಿಮೆ ಮಾಡಿಕೊಳ್ಳುವ ಅಗತ್ಯ ಇಲ್ಲ.

ಹೋಲಿಕೆ ಮಾಡುವುದನ್ನು ಬಿಡಿ: ಹೋಲಿಕೆ ಯಾವುದಕ್ಕೆ ಮಾಡಬೇಕು, ಯಾವುದಕ್ಕೆ ಮಾಡಬಾರದು ಎಂಬುದನ್ನು ಮೊದಲು ತಿಳಿಯಬೇಕು. ನೋಡು ಅವನು ನನ್ನಷ್ಟೇ ಓದಿರುವವನು, ಒಂದೇ ಅಂಕ, ಅವನಿಗೆ ಅಷ್ಟು ಸುಲಭ ಕೆಲಸ, ನನಗೆ ಕಷ್ಟದ ಕೆಲಸ, ಅವನಿಗೆ ಸಂಬಳ ಜಾಸ್ತಿ, ನನಗೆ ಕಡಿಮೆ ಈ ತರಹದ ಹೋಲಿಕೆಗಳೇ ನಮ್ಮ ಕೆಲಸದ ಬಗ್ಗೆ ನಿರ್ಲಕ್ಷ್ಯ ಉಂಟಾಗಲು ಪ್ರಮುಖ ಕಾರಣ. ನಮ್ಮ ಕೆಲಸವನ್ನು ಬೇರೆಯವರ ಕೆಲಸದೊಂದಿಗೆ ಹೋಲಿಕೆ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಜ್ಞಾನ, ಕೌಶಲ್ಯ, ಬುದ್ಧಿ ಒಂದಲ್ಲ ಒಂದು ದಿನ ಉಪಯೋಗಕ್ಕೆ ಬರುತ್ತದೆ.ಹೋಲಿಕೆ ಸಲ್ಲದ ನಮ್ಮನ್ನು ಅಲ್ಪನನ್ನಾಗಿ ಮಾಡುತ್ತದೆ. ಆದ್ದರಿಂದ ಹೋಲಿಕೆ ಮಾಡಿಕೊಳ್ಳುವುದನ್ನು ಬಿಟ್ಟು ವಿಭಿನ್ನವಾಗಿ ಆಲೋಚಿಸುವುದನ್ನು ರೂಢಿಸಿಕೊಳ್ಳಿ. ಆಗ ನಾವು ಮಾಡುವ ಕೆಲಸದಲ್ಲಿ ಯಶಸ್ಸು ಬರುತ್ತದೆ.

ಇವೆಲ್ಲವನ್ನು ಚರ್ಚಿಸಿದ ನಂತರ ಡಿವಿಜಿ ಅವರು ಮಂಕುತಿಮ್ಮನ ಕಗ್ಗದಲ್ಲಿ ಹೇಳಿರುವ ಮುಕ್ತಕವೊಂದು ನೆನಪಿಗೆ ಬರುತ್ತದೆ.

**ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು?
ದೊರೆತುದು ಹಸಾದವೆಂದುಣ್ಣು ಗೊಣಗಿಡದೆ??
ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ?
ಹೊರಡು ಕರೆ ಬರಲ್ ಅಳದೆ? ಮಂಕುತಿಮ್ಮ**

ಬಹುಶಃ ಇಡೀ ವಿಶ್ವದಲ್ಲಿ ಯಾವಾಗಲೂ ಚಿಂತೆಯಲ್ಲಿ ಕಾಲ ಕಳೆಯುವ ಪ್ರಾಣಿ ಎಂದರೆ ಅದು ಮನುಷ್ಯ ಎಂದು ಹೇಳಬಹುದು. ಜೀವನ ನಡೆಸಲು ಒಂದು ಉದ್ಯೋಗ ಬೇಕು. ಆದರೆ ಸಿಕ್ಕ ಉದ್ಯೋಗದಲ್ಲಿ ಸಂತೃಪ್ತಿ ಇಲ್ಲದೇ ಅಯ್ಯೋ ಇದು ಒಂದು ಕೆಲಸನಾ? ಇದನ್ನ ನಾನು ಮಾಡಬೇಕಾ? ಅಂತ ಗೊಣಗಿಕೊಂಡು ಕೆಲಸ ಮಾಡುವವರನ್ನು ಎಚ್ಚರಿಸುವಂತಿದೆ ಈ ಕಗ್ಗ. ಇಂದಿನ ಬಹುಪಾಲು ಜನರಲ್ಲಿ ಈ ಮನೋಭಾವ ಇದೆ. ಖಾಸಗಿ ಉದ್ಯೋಗದಲ್ಲಿ ಇದ್ರೆ ಸರ್ಕಾರಿ ಕೆಲಸ ಬೇಕೆಂದು ಸರ್ಕಾರಿ ಕೆಲಸದಲ್ಲಿ ಇದ್ದರೆ ಬೇರೆ ವಿಭಾಗದಲ್ಲಿ ಇರಬೇಕೆಂದು ಪರಿತಪಿಸುವ ಜನರೇ ಹೆಚ್ಚಾಗಿ ಕಂಡು ಬರುತ್ತಾರೆ.

ಬೆಟ್ಟ ಹತ್ತಬೇಕು ಅಂದರೂ ಕೂಡ ಮೊದಲಿಗೆ ಸಣ್ಣ ಸಣ್ಣ ಮೆಟ್ಟಿಲುಗಳನ್ನು ಹತ್ತಿಯೇ ಮೇಲೆ ಏರಲು ಸಾಧ್ಯ. ಅದನ್ನೇ ಗುಂಡಪ್ಪ ಅವರು ಈ ರೀತಿ ಹೇಳಿದ್ದಾರೆ. "ಕೆಲಸ ಯಾವುದಾದರೂ ಸರಿ ಮನಸ್ಸಿಟ್ಟು ಮಾಡು, ಸಿಕ್ಕಿರುವುದನ್ನು ಪ್ರಸಾದ ಎಂದು ಸ್ವೀಕರಿಸು, ಪ್ರಪಂಚದ ವಾಸ್ತವತೆಗಳನ್ನು ಅರ್ಥಮಾಡಿಕೊಂಡು ಬದುಕು. ಹುಟ್ಟು ಉಚಿತ, ಸಾವು ಖಚಿತ ಎಂಬ ಸಾರ್ವಕಾಲಿಕ ಸತ್ಯವನ್ನು ನಂಬು ಕಾಲನ (ಯಮ) ಕರೆ ಬಂದಾಗ ಅಳದೇ ಹೊರಡು" ಎನ್ನುವ ಮೂಲಕ ಇರುವುದರಲ್ಲೇ ಸಂತೋಷವನ್ನು ಪಡೆಯುತ್ತಾ ವಾಸ್ತವತೆಯನ್ನು ಅರ್ಥಮಾಡಿಕೊಂಡು ಜೀವನ ನಡೆಸು ಎಂದು ತಿಳಿಸಿದ್ದಾರೆ.

ಈ ಮುಕ್ತಕದ ಸಾರವನ್ನು ಬದುಕಿನಲ್ಲಿಯೂ ರೂಢಿಸಿಕೊಂಡಿದ್ದೆ ಆದ್ದಲ್ಲಿ ನಮ್ಮ ಕೆಲಸವು ಬೇಸರವನ್ನು ತರಲಾರದು ಎಂದೆನಿಸುತ್ತದೆ.

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ; ಮಲತಂದೆಗೆ 30 ವರ್ಷ ಜೈಲು ಶಿಕ್ಷೆ

ಪೋಕ್ಸೋ ವಿಶೇಷ ಕೋರ್ಟ್ ಮಹತ್ವದ ತೀರ್ಪು

ಮೈಸೂರು, ಜ.27(ಎಸ್‌ಬಿಡಿ)– ಮಗಳ ಸಮಾನ ಅಪ್ರಾಪ್ತೆ ಮೇಲೆ ನಿರಂತರ ಲೈಂಗಿಕ ದೌರ್ಜನ್ಯವೆಸಗಿ, ಮದುವೆಯಾಗುವಂತೆ ಹಿಂಸಿಸುತ್ತಿದ್ದ ಮಲತಂದೆಗೆ ಮೈಸೂರಿನ ಪೋಕ್ಸೋ ವಿಶೇಷ ನ್ಯಾಯಾಲಯ ಶನಿವಾರ 30 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದೆ.


ಮೈಸೂರಿನಲ್ಲಿ ವಾಸವಿದ್ದ ಮೂಲತಃ ಧಾರವಾಡ ಜಿಲ್ಲೆ, ನವಲಗುಂದ ತಾಲೂಕಿನ ಪರಮಾನಂದ(31)ಗೆ ಶಿಕ್ಷೆ ವಿಧಿಸಲಾಗಿದ್ದು, ಈತ ತನ್ನ ಪತ್ನಿಯ ಮೊದಲ ಪತಿಯ ಮಗಳ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ.

ಮೈಸೂರಿನ ಮಹಿಳೆ ತನ್ನ ಪತಿ ನಿಧನ ಹೊಂದಿದ ನಂತರ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಮಗಳೊಂದಿಗೆ ವಾಸವಿದ್ದರು. ಈ ನಡುವೆ ಫೇಸ್‌ಬುಕ್ ಮೂಲಕ ಪರಿಚಿತನಾದ ನವಲಗುಂದದ ಪರಮಾನಂದನೊಂದಿಗೆ ಸ್ನೇಹ ಬೆಳೆಯಿತು. ಪತಿಯಿಲ್ಲದೆ ಒಂಟಿಯಾಗಿದ್ದ ಮಹಿಳೆ ಆತನೊಂದಿಗೆ ವಿವಾಹವಾದರು.

ಸಣ್ಣಪುಟ್ಟ ಕೆಲಸಕ್ಕೆ ಹೋಗುತ್ತಿದ್ದ ಆತನಿಗೆ ನೆರವಾಗಲೆಂದು ಪತ್ನಿಯೂ ಕೂಡ ಫ್ಲಾಸ್ಕ್‌ನಲ್ಲಿ ಟೀ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದರು. ದಂಪತಿಗೆ ಹೆಣ್ಣು ಮಗು ಜನಿಸಿತು. ಪತ್ನಿ ಕೆಲಸಕ್ಕೆಂದು ಹೊರ ಹೋದಾಗ ಆಕೆಯ ಮೊದಲ ಪುತ್ರಿ ಮೇಲೆ ಲೈಂಗಿಕ ದೌರ್ಜನ್ಯವೆಸಗುತ್ತಿದ್ದ. ಆಕೆ ಋತುಮತಿಯಾದ ಬಳಿಕ ತನ್ನನ್ನು ಮದುವೆಯಾಗುವಂತೆ ಪೀಡಿಸುತ್ತಿದ್ದ. ತಾಯಿ ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದಾಗ ಚಿತ್ರಹಿಂಸೆ ನೀಡಿದ್ದನ್ನಲ್ಲದೆ, ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಸಿದ್ದ.

ಇದರಿಂದ ತೀವ್ರ ನೊಂದಿದ್ದ ಬಾಲಕಿ, ದೀಪಾವಳಿಯಂದು ಪಟಾಕಿ ತರುವಂತೆ ತನ್ನ ತಾಯಿಯನ್ನು ಕಳಹಿಸಿ, ತಾನು ಮನೆಯಿಂದ ನಾಪತ್ತೆಯಾಗಿದ್ದಳು. ಎಲ್ಲಾ ಕಡೆ ಹುಡುಕಾಡಿದ ತಾಯಿ, ಕೆ.ಆರ್.ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿದ್ದರು. ಅತ್ತ ಚಾಮುಂಡಿಬೆಟ್ಟದಿಂದ ಮೆಟ್ಟಿಲು ಮಾರ್ಗದಲ್ಲಿ ಒಬ್ಬಳೇ ಬರುತ್ತಿದ್ದ ಬಾಲಕಿಯನ್ನು ಗಮನಿಸಿದ ವಕೀಲರೊಬ್ಬರು ಆಕೆಯನ್ನು ವಿಚಾರಿಸಿದರು. ಆಗ ನಂಜನಗೂಡಿನಲ್ಲಿರುವ ಅಜ್ಜಿ ಮನೆಗೆ ಹೋಗಬೇಕು. ಹೇಗೆ ಹೋಗಬೇಕೆಂದು ಕೇಳಿದ್ದಳು. ತಂದೆ–ತಾಯಿ ಬಗ್ಗೆ ವಿಚಾರಿಸಿದಾಗ ನನಗೆ ಅಪ್ಪ–ಅಮ್ಮ ಇಲ್ಲ, ಅಜ್ಜಿ ಮನೆಗೆ ಹೋಗಬೇಕೆಂದಿದ್ದಳು. ಅನುಮಾನಗೊಂಡ ವಕೀಲರು, ಆಕೆಯನ್ನು ಕರೆದುಕೊಂಡು ಬಂದು ಸಂತೈಸಿ, ಬಾಲಮಂದಿರಕ್ಕೆ ಒಪ್ಪಿಸಿದ್ದರು. ಇತ್ತ ಬಾಲಕಿಗೆ ಹುಡುಕಾಟ ನಡೆಸಿದ್ದ ಕೆ.ಆರ್.ಠಾಣೆ ಪೊಲೀಸರು ವಿಷಯ ತಿಳಿದು ಬಾಲಮಂದಿರದಲ್ಲಿ ಮಾಹಿತಿ ಪಡೆದು, ಆಕೆಯ ಮಲತಂದೆ ಪರಮಾನಂದನ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಿಕೊಂಡಿದ್ದರು. ಆಗಿನ ಇನ್ಸ್‌ಪೆಕ್ಟರ್ ಮಹೇಶ್, ಪ್ರಕರಣದ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪೋಕ್ಸೋ (ಎಫ್‌ಟಿಎಸ್‌ಸಿ–1) ವಿಶೇಷ ನ್ಯಾಯಾಲಯದ ನ್ಯಾಯಾಧೀಶ ರಾದ ಶೈಮಾ ಖಮ್ರೋಜ್ ಅವರು, ಪ್ರಕರಣದ ವಿಚಾರಣೆ ನಡೆಸಿ, ಪರಮಾನಂದನಿಗೆ 30 ವರ್ಷ ಕಠಿಣ ಶಿಕ್ಷೆ ಹಾಗೂ 1.01 ಲಕ್ಷ ರೂ. ದಂಡ ವಿಧಿಸಿ ಶನಿವಾರ ತೀರ್ಪು ನೀಡಿದ್ದಾರೆ. ದಂಡದ ಮೊತ್ತದಲ್ಲಿ ಬಾಲಕಿಗೆ 75 ಸಾವಿರ ರೂ. ಪರಿಹಾರ ಪಾವತಿಸುವಂತೆ ಆದೇಶಿಸಿ ರುವ ನ್ಯಾಯಾಧೀಶರು, ನೊಂದ ಅಪ್ರಾಪ್ತ ಬಾಲಕಿಯು 5 ಲಕ್ಷ ರೂ. ಪರಿಹಾರಕ್ಕೆ ಅರ್ಹಳು ಎಂದು ತಿಳಿಸಿದ್ದಾರೆ. ಸರ್ಕಾರದ ಪರವಾಗಿ ಎಫ್‌ಟಿಎಸ್‌ಸಿ–1 ವಿಶೇಷ ನ್ಯಾಯಾಲಯದ ಸರ್ಕಾರಿ ಅಭಿಯೋಜಕಿ ಕೆ.ಬಿ.ಜಯಂತಿ ವಾದ ಮಂಡಿಸಿದ್ದರು.

ಕಾಂಗ್ರೆಸ್ ಜೀವಂತ ಇದ್ದರೆ ಶಾಮನೂರು ಶಿವಶಂಕರಪ್ಪನ್ನ ಪಕ್ಷದಿಂದ ಉಚ್ಚಾಟಿಸಲಿ



ಹೆಚ್. ವಿಶ್ವನಾಥ್

ಗುಂಡ್ಲುಪೇಟೆ, ಜ.27– ಶಾಮನೂರು ಶಿವಶಂಕರಪ್ಪ ಯಾವ ಹಿರಿಯ ಮುತ್ಸದ್ದಿಯೂ ಅಲ್ಲ. ಅವನು ಜಾತಿವಾದಿ. ಕಾಂಗ್ರೆಸ್ ಜೀವಂತವಾಗಿದ್ದರೆ ಮೊದಲು ಅವನನ್ನು ಪಾರ್ಟಿಯಿಂದ ಉಚ್ಚಾಟನೆ ಮಾಡಿ ಎಂದು ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಒತ್ತಾಯಿಸಿದರು.

ಪಟ್ಟಣದಲ್ಲಿ ಆಯೋಜಿಸಿದ್ದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಬಿ.ವೈ.ರಾಘವೇಂದ್ರ ಪರ ಶಾಮನೂರು ಶಿವಶಂಕರಪ್ಪ ಬ್ಯಾಟಿಂಗ್ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದರು. ಶಾಮನೂರು ಶಿವ ಶಂಕರಪ್ಪ ಕಾಂಗ್ರೆಸ್ ಟಿಕೆಟ್ ಪಡೆದು ಶಾಸಕರಾಗಿ, ಮಗ ಮಂತ್ರಿಯಾಗಿ ದ್ದಾರೆ. ಕಾಂಗ್ರೆಸ್‌ನಲ್ಲಿ ಇದ್ದುಕೊಂಡೆ ಅಧಿಕಾರ ಅನುಭವಿಸಿದ ನಂತರವೂ ಬೇರೆ ಪಾರ್ಟಿಗೆ ಕ್ಯಾನ್ವಾಸ್ ಮಾಡ್ತಿದ್ದಾರೆ. ಪಾರ್ಟಿ ಸೋತರೂ ಪರವಾಗಿಲ್ಲ ನೆಂಟಸ್ಥನ ಸೋಲಬಾರದು ಎಂಬುದು ಇವರ ಉದ್ದೇಶ ಎಂದು ಕುಟುಕಿದರು.

ಎಂಎಲ್‌ಎಗಳಿಗೆ ನಿಗಮ ಮಂಡಳಿ ನೀಡಿದರೆ ಸಾಮಾನ್ಯ ಕಾರ್ಯಕರ್ತರು ಏನು ಮಾಡಬೇಕು, ನಮ್ಮನ್ನು ಗೆಲ್ಲಿಸಿ ಕಳುಹಿಸುವವರು ಎಲ್ಲಿಗೆ ಹೋಗಬೇಕು. ಸಾಮಾನ್ಯ ಕಾರ್ಯಕರ್ತರಿಗೆ ಅವಕಾಶ ಕೊಡಲಿಲ್ಲ ಎಂದರೆ, ಮುಂಬರುವ ಎಂಪಿ ಚುನಾವಣೆಯಲ್ಲಿ ಕೆಲಸ ಮಾಡುವವರು ಯಾರು ಎಂದು ವಿಶ್ವನಾಥ್ ಪ್ರಶ್ನಿಸಿದರು. ಎಂಎಲ್‌ಎಗಳಿಗೆ ಬೋರ್ಡ್ಸ್ ಅಂಡ್ ಕಾರ್ಪೋರೇಷನ್ ಕೊಡ್ಬೇಡಿ ಅಂತ ವೀರೇಂದ್ರ ಪಾಟೀಲರ ಕಾಲದಲ್ಲೇ ನಾನು ಹೇಳಿದ್ದೆ. ಅದರೆ ಪಾಲನೆ ಆಗುತ್ತಿಲ್ಲ. ಹಿಂದೆ ಕಾಂಗ್ರೆಸ್, ಜೆಡಿಎಸ್ ಜತೆ ಮೈತ್ರಿ ಆಗಿದ್ದರಿಂದ ಕಾಂಗ್ರೆಸ್‌ಗೆ ಲಾಸ್ ಆಯ್ತು. ಈಗಲೂ ಜೆಡಿಎಸ್ ಜತೆ ಬಿಜೆಪಿ ಸೇರಿದರೆ ಅದು ಬಿಜೆಪಿಗೆ ಲಾಸ್ ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಸಾಂಸ್ಕೃತಿಕ ಉತ್ಸವ

ಮೈಸೂರು ಮಾನಸಗಂಗೋತ್ರಿಯಲ್ಲಿ ಸಂಗೀತ ಮಾಧುರ್ಯದಲ್ಲಿ ಮಿಂದೆದ್ದ ಯುವ ಸಮೂಹ


ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಮತ್ತು ತಂಡದ ಗಾನ ಮಾಧುರ್ಯ


ಮೈಸೂರು ಫೆಸ್ಟ್‌ನ ಸಾಂಸ್ಕೃತಿಕ ವೈಭವಕ್ಕೆ ನಗಾರಿ ಭಾರಿಸುವ ಮೂಲಕ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಚಾಲನೆ ನೀಡಿದರು. ಶಾಸಕ ಕೆ.ಹರೀಶ್‌ಗೌಡ ಮತ್ತಿತರರಿದ್ದರು.

ಮೈಸೂರು, ಜ.27(ಎಂಕೆ)– ಮಾನಸ ಗಂಗೋತ್ರಿಯಲ್ಲಿ ಗುಂಗೇರಿಸುವ ಸಂಗೀತದ ಸಿಡಿಲಬ್ಬರ... ರಿದಂ ಮ್ಯೂಸಿಕ್‌ಗೆ ಸೂಪರ್ ಮ್ಯಾನ್‌ನಂತೆ ಸಂಗೀತದ ಅಲೆಯಲ್ಲಿ ತೇಲಾಡಿದ ಯುವ ಸಮೂಹ...!

ಮೈಸೂರು ವಿಶ್ವವಿದ್ಯಾನಿಲಯದ ಮಾಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಪ್ರವಾಸೋದ್ಯಮ ಇಲಾಖೆ, ಮೈಸೂರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ವತಿಯಿಂದ ಆಯೋಜಿಸಿರುವ ಮೈಸೂರು ಫೆಸ್ಟ್‌ನ ಸಾಂಸ್ಕೃತಿಕ ವೈಭವ ವೇದಿಕೆಯಲ್ಲಿ ಕೇರಳದ ಕೊಚ್ಚಿಯ 'ಉಯಿರೆ ಉಯಿರೆ ಬಿಜಿಎಂ ಚೆಮ್ಮನ್ ಬ್ಯಾಂಡ್' ಹಾಗೂ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, ಗಾಯಕ ಪೃಥ್ವಿ ಮತ್ತು ತಂಡದ ಗಾನ ಮಾಧುರ್ಯ ರೋಮಾಂಚನ ನೀಡಿತು.

ವಯೋಲಿನ್ ಫ್ಯೂಷನ್, ಚೆಂಡೆ ಮತ್ತು ಹಾಡು–ನೃತ್ಯದ ಸಂಯೋಜನೆಯ ಚೆಮ್ಮನ್ ಬ್ಯಾಂಡ್‌ನ ಸಿಡಿಲಬ್ಬರದ ಸಂಗೀತ ಎದೆಯಲ್ಲಿ ನಡುಕ ಹುಟ್ಟಿಸಿ, ಮನದಲ್ಲಿ ಉಲ್ಲಾಸ–ಉತ್ಸಾಹದ ಅಲೆ ಸೃಷ್ಟಿಸಿತು. ಮಲಯಾಳಂ ಕಲಾವಿದರು 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಹಾಡಿನೊಂದಿಗೆ ಆರಂಭಿಸಿ, ಹತ್ತು–ಹಲವು ಕನ್ನಡ, ಹಿಂದಿ, ತಮಿಳು, ತೆಲುಗು ಹಾಗೂ ಮಲಯಾಳಂ ಭಾಷೆಯ ಹಾಡುಗಳನ್ನು ಹಾಡಿ ರಂಜಿಸಿದರು. ಹಾಡಿನೊಂದಿಗೆ ಆಗಾಗ ಅಬ್ಬರಿಸಿದ ಚೆಂಡೆ ವಾದನ ಕೇಳುಗರ ಎದೆ ಝಲ್ ಎನಿಸಿದರೆ, ವಯೋಲಿನ್ ಫ್ಯೂಷನ್ ಗುಂಗೇರಿಸಿತು.

ಖ್ಯಾತ ಪಾಪ್ ಗಾಯಕ ಮೈಕಲ್ ಜಾಕ್ಸನ್‌ನ ಸುಪ್ರಸಿದ್ಧ ಹಾಡುಗಳ ರಿದಂ ಸೇರಿದಂತೆ ಕನ್ನಡದ ರಾಜಕುಮಾರ ಚಿತ್ರದ 'ಬೊಂಬೆ ಹೇಳುತೈತೆ', ಮಿಲನ ಚಿತ್ರದ 'ನಿನ್ನಿಂದಲೆ', ವಿಕ್ರಾಂತ್ ರೋಣ ಚಿತ್ರದ 'ರಾ ರಾ' ಹಾಡುಗಳ ವಯೋಲಿನ್ ನಾದಕ್ಕೆ ದನಿಗೂಡಿಸಿದ ಕಲಾವಿದರು ನೆರೆದಿದ್ದ ಯುವ ಸಮೂಹ ಹುಚ್ಚೆದ್ದು ಕುಣಿಯುವಂತೆ ಮಾಡಿದರು.

ಗಾನ ಮಾಧುರ್ಯ: ಬಳಿಕ ನಡೆದ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, ಗಾಯಕ ಪೃಥ್ವಿ ನೇತೃತ್ವದ ಗಾನ ಮಾಧುರ್ಯ ಕೇಳಿಗರಿಗೆ ರೋಮಾಂಜನ ನೀಡಿತು. ಗಣೇಶ ಸ್ತುತಿಯೊಂದಿಗೆ ಆರಂಭಿಸಿ ಸುಪ್ರಸಿದ್ಧ ಕನ್ನಡ ಹಾಗೂ ಹಿಂದಿ ಚಲನಚಿತ್ರಗೀತೆಗಳನ್ನು ಹಾಡುವ ಮೂಲಕ ಸಂಗೀತ ರಸದೌತಣ ನೀಡಿದರು.

ಜಾನಪದ ಸೊಗಡು: ಮಾನಸ ಗಂಗೋತ್ರಿಯ ಕ್ಲಾಕ್ ಟವರ್ ಬಳಿಯ ವೇದಿಕೆಯಲ್ಲಿ ಜಾನಪದ ಸೊಗಡು ಕೇಳುಗರ ಮನತಣಿಸಿತು. ವಿದ್ವಾನ್ ಯದುಕುಮಾರ್ ತಂಡದ ಸ್ಯಾಕ್ಸೋಫೋನ್ ವಾದ್ಯಗೋಷ್ಠಿ ಕಿವಿಗೆ ಇಂಪು ನೀಡಿದರೆ, ಮಹೇಶ್ ತಂಡದ ನಗಾರಿ ವಾದ್ಯ, ಹುಯಿಲಾಳು ಶಿವಮಲ್ಲು ತಂಡದ ವೀರ ಮಕ್ಕಳ ಕುಣಿತ ಹಾಗೂ ರಘುನಾಥ್–ಗುರುದತ್ ತಂಡದ ಸುಗಮ ಸಂಗೀತ ಸುಂದರ ಮುಸ್ಸಂಜೆ ಮಧುರ ಕ್ಷಣಗಳಲ್ಲಿ ಕಲಾ ಪ್ರೇಕ್ಷಕರ ಮನಸ್ಸಿಗೆ ಮುದ ನೀಡಿತು.

ಜಾರ್ಜಿಯನ್ ಸಾಂಸ್ಕೃತಿಕ ಪ್ರದರ್ಶನ...

ಮೈಸೂರು ವಿಶ್ವವಿದ್ಯಾಲಯದ ಬಯಲು ರಂಗ ಮಂದಿರದಲ್ಲಿ ನಾಳೆ(ಜ.28) ಸಂಜೆ 4 ಗಂಟೆಗೆ ಇಂಡಿಯಾ ಜಾರ್ಜಿಯನ್ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಅತ್ಯಂತ ಗಮನಾರ್ಹವಾದ ಸಾಂಸ್ಕೃತಿಕ ಪ್ರದರ್ಶನ ಇದಾಗಿದ್ದು, ವಿಶ್ವದ ವಿಶಿಷ್ಟ ಹಾಗೂ ಆಕರ್ಷಕ ಸಂಗೀತ ಶೈಲಿಗಳಲ್ಲಿ ಹೊಂದಾಗಿದೆ.

ಮೈಸೂರಿನ ಆತಿಥ್ಯವೇ ನನಗೆ ಸ್ಫೂರ್ತಿ... ಪ್ರೇರಣೆ...

ಸಾಂಸ್ಕೃತಿಕ ನಗರಿ ಮೈಸೂರು ಪ್ರವಾಸೋದ್ಯಮ ಕೇಂದ್ರವಾಗಿದ್ದು, ಇಲ್ಲಿನ ಜನರ ಅತಿಥಿ ಸತ್ಕಾರ, ಪ್ರವಾಸಿಗರನ್ನು ಸ್ವಾಗತಿಸುವ ರೀತಿ–ನೀತಿ, ಪ್ರಾರಂಪರಿಕ ಇತಿಹಾಸ ನನಗೆ ಸ್ಫೂರ್ತಿ ಹಾಗೂ ಪ್ರೇರಣೆ ನೀಡುತ್ತದೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಹೇಳಿದರು.

ಮೈಸೂರು ಫೆಸ್ಟ್‌ನ ಸಾಂಸ್ಕೃತಿಕ ವೈಭವಕ್ಕೆ ಚಾಲನೆ ನೀಡಿ ಮಾತನಾಡಿದ ಸಚಿವರು, ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವಕಾಶ ಸಿಗದೆ ಬೇಸರವಾಗಿದ್ದ ಕಲಾವಿದರಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಮೊದಲ ಬಾರಿಗೆ ಮೈಸೂರು ಫೆಸ್ಟ್ ಆಯೋಜಿಸಲಾಗಿದೆ. ಚಿತ್ರ ಸಂತೆ, ಫ್ಲೆ ಮಾರುಕಟ್ಟೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಆಕರ್ಷಣೆಯಾಗಿವೆ ಎಂದರು.

ನಾನು ಮೈಸೂರಿಗೆ ಬಂದಾಗಲೆಲ್ಲಾ ಇಲ್ಲಿನ ಪಾರಂಪರಿಕ ಕಟ್ಟಡಗಳಿಗಿಂತಲೂ ಮೈಸೂರಿಗರ ಅತಿಥಿ ಸತ್ಕಾರ, ಪ್ರವಾಸಿಗರನ್ನು ಸ್ವಾಗತಿಸುವ ರೀತಿ–ನೀತಿ ನನಗೆ ಹೊಸ ಪ್ರೇರಣೆ ನೀಡುತ್ತದೆ. ಮೈಸೂರಿನ ಕಲೆ–ಸಾಹಿತ್ಯ, ಸಂಸ್ಕೃತಿ ನನ್ನ ಮೇಲೆ ಪ್ರಭಾವ ಬೀರಿದೆ. ಹೊಸ ಹೊಳಪು ನೀಡುವ ಶಕ್ತಿ ಮೈಸೂರಿನ ಸಂಸ್ಕೃತಿಯಲ್ಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಮೈಸೂರು ಫೆಸ್ಟ್ ಕೇವಲ ಮನರಂಜನೆಯಲ್ಲ. ದೇಶ ಸುತ್ತು–ಕೋಶ ಓದು ಎಂಬಂತೆ ಮೈಸೂರಿನ ಕಲೆ ತಿಳಿಯಬೇಕಾದರೆ ಮೈಸೂರಿಗೆ ಪ್ರವಾಸಕ್ಕೆ ಬರಲೇಬೇಕು ಎಂದು ಪ್ರವಾಸಿಗರನ್ನು ಆಹ್ವಾನಿಸಿದರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಸಲ್ಮಾ ಕೆ.ಫಾಹಿಮಾ, ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಜಂಟಿ ಕಾರ್ಯದರ್ಶಿ ರಾಜಮ್ಮ, ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಮತ್ತಿತರರು ಉಪಸ್ಥಿತರಿದ್ದರು.


ಮೈಸೂರಿನ ಚಾಮುಂಡೇಶ್ವರಿ ನಗರ ಬಿಜೆಪಿ ಮಂಡಲದ ವತಿಯಿಂದ ಗಣರಾಜ್ಯೋತ್ಸವದ ಅಂಗವಾಗಿ ಶಾರದಾದೇವಿ ನಗರದ ನಮೋವನದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ಈ ವೇಳೆ ಮಂಡಲ ಅಧ್ಯಕ್ಷ ಬಿ.ಎಂ.ರಘು, ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ರಾಜಾಮಣಿ, ಉಪಾಧ್ಯಕ್ಷ ರಾಕೇಶ್ ಭಟ್, ವಿಜಯ ಮಂಜುನಾಥ್, ರಾಕೇಶ್ ಭಟ್, ಶಶಿಕಾಂತ್, ಹಿರಿಯಣ್ಣ, ನಾಗರಾಜ್ ಜಿನ್ನು, ಗೀತಾ ಮಹೇಶ್, ರಾಮಬಾಯಿ, ರವಿ ನಾಯಕಂಡ ಕಲಾವತಿ, ವಿನುತ, ರಾಧಾ, ತುಳಸಿ, ಕಾಂತರಾಜ್ ಅರಸ್, ರವಿ ಅರಸ್, ರಮೇಶ್, ಚೇತನ್ ಭೂಷಣ್, ಅನಿತಾ, ಅಜಯ್, ಪಡಿವೇಲು, ಮಾರುತಿ, ಶೃತಿ, ಶೋಭಾ, ರಾಜನಾಯಕ್ ಇನ್ನಿತರರಿದ್ದರು.


ಮೈಸೂರಿನ ಯಾದವಗಿರಿಯಲ್ಲಿರುವ ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ ಆಶ್ರಯದಲ್ಲಿ ಲಲಿತ ಪ್ರೌಢಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶ್ರೀಮತಿ ಶಿಲ್ಪಿ ಅಗರ್‌ವಾಲ್ ಧ್ವಜಾರೋಹಣ ನೆರವೇರಿಸಿ, ವಿದ್ಯಾರ್ಥಿಗಳಿಂದ ಗೌರವ ವಂದನೆ ಸ್ವೀಕರಿಸಿದರು.


ಮೈಸೂರಿನ ಕುವೆಂಪುನಗರ ಸ್ಪಂದನ ಸಂಸ್ಥೆ ವತಿಯಿಂದ ಡಾ. ಪ್ರಭುಲಿಂಗಸ್ವಾಮಿ ಅವರ ಮನೆಯ ಮೇಲ್ಛಾವಣಿಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸ್ಪಂದನ ಅಧ್ಯಕ್ಷ ಎಂ.ಜಯಶಂಕರ್, ಸ್ವಾಮಿ, ಪ್ರಕಾಶ್, ಚಂದ್ರಪ್ಪ, ನಿರಂಜನ್, ಅರುಣ್, ವಿದ್ಯಾರ್ಥಿಗಳಾದ ಅರುಣ್, ಅವನೀಶ್, ಹೆಚ್.ನಿಹಾರ್ ಇನ್ನಿತರರಿದ್ದರು.


ಬಿಜೆಪಿ ಕಚೇರಿಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಪಕ್ಷದ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಧ್ವಜಾರೋಹಣ ನೆರವೇರಿಸಿದರು.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೇ: ಸಂಧಾರ್ ಟೆಕ್ನಾಲೊಜೀಸ್ ಲಿಮಿಟೆಡ್, ವಿಳಾಸ: ಬಿ–6/20, ಎಲ್.ಎಸ್.ಸಿ ಸಫ್‌ದರ್‌ಜಂಗ್ ಎನ್‌ಕ್ಲೇವ್, ನ್ಯೂ ದೆಹಲಿ–110020, ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.
ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಅದರ ಮಾಲೀಕರನ್ನು ಹೊರತು ಪಡಿಸಿ ಇತರ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಬಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅದರ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಲಾಗುವುದು.,
ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮದರಗಳ್ಳಿ ಗ್ರಾಮದ ಸರ್ವೆ ನಂಬರ್. 27 ರಲ್ಲಿನ ಕೈಗಾರಿಕ ಉದ್ದೇಶಕ್ಕಾಗಿ ದಿನಾಂಕ: 24/08/1984 ನಂಬರ್: ಎ.ಎಲ್.ಎನ್ 27: 84–85 ರಂತೆ ಅನ್ಯಕ್ರಾಂತಗೊಂಡಿರುವ ಎರಡು ಎಕರೆ ಹದಿನೆಂಟು ಗುಂಟೆ (2.18.00.00) ವಿಸ್ತೀರ್ಣದ ಜಮೀನು, ಕಡಕೊಳ ಪಟ್ಟಣ ಪಂಚಾಯಿತಿ, Form–2 ಸ್ವತ್ತಿನ ಸಂಖ್ಯೆ–9, ವಿಸ್ತೀರ್ಣ 106722 ಚದರ ಅಡಿ, ಮತ್ತು ಇದರಲ್ಲಿ ಕಟ್ಟಿರುವ 33185 ಚದರ ಅಡಿ ಅಳತೆಯ ನೆಲ ಅಂತಸ್ತಿನ ಕಟ್ಟಡ ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್: 12/4, ಪಶ್ಚಿಮಕ್ಕೆ:– ಸರ್ವೆ ನಂಬರ್: 26/7, ಉತ್ತರಕ್ಕೆ: ಸರ್ವೆ ನಂಬರ್: 13, ದಕ್ಷಿಣಕ್ಕೆ:– ರಸ್ತೆ

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು,
KAR-1996-2000, #2-3, First Floor,
PRI Complex, 67/7A, New Sayyajirao Road,
Fort Mohalla, Mysore 570004 India, Cell: 93431 12535.
E-mail: mnprakashkalappa@gmail.com
ದಿನಾಂಕ: 26/01/2024

ಸಾರ್ವಜನಿಕ ನೋಟೀಸ್

ನನ್ನ ಕಕ್ಷೀದಾರರಾದ ಕವಿತಾನಾಯಕ್.ಸಿ.ಜಿ ಕೋಂ ಕರಿಯನಾಯಕ.ಹೆಚ್.ಜಿ, ವಾಸ ರಾಮಮಂದಿರ ಬೀದಿ, ಯರಗಂಬಳ್ಳಿ ಗ್ರಾಮ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ. ಇವರು ದಿನಾಂಕ:– 20-04-2000 ರಂದು ಚಾಮರಾಜನಗರದ ಉಪನೋಂದಣಾಧಿಕಾರಿ ಕಛೇರಿಯಲ್ಲಿ 1ನೇ ಪುಸ್ತಕದ 3560ನೇ ಸಂಪುಟದ 91-92 ಪುಟಗಳಲ್ಲಿ 140ನೇ ನಂಬರಾಗಿ ನೋಂದಾಯಿಸಲ್ಪಟ್ಟ ಮೂಲ ಕ್ರಯಪತ್ರವನ್ನು ಕಳೆದ 15 ದಿನಗಳ ಹಿಂದೆ ಚಾಮರಾಜನಗರದ ಟೌನ್, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ಕಳೆದುಕೊಂಡಿರುತ್ತಾರೆ. ಸದರಿ ಮೇಲ್ಕಂಡ ಮೂಲ ಕ್ರಯಪತ್ರವು ದೊರೆತಲ್ಲಿ ಕೆಳಕಂಡ ವಕೀಲರ ಕಛೇರಿಗೆ ಈ ಸಾರ್ವಜನಿಕ ನೋಟೀಸ್ ದೊರೆತ 15 ದಿನಗಳ ವರೆಗೆ ತಲುಪಿಸತಕ್ಕದ್ದು.
ಷೆಡ್ಯೂಲ್ ಸ್ವತ್ತಿನ ವಿವರ: ಚಾಮರಾಜನಗರ ಟೌನ್/ಜಿಲ್ಲೆ, ಡಿ.ವಿಭಾಗ, ಮೇದರ ಬ್ಲಾಕ್, ನಗರಸಭೆ ಅಸೆಸ್‌ಮೆಂಟ್ ನಂ.1313/ಎ–3, 1242/ಎ–3 ಅಳತೆ ಪೂರ್ವ ಪಶ್ಚಿಮವಾಗಿ 58 ಅಡಿ, ದಕ್ಷಿಣೋತ್ತರವಾಗಿ 30 ಅಡಿ, ಇದಕ್ಕೆ ಚೆಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಂಜಮ್ಮ ರವರ ಜಾಗ, ಉತ್ತರಕ್ಕೆ : ಶಿವಯ್ಯ ರವರ ಜಮೀನು, ದಕ್ಷಿಣಕ್ಕೆ : ಮಿನಾಕ್ಷೀ ರವರ ಮನೆ

ನಂದಕುಮಾರ್.ಸಿ.ಜಿ ವಕೀಲರು
ಸನ್ನದು ಸಂಖ್ಯೆ : 2154/2007,
ಮೊ: 9620006319, ರಥದ ಬೀದಿ, ಗಾಯತ್ರಿ ಸಂಕೀರ್ಣ,ವೀರಭದ್ರಸ್ವಾಮಿ ದೇವಸ್ಥಾನದ ಹತ್ತಿರ, ಚಾಮರಾಜನಗರ ಟೌನ್/ಜಿಲ್ಲೆ–571313

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಯಳಂದೂರು.
Telephone: 08226-240232 E-Mail: eotpyelandur@gmail.com

ಸಂಖ್ಯೆ: ತಾ.ಪಂ.ಯ/ಲೆ.ಪ.ಶಾ/ಖರೀದಿ/02/2023–24 ದಿನಾಂಕ : 24–01–2024

ಇ– ಟೆಂಡರ್ ಪ್ರಕಟಣೆ

2023–24ನೇ ಸಾಲಿನ ತಾಲ್ಲೂಕು ಪಂಚಾಯಿತಿ ಅನಿರ್ಬಂಧಿತ ಅನುದಾನದಡಿ ಯಳಂದೂರು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ನಿರ್ಮಾಣಕ್ಕಾಗಿ ಅಗತ್ಯವಾದ ಸಾಮಾಗ್ರಿಗಳು, ಐಟಿ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ ಇ–ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ಸರಬರಾಜುದಾರರು/ಸಂಸ್ಥೆಯವರು ಇ–ಟೆಂಡರ್‌ನಲ್ಲಿ ಭಾಗವಹಿಸಿ ದಿನಾಂಕ : 24–01–2024 ರಿಂದ 07–02–2024 ಸಂಜೆ 5–00 ಗಂಟೆಯೊಳಗೆ ಟೆಂಡರ್ ಫಾರಂ ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ https/kppp.kamataka.gov.in ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಯಳಂದೂರು, ಮೊಬೈಲ್ ಸಂಖ್ಯೆ: 9880733728 (ರವರನ್ನು ಸಂಪರ್ಕಿಸಬಹುದು)


ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ತಾ.ಪಂ.ಯ/ಲೆ.ಪ.ಶಾ/ಇ–ಟೆಂಡರ್/02/2023–24 ದಿನಾಂಕ: 24–01–2024
ಟೆಂಡರ್‌ಗೆ ಮೀಸಲಿಟ್ಟಿರುವ ಅಂದಾಜು ಮೊತ್ತ	10.00 ಲಕ್ಷಗಳು
EMD	15000.00
KPPP ನಲ್ಲಿ ದಾಖಲೆಗಳನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ	07-02-2024
KPPP ತಾಂತ್ರಿಕ ಬಿಡ್ ತೆರೆಯುವ ದಿನಾಂಕ	08-02-2024
KPPP ಆರ್ಥಿಕ ಬಿಡ್ ತೆರೆಯುವ ದಿನಾಂಕ	09-02-2024
ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಧಿಕಾರಿಯ ವಿವರ	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಯಳಂದೂರು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ
ತಾಲ್ಲೂಕು ಪಂಚಾಯಿತಿ, ಯಳಂದೂರು

ಸಂ:ವಾಸಾಸಂಇ:ಚಾ.ನಗರ: 356:2023–24



ಮೈಸೂರಿನ ವಿಜಯನಗರದಲ್ಲಿರುವ ಸನ್ಮತಿ ಗೆಳತಿಯರ ಬಳಗದ ವತಿಯಿಂದ ಕನ್ನಡ ಸಾಹಿತ್ಯ ಭವನದಲ್ಲಿ ಗಣರಾಜ್ಯೋತ್ಸವ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಮಮತಾ ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಬಳಗದ ಪದಾಧಿಕಾರಿಗಳಾದ ಸವಿತಾ ಗೋವಿಂದೇಗೌಡ, ಜ್ಯೋತಿ ಸೀತಾರಾಮ್, ಗೀತಾ ರುಕ್ಮಾಂಗದ, ಕೋಮಲಾ, ಮಂಜುಳಾ, ಸುಜಾತಾ, ರಾಣಿ, ಪ್ರೇಮಾ, ಮಮತಾ, ಪದ್ಮ, ಹೇಮಾ ಇನ್ನಿತರರಿದ್ದರು.



ಫಾ। ಡಾ। ದಯಾನಂದ ಪ್ರಭು ಅವರ ಹುಟ್ಟುಹಬ್ಬದ ಅಮೃತ ಮಹೋತ್ಸವದ ಅಂಗವಾಗಿ ಅವರು ಬರೆದು, ಪ್ರಕಟಿಸಿರುವ 'ಯೇಸು ಕ್ರಿಸ್ತರ ಅಮರ ಬಲಿದಾನ' ಪುಸ್ತಕ ಬಿಡುಗಡೆ ಮಾಡಲಾಯಿತು. ಚಿತ್ರದಲ್ಲಿ ಎಸ್.ಆರ್.ಲೋಬೋ, ಜಾರ್ಜ್ ಡಿಸೋಜ, ರೆಫಾ। ಸುನೀಲ್ ಫರ್ನಾಂಡಿಸ್, ಡಾ. ದಯಾನಂದ ಪ್ರಭು, ರೆಫಾ। ಲೂಯಿಸ್ ನರ್ರೋನಾ, ರೆಫಾ। ಆರೋಗ್ಯಸ್ವಾಮಿ ಅವರಿದ್ದಾರೆ.



ಮೈಸೂರಿನ ಹಿನಕಲ್ ಗ್ರಾಮದ ಪ್ರೌಢಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸಿದ್ದರಾಮಯ್ಯ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಪ್ರಕಾಶ್, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಹಿನಕಲ್ ಗಣೇಶ್, ಎಸ್‌ಡಿಎಂಸಿ ಅಧ್ಯಕ್ಷ ಸಿದ್ದಾಚಾರಿ, ಸದಸ್ಯರಾದ ದೊಡ್ಡೇಗೌಡ, ಶಿವಪ್ರಕಾಶ್, ಲಕ್ಷ್ಮಿ, ಮುಖ್ಯ ಶಿಕ್ಷಕಿ ಶ್ರೀಮತಿ ಪ್ರಮೀಳಾ, ಶಿಕ್ಷಕರಾದ ಸುಜಯ, ನೇತ್ರಾವತಿ, ಕುಮಾರಿ, ಹೇಮಾ, ವೇನಿಲಾ, ರಾಘವೇಂದ್ರ, ಮಂಜುನಾಥ್, ರುಕ್ಮಿಣಿ ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರ ವಿಶ್ವಮಾನವ ಜೋಡಿ ರಸ್ತೆಯ ಪೂರ್ಣಪ್ರಜ್ಞ ವಿದ್ಯಾ ಶಾಲೆಯಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಾಗರಿಕ ವೇದಿಕೆಯ ಬಿ.ವಿ. ಪುಟ್ಟಸ್ವಾಮಿ, ರಂಗಯ್ಯ, ಹೆಚ್.ಅರವಿಂದ, ಕುಳ್ಳೇಗೌಡ, ಶಾಲಾಭಿವೃದ್ಧಿ ಸಮಿತಿಯ ಜಿ. ಲೋಕೇಶ್, ಹೆಚ್.ಕೆ. ಅಪ್ಪಾಜಿ ಗೌಡ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಬಾಲರಾಮನ ಪ್ರತಿಷ್ಠಾಪನೆ ಮೂಲಕ ದೇಶದಲ್ಲೇ ಉತ್ತುಂಗಕ್ಕೇರಿದ ಸಾಂಸ್ಕೃತಿಕ ನಗರಿ ಮೈಸೂರು

ಶಿಲ್ಪಿ ಅರುಣ್ ಯೋಗಿರಾಜ್ ಅಭಿಪ್ರಾಯ



ಮೈಸೂರಿನ ಸುತ್ತೂರು ಶಾಖಾ ಮಠದಲ್ಲಿ ಶುಕ್ರವಾರ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಅರುಣ್ ಯೋಗಿರಾಜ್ ದಂಪತಿಯನ್ನು ಸನ್ಮಾನಿಸಿ, ಆಶೀರ್ವದಿಸಿದರು.

ಮೈಸೂರು, ಜ.27(ಬಿಎಲ್‌ಯು)– ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆಗೊಂಡಿರುವ ಬಾಲರಾಮ ಮೂರ್ತಿಯನ್ನು ನಾನು ಕೆತ್ತನೆ ಮಾಡುವ ಮೂಲಕ ಇಡೀ ದೇಶದ ಶಿಲ್ಪ ಕ್ಷೇತ್ರ ವೃತ್ತಿಯಲ್ಲಿ ಮೈಸೂರು ಹೆಸರು ಉತ್ತುಂಗಕ್ಕೇರಿದೆ ಎಂದು ಶಿಲ್ಪಿ ಅರುಣ್ ಯೋಗಿ ರಾಜ್ ಅಭಿಪ್ರಾಯಪಟ್ಟರು.

ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಶಿಲ್ಪ ಕಲಾವಿದನೊಬ್ಬನನ್ನು ಇಷ್ಟೊಂದು ಪ್ರೀತಿ–ಗೌರವ, ಆದರದಿಂದ ಗುರುತಿಸಿ, ಗೌರವಿಸಿರುವುದು ಪ್ರಾಯಶಃ ಇದೇ ಮೊದಲು ಎಂದು ಹೇಳಿದರು.

ಬಾಲರಾಮ ಮೂರ್ತಿ ಕೆತ್ತನೆಯಿಂದ ದೇಶದ ಜನರಿಂದ ಈ ಪ್ರಮಾಣದ ಪ್ರೀತಿ ಸಿಗುತ್ತದೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಈ ಸ್ಮರಣೀಯ ಸನ್ನಿವೇಶವನ್ನು ನಾನು ಎಂದೂ ಮರೆಯುವುದಿಲ್ಲ ಎಂದು ಅರುಣ್ ಯೋಗಿರಾಜ್ ತಿಳಿಸಿದರು.

ಪ್ರೌಢಶಾಲೆಯಿಂದ ಪದವಿ ತನಕ ನಾನು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲೇ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನಂತಹ ಲಕ್ಷಾಂತರ ಜನರನ್ನು ಜೆಎಸ್‌ಎಸ್ ವಿದ್ಯಾಸಂಸ್ಥೆ ಕೊಡುಗೆಯಾಗಿ ನೀಡಿದೆ ಎಂದರು.

ಬಾಲರಾಮ ಮೂರ್ತಿಯನ್ನು ಕೆತ್ತನೆ ಮಾಡಿರುವ ಬಗೆ, ಅದರ ಸ್ವರೂಪವನ್ನು ಶ್ರೀಗಳಿಗೆ ಸವಿವರವಾಗಿ ವಿವರಿಸಿ ಹೇಳಿದೆ. ಹೆತ್ತ ಮಕ್ಕಳು ತಾಯಿಗೆ ಮುದ್ದು ಎಂಬಂತೆ ನನ್ನ ಕೆತ್ತನೆ ನನಗೆ ಸರಿ ಎನ್ನಿಸುತ್ತದೆ. ಈ ಹಿನ್ನೆಲೆಯಲ್ಲಿ ಬಾಲರಾಮನ ಮೂರ್ತಿಯ ಬಗ್ಗೆ ಸುತ್ತೂರು ಶ್ರೀಗಳ ಅಭಿಪ್ರಾಯ ಕೇಳಿದೆ. ಬಾಲರಾಮ ಮೂರ್ತಿ ಫೋಟೋ ನೋಡಿ ಶ್ರೀಗಳು ಪ್ರಶಂಸೆ ವ್ಯಕ್ತಪಡಿಸಿದರು ಎಂದು ಅರುಣ್ ಯೋಗಿ ರಾಜ್ ತಿಳಿಸಿದರು.

ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಮೂಲಕ ಭಾರತೀಯರ 500 ವರ್ಷಗಳ ಕನಸು ನನಸಾಗಿದೆ. ಈ ಕಾರಣದಿಂದ ರಾಮ ಮಂದಿರಕ್ಕೆ ಹೋಗಿ ಬಾಲರಾಮನನ್ನು ನೋಡಿದ ಕ್ಷಣದಲ್ಲಿ ಸಹಜವಾಗಿಯೇ ಭಕ್ತರು ಬಾವುಕರಾಗುತ್ತಾರೆ ಎಂದು ಹೇಳಿದರು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿರುವ ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆ ಕೆತ್ತನೆಗಾಗಿ ಮೈಸೂರು ನಗರ ಪಾಲಿಕೆ ನನಗೆ ಹಣ ಕೊಡಬೇಕಿದೆ. 2015ರಲ್ಲಿ ನೀಡಬೇಕಾದ ಹಣ ಇನ್ನು ಬಂದಿಲ್ಲ. ಬೇರೆ ಬೇರೆ ಕೆಲಸದ ಒತ್ತಡದಲ್ಲಿದ್ದ ಕಾರಣ ನಾನು ಕೂಡ ನಗರ ಪಾಲಿಕೆಗೆ ಹೋಗಿ ಹಣ ನೀಡುವಂತೆ ಕೇಳಿಲ್ಲ ಎಂದು ಅರಣ್ ಯೋಗಿರಾಜ್ ಸ್ಪಷ್ಟಪಡಿಸಿದರು.

ಟ್ಯಾಬ್ ಮೂಲಕ ಸುತ್ತೂರು ಶ್ರೀಗಳಿಗೆ ಬಾಲರಾಮನ ಫೋಟೋ ತೋರಿಸಿ ಅರುಣ್ ಯೋಗಿರಾಜ್ ಸುಮಾರು 20 ನಿಮಿಷಗಳ ಕಾಲ ವಿವರಣೆ ನೀಡಿದರು. ತರುವಾಯ ಸುತ್ತೂರು ಶ್ರೀಗಳು ಅರುಣ್ ಯೋಗಿರಾಜ್ ಸೇರಿದಂತೆ ಅವರ ಕುಟುಂಬಸ್ಥರನ್ನು ಸನ್ಮಾನಿಸಿ, ಆಶೀರ್ವದಿಸಿದರು.

ತಪಸ್ಸಿನ ಫಲವಾಗಿ ಅರುಣ್ ಯೋಗಿರಾಜ್ ಕೈಯ್ಯಲ್ಲಿ ಬಾಲರಾಮ ಅರಳಿದೆ

ಏಕಾಗ್ರತೆ, ನಿಷ್ಠೆ, ಶ್ರದ್ಧೆ ಹಾಗೂ ತಪಸ್ಸಿನ ಫಲವಾಗಿ ಅರುಣ್ ಯೋಗಿರಾಜ್‌ಗೆ ಬಾಲರಾಮನ ಮೂರ್ತಿ ಕೆತ್ತನೆ ಮಾಡಲು ಸಾಧ್ಯವಾಗಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕೃಷ್ಣ ಶಿಲೆಯಲ್ಲಿ ಮೂರ್ತಿ ಕೆತ್ತನೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಆದರೂ ಅರುಣ್ ಯೋಗಿರಾಜ್ ಏಕಾಗ್ರತೆ, ನಿಷ್ಠೆ, ಶ್ರದ್ಧೆಯಿಂದ ಕೆತ್ತನೆ ಮಾಡಿದ್ದರಿಂದ ಸುಂದರವಾದ ಬಾಲರಾಮ ರೂಪ ತಳೆದಿದ್ದಾನೆ ಎಂದು ಹೇಳಿದರು. ಬಾಲರಾಮನ ಮೂರ್ತಿ ಕೆತ್ತನೆ ಮಾಡಲು ಮೂವರು ಶಿಲ್ಪಿಗಳಿಗೆ ಜವಬ್ದಾರಿ ನೀಡಲಾಗಿತ್ತು. ಅರುಣ್ ಯೋಗಿರಾಜ್ ಹೇಳುವಂತೆ ಮೂವರು ಪೈಪೋಟಿ ಅಥವಾ ಸ್ಪರ್ಧೆಯಿಂದ ಬಾಲರಾಮನ ಮೂರ್ತಿ ಕೆತ್ತನೆ ಮಾಡಲಿಲ್ಲ. ಬದಲಿಗೆ ಶ್ರದ್ಧೆಯಿಂದ ಕೆತ್ತನೆ ಮಾಡಿದರು. ಇದರಿಂದ ಶಿಲ್ಪ ಬಾಲರಾಮನ ಸುಂದರ ರೂಪ ತಳೆಯಿತು ಎಂದು ಶ್ರೀಗಳು ಹೇಳಿದರು.

ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆ ಆಗಿರುವ ಬಾಲರಾಮನ ಮೂರ್ತಿಯನ್ನು ಅರುಣ್ ಯೋಗಿರಾಜ್ ಕೆತ್ತನೆ ಮಾಡುವ ಮೂಲಕ ಮೈಸೂರು ಜನರು ಹೆಮ್ಮೆ ಪಡುವಂತಾಗಿದೆ. ಅರುಣ್ ಯೋಗಿರಾಜ್ ತಂದೆ ಕೂಡ ರಾಷ್ಟ್ರ ಪ್ರಶಸ್ತಿ ವಿಜೇತ ಶಿಲ್ಪಿಯಾಗಿದ್ದರು. ವಂಶ ಪಾರಂಪರ್ಯವಾಗಿ ಈ ಕಲೆ ಅವರಿಗೆ ಬಳುವಳಿಯಾಗಿ ಬಂದಿದೆ. ಆದ ಕಾರಣದಿಂದಲೇ ಅರುಣ್ ಯೋಗಿರಾಜ್ ಸುಂದರ ಬಾಲರಾಮ ಮೂರ್ತಿ ಕೆತ್ತನೆ ಮಾಡಲು ಸಾಧ್ಯವಾಯಿತು ಎಂದು ತಿಳಿಸಿದರು.

ಅಯೋಧ್ಯೆಯ ರಾಮಮಂದಿರ ಉತ್ತರ ಹಾಗೂ ದಕ್ಷಿಣ ಭಾರತದ ಕಲೆಯ ಸಮ್ಮಿಳಿತವಾಗಿದೆ. ಈಗ ಶೇಕಡ 30ರಷ್ಟು ದೇವಾಲಯ ನಿರ್ಮಾಣ ಕಾರ್ಯವಾಗಿದ್ದು, ಇನ್ನು 70ರಷ್ಟು ನಿರ್ಮಾಣ ಆಗಬೇಕಿದೆ. ಇನ್ನು ಮೂರು ವರ್ಷದಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ದೇಶ–ವಿದೇಶಗಳಿಂದ ಲಕ್ಷಾಂತರ ಭಕ್ತರು ಅಯೋಧ್ಯೆಗೆ ಭೇಟಿ ನೀಡುವ ಕಾರಣ ಅಲ್ಲಿ ಅತಿಥಿ ಗೃಹ ಸೇರಿದಂತೆ ಹಲವು ಸೌಕರ್ಯವನ್ನು ಒದಗಿಸಲಾಗುವುದು ಎಂದು ಶ್ರೀಗಳು ಹೇಳಿದರು.

ಅರುಣ್ ಯೋಗಿರಾಜ್, ರಾಮದಾಸ್, ಶ್ರೀನಿವಾಸ್ ಸಮಾಗಮ

ಈ ಮೂವರಿಗೆ ಬಿಜೆಪಿ ವತಿಯಿಂದ ಸನ್ಮಾನ



ಮೈಸೂರಿನ ಅರುಣ್ ಯೋಗಿರಾಜ್ ಮನೆಯಲ್ಲಿ ಶುಕ್ರವಾರ ಬಿಜೆಪಿ ವತಿಯಿಂದ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಇತರರು ಬಾಲರಾಮ ಮೂರ್ತಿ ಕೆತ್ತನೆ ಮಾಡಿರುವ ಅರಣ್ ಯೋಗಿರಾಜ್, ರಾಮದಾಸ್ ಹಾಗೂ ಶ್ರೀನಿವಾಸ್ ಅವರನ್ನು ಸನ್ಮಾನಿಸಿದರು.

ಮೈಸೂರು, ಜ.27(ಬಿಎಲ್ ಯು)– ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪಿಸಿರುವ ಬಾಲರಾಮನ ಕೆತ್ತನೆ ಮಾಡಿರುವ ಅರುಣ್ ಯೋಗಿರಾಜ್, ಕೆತ್ತನೆಗೆ ಬಳಸಿರುವ ಕಲ್ಲು ದೊರೆತ ಜಮೀನಿನ ಮಾಲೀಕ ರಾಮದಾಸ್ ಹಾಗೂ ಕಲ್ಲನ್ನು ಭೂಮಿಯಿಂದ ಹೊರ ತೆಗೆದ ಗುತ್ತಿಗೆದಾರ ಶ್ರೀನಿವಾಸ್ ಸಮಾಗಮವಾಯಿತು.

ಮೈಸೂರಿನ ಬಸವೇಶ್ವರ ವೃತ್ತದಲ್ಲಿರುವ ಅರುಣ್ ಯೋಗಿರಾಜ್ ಮನೆಯಲ್ಲಿ ಶುಕ್ರವಾರ ಈ ಮೂವರು ಒಟ್ಟಾಗಿ ಸೇರಿದರು. ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್. ಶ್ರೀವತ್ಸ ಹಾಗೂ ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ ಈ ಮೂವರನ್ನು ಸನ್ಮಾನಿಸಿದರು.

ಬಾಲರಾಮ ಮೂರ್ತಿ ಪ್ರತಿಷ್ಠಾಪನೆಗೊಳ್ಳಲು ಕಾರಣರಾದ ಈ ಮೂವರನ್ನು ಈ ಸಂದರ್ಭದಲ್ಲಿ ನೆರೆದವರು ಹಾಡಿ ಹೊಗಳಿದರು. ಬಾಲರಾಮ ಮೂರ್ತಿಯ ಕೃಷ್ಣಶಿಲೆ ಭೂಮಿಯಿಂದ ಹೊರ ತೆಗೆದ ಶ್ರೀನಿವಾಸ್‌ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವಿಧಿಸಿರುವ 80 ಸಾವಿರ ರೂಪಾಯಿ ದಂಡವನ್ನು ಬಿಜೆಪಿ ನೀಡಲಿದೆ ಎಂದು ಇದೇ ವೇಳೆ ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರಿನ ಹಾರೋಹಳ್ಳಿಯ ರಾಮದಾಸ್ ಜಮೀನಿನಲ್ಲಿ ಕೃಷ್ಣಶಿಲೆ ತೆಗೆದು ಅಯೋಧ್ಯೆಗೆ ಕಳುಹಿಸಲು ಶ್ರೀನಿವಾಸ್‌ಗೆ ಲಕ್ಷಾಂತರ ರೂಪಾಯಿ ವೆಚ್ಚವಾಗಿದೆ. ಇದರ ಮಧ್ಯೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕೂಡ ದಂಡ ವಿಧಿಸಿತ್ತು ಇದನ್ನು ಪಾವತಿ ಮಾಡಲಾಗುವುದು ಎಂದು ಪ್ರತಾಪ್ ಸಿಂಹ ಹೇಳಿದರು.

ಮೈಸೂರು ಫೆಸ್ಟ್ ಅಂಗವಾಗಿ ಚಿತ್ರಕಲಾ ಸ್ಪರ್ಧೆ; ನೂರಾರು ಮಂದಿ ಭಾಗಿ



ಮಾನಸ ಗಂಗೋತ್ರಿ ಆವರಣದಲ್ಲಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮೈಸೂರು, ಜ.27(ಎಂಟಿವೈ)– ಮೈಸೂರು ಸಾಂಸ್ಕೃತಿಕ ಉತ್ಸವದ ಅಂಗವಾಗಿ ಶನಿವಾರ ಮಾನಸ ಗಂಗೋತ್ರಿ ಆವರಣದಲ್ಲಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ವಿಭಾಗದ ಮುಂಭಾಗ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಮೈಸೂರಿನ ವಿವಿಧ ಶಾಲಾ–ಕಾಲೇಜುಗಳ 150ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು, ತಮ್ಮ ಕಲ್ಪನೆಯಲ್ಲಿ ಮೈಸೂರು ನಗರ, ಮೈಸೂರಿಗೆ ರಾಜಮನೆತನದ ನಂಟು ಸೇರಿದಂತೆ ವಿವಿಧ ಚಿತ್ರಣವನ್ನು ಸ್ಥಳದಲ್ಲೇ ಬರೆದು ಗಮನ ಸೆಳೆದರು.

ಅಂತಿಮವಾಗಿ ಸ್ಪರ್ಧೆಯಲ್ಲಿ ರಚಿಸಿದ ಚಿತ್ರಗಳನ್ನು ನುರಿತ ಕಲಾವಿದರಿಂದ ಮೌಲ್ಯಮಾಪನ ಮಾಡಿಸಲಾಯಿತು. ಸೆಂಟ್ ಜೋಸೆಫ್ ಕಾಲೇಜಿನ ಬಿ.ಸಿ.ಕೃಷ್ಣ ಅವರ ಚಿತ್ರಕ್ಕೆ ಪ್ರಥಮ ಬಹುಮಾನ ಲಭಿಸಿದರೆ, ದ್ವಿತೀಯ ಬಹುಮಾನ ಎಸ್‌ಜೆಸಿಎಸ್ ಶಾಲೆಯ ಶ್ರೇಯಸ್ ಜೋಷಿ, ತೃತೀಯ ಬಹುಮಾನ ಪ್ರಫುಲ್ ರಾಘವೇಂದ್ರ ಅವರ ಪಾಲಾಯಿತು. ಸಮಾಧಾನಕರ ಬಹುಮಾನವನ್ನು ವಿಜಯ ವಿಠಲ ಕಾಲೇಜಿನ ನಿಖಿಲ್ ರಾಘವೇಂದ್ರ, ನೌಕಿಸ್ ಶಾಲೆಯ ಎಂ.ಜಿ.ಪೂರ್ವಿಕ, ಡಿಎಂಎಸ್ ಶಾಲೆಯ ಎಂ.ಭರತ್ ಕುಮಾರ್ ಚಿತ್ರಕ್ಕೆ ಲಭಿಸಿದೆ.

ಚಿತ್ರಸಂತೆ ಹಿನ್ನೆಲೆಯಲ್ಲಿ ನಡೆದ ಚಿತ್ರಕಲಾ ಸ್ಪರ್ಧೆ ನೋಡುಗರ ಕಣ್ಮನ ಸೆಳೆಯಿತು. ಅಲ್ಲದೆ, ವಿದ್ಯಾರ್ಥಿಗಳು ಸಂಭ್ರಮದಿಂದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಫೆ.4, ರಾಜ್ಯಮಟ್ಟದ ಸ್ಪರ್ಧೆ 'ಕಲಾಧರೆ–2024'



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಕಲಾಧರೆ–2024'ರ ಪೋಸ್ಟರ್ ಬಿಡುಗಡೆಗೊಳಿಸಿದರು.

ಮೈಸೂರು,ಜ.27(ಜಿಎ)–ಮೈಸೂರಿನ ಕಲಾದಾರೆ ಕಲ್ಚರಲ್ ಟ್ರಸ್ಟ್ ವತಿಯಿಂದ 23ನೇ ವರ್ಷದ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆ 'ಕಲಾಧರೆ–2024' ಅನ್ನು ಫೆ.4ರಂದು ರಾಮಕೃಷ್ಣನಗರದ ರಮಾ ಗೋವಿಂದ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಚಾಮರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆವರೆಗೆ ನೃತ್ಯ, ಸಂಗೀತ, ನಾಟಕ, ಚಿತ್ರಕಲೆ, ವೇಷ ಭೂಷಣ ಸ್ಪರ್ಧೆಗಳು ನಡೆಯಲಿದ್ದು, ವಿಜೇತರಾದ ಕಲಾವಿದರಿಗೆ ಪ್ರಶಸ್ತಿ, ಪ್ರಮಾಣ ಪತ್ರ ಮತ್ತು ಗೌರವ ಪುರಸ್ಕಾರ ನೀಡಲಾಗುತ್ತದೆ. ಸಂಜೆ 7 ಗಂಟೆ ಸಮಾರೋಪ ಸಮಾರಂಭ ನಡೆಯಲಿದ್ದು, ವಿಶೇಷ ಅತಿಥಿಗಳು ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನೃಪತುಂಗ ಕನ್ನಡ ಶಾಲೆಯ ಕಾರ್ಯದರ್ಶಿ ಸವಿತ ಪಿ.ಮಲ್ಲೇಶ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಉಮಾಪತಿ ಉಪಸ್ಥಿತರಿದ್ದರು.

ಫೆ.1, ಎಐಟಿಯುಸಿಯಿಂದ 'ಬೆಂಗಳೂರು ಚಲೋ'



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೆಚ್.ಆರ್.ಶೇಷಾದ್ರಿ ಮಾತನಾಡಿದರು.

ಮೈಸೂರು,ಜ.27(ಜಿಎ)–ಖಾಸಗೀಕರಣ ನೀತಿ, ಸರ್ಕಾರಿ ನೌಕರರಿಗೆ ವೇತನ ಆಯೋಗದ ಜಾರಿಗೆ ಕ್ರಮ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಎಐಟಿಯುಸಿ ಕಾರ್ಯಕರ್ತರು ಫೆ.1ರಂದು ಬೆಂಗಳೂರು ಚಲೋ ಹಾಗೂ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ ಎಂದು ಎಐಟಿಯುಸಿಯ ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ಆರ್.ಶೇಷಾದ್ರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದು ಹತ್ತು ವರ್ಷಗಳು ಕಳೆಯುತ್ತಿದ್ದು, ದೇಶದ ದುಡಿಯುವ ಜನತೆಯ ಸಂಕಷ್ಟಗಳು ತೀವ್ರವಾಗಿದೆ. ಕಾರ್ಪೊರೇಟ್ ಕಂಪನಿಗಳ ಪರವಾದ ಧೋರಣೆಗಳನ್ನು ಜಾರಿಗೊಳಿಸುತ್ತಿರುವ ಕೇಂದ್ರ ಸರ್ಕಾರದ ನೀತಿಗಳಿಂದ ಶ್ರೀಮಂತರ–ಬಡವರ ಅಂತರ ಮಿತಿ ಮೀರುತ್ತಿದ್ದು, ದೇಶ ವಿಪರೀತ ಸಾಲದ ಸುಳಿಗೆ ಸಿಲುಕುತ್ತಿದೆ. ಸಾರ್ವಜನಿಕ ವಲಯವನ್ನು ಅತ್ಯಂತ ದುರ್ಬಲಗೊಳಿಸುತ್ತಿರುವ ಕೇಂದ್ರ ಸರ್ಕಾರ ಕಾರ್ಮಿಕ ಕಾನೂನುಗಳ ಮತ್ತು ರೈತರ ಸಂಬಂಧಿತ ಕಾನೂನುಗಳನ್ನು ತಿದ್ದುಪಡಿ ಮಾಡುವುದರ ಮೂಲಕ ಹೋರಾಟದ ಹಕ್ಕನ್ನು ಮೊಟಕುಗೊಳಿಸುತ್ತಿದೆ ದೇಶದಲ್ಲಿ ನಿರುದ್ಯೋಗ, ಬೆಲೆ ಏರಿಕೆ, ಅಶಾಂತಿ ಹೆಚ್ಚುತ್ತಿದ್ದು ಸಂವಿಧಾನವನ್ನು ದುರ್ಬಲಗೊಳಿಸುವ ನೀತಿಗಳನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ ಎಂದು ಕಿಡಿಕಾರಿದರು.

ಮತ್ತೊಂದೆಡೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎಂಟು ತಿಂಗಳು ಕಳೆದಿದೆ. ಈ ಸರ್ಕಾರ ಅಧಿಕಾರಕ್ಕೆ ಬರಲು ಎ.ಐ.ಟಿ.ಯು.ಸಿ.ಯ ಕಾರ್ಯಕರ್ತರು ಶ್ರಮಿಸಿದ್ದಾರೆ. ಆದರೆ, ಸರ್ಕಾರ ಐದು ಗ್ಯಾರಂಟಿಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸಂಪನ್ಮೂಲ ಕ್ರೋಢೀಕರಣವೂ ಸೇರಿದಂತೆ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸುವ ನಿಟ್ಟಿನಲ್ಲೇ ಕಾರ್ಯಪ್ರವೃತ್ತರಾಗಿದೆಯೋ ಹೊರತು ಅಭಿವೃದ್ಧಿಯೂ ಸೇರಿದಂತೆ ಚುನಾವಣೆ ಪೂರ್ವದಲ್ಲಿ ಕಾರ್ಮಿಕ ವರ್ಗಕ್ಕೆ ನೀಡಿದ್ದ ಭರವಸೆಯನ್ನು ಈಡೇರಿಸಲು ಯಾವ ಪ್ರಯತ್ನವನ್ನೂ ನಡೆಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸ್ಕೀಂ ನೌಕರರಿಗೆ ನೀಡಿದ್ದ ಭರವಸೆ, ಕನಿಷ್ಟ ವೇತನ ಪರಿಷ್ಕರಣೆ, ಸಮಸ್ಯೆಗಳ ಪರಿಹಾರ, ಖಾಸಗೀಕರಣ ನೀತಿ, ಸರ್ಕಾರಿ ನೌಕರರಿಗೆ ವೇತನ ಆಯೋಗದ ತ್ವರಿತ ಜಾರಿ ಕ್ರಮ ಇತ್ಯಾದಿಗಳ ವಿಚಾರದಲ್ಲಿ ದಿವ್ಯ ಮೌನವನ್ನು ವಹಿಸಿದೆ. ಆದ್ದರಿಂದ, ರಾಜ್ಯದ ದುಡಿಯುವ ಜನತೆಯ ಹಲವಾರು ಜ್ವಲಂತ ಸಮಸ್ಯೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ಆಗ್ರಹಪಡಿಸಲು ಫೆ.1 ರಾಜ್ಯದ ನಾನಾ ಮೂಲೆಗಳ ಕಾರ್ಮಿಕರಿಂದ 'ಬೆಂಗಳೂರು ಚಲೋ' ಹಾಗೂ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪಧಾದಿಕಾರಿಗಳಾದ ಎನ್.ಕೆ.ದೇವದಾಸ್, ಸೋಮರಾಜೇ ಅರಸು, ಡಿ.ಜಗನ್ನಾಥ, ರಾಮು ಉಪಸ್ಥಿತರಿದ್ದರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನ

ಸಮ್ಮೇಳನ ಅಧ್ಯಕ್ಷರಾದ ಡಾ. ಚಿದಾನಂದ ಗೌಡರಿಗೆ ಗೌರವ ಪೂರ್ಣ ಆಮಂತ್ರಣ



ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕುವೆಂಪು ಅವರ ಅಳಿಯ ಹಾಗೂ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದ ಗೌಡ– ತಾರಿಣಿ ದಂಪತಿಗೆ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಮಂತ್ರಣ ನೀಡಲಾಯಿತು.

ಮೈಸೂರು, ಜ.27(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಫೆ8ರಂದು ನಡೆಯುವ ಚಾಮರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದ ಗೌಡ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಮಂತ್ರಣ ನೀಡಲಾಯಿತು.

ಮೈಸೂರಿನ ವಿವಿ ಪುರಂ 12 ಕ್ರಾಸ್, 5ನೇ ಮೇನ್‌ನಲ್ಲಿರುವ (ಕುವೆಂಪು ನಿವಾಸ) ಡಾ. ಕೆ.ಚಿದಾನಂದಗೌಡ ಅವರ ನಿವಾಸಕ್ಕೆ ಶಾಸಕ ಕೆ.ಹರೀಶ್‌ಗೌಡ ನೇತೃತ್ವದಲ್ಲಿ ಕನ್ನಡ ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳು ಶನಿವಾರ ಭೇಟಿ ನೀಡಿ ಆಹ್ವಾನ ನೀಡಿದರು.

ಈ ವೇಳೆ ಡಾ.ಚಿದಾನಂದಗೌಡ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿ ಬೇರೆಯವರ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಗರ ಪ್ರದೇಶ ಮಾತ್ರವಲ್ಲದೆ, ವಿಧಾನಸಭಾ ಕ್ಷೇತ್ರವಾರು ಕನ್ನಡ ಸಾಹಿತ್ಯ ಸಮ್ಮೇಳನ ಮಾಡುತ್ತಿರುವುದು ಶ್ಲಾಘನೀಯ. ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದಾಗ ನಗರ ಪ್ರದೇಶದಲ್ಲಿ ಬೇರೆ ಭಾಷೆಗಳ ಪ್ರಭಾವ ಹೆಚ್ಚಾಗಿರುವಂತೆ ಕಂಡು ಬರುತ್ತಿದೆ. ಇಂತಹ ಸನ್ನಿವೇಶದಲ್ಲಿ ಕನ್ನಡ ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ. ಸಮ್ಮೇಳನದ ಮೂಲಕ ಕನ್ನಡ ಭಾಷೆ ಕುರಿತಂತೆ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಕಸಾಪ ನಗರಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮೈಸೂರಿನ ಕಲಾಮಂದಿರದಲ್ಲಿ ಫೆ8ರಂದು ಚಾಮರಾಜ ವಿಧಾನಸಭಾ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ. ಈ ಸಮ್ಮೇಳನದ ಅಧ್ಯಕ್ಷರಾಗಿ ಡಾ.ಚಿದಾನಂದಗೌಡ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿ, ಇಂದು ಆಮಂತ್ರಣ ನೀಡಿದ್ದೇವೆ. ಸಮ್ಮೇಳನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಹಾಸ್ಯಸಾಹಿತಿ ಪ್ರೊ.ಕೃಷ್ಣೇಗೌಡ ಸೇರಿದಂತೆ ಹಲವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಇತ್ತೀಚಿಗೆ ರಾಜ್ಯ ಸರ್ಕಾರ ರಾಜ್ಯದಲ್ಲಿ ಕನ್ನಡ ಅನುಷ್ಠಾನದ ಬಗ್ಗೆ ಕೈಗೊಂಡಿರುವ ಆಡಳಿತಾತ್ಮಕ ನಿರ್ಧಾರಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ಇದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕಾದರೆ ಸ್ಥಳೀಯರಲ್ಲಿ ಕನ್ನಡ ಜಾಗೃತಿ ಮೂಡಿಸಬೇಕಾಗಿದೆ. ಆ ನಿಟ್ಟಿನಲ್ಲಿ ವಿಧಾನಸಭಾ ಕ್ಷೇತ್ರವಾರು ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಚಾಮರಾಜ ಕ್ಷೇತ್ರದಲ್ಲಿ ನಡೆಯುತ್ತಿರುವ ಮೊದಲ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಾಗಿ ಆಚರಿಸಬೇಕು. ರಾಷ್ಟ್ರಕವಿ ಕುವೆಂಪು ಅವರ ಅಳಿಯರಾದ ಡಾ.ಚಿದಾನಂದ ಗೌಡ ಅವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಹೆಮ್ಮೆಪಡುವ ಸಂಗತಿ. ಶ್ರೀಯುತರು ಕನ್ನಡ ಭಾಷೆಗಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ನಗರ ಪ್ರದೇಶದ ಜನರಲ್ಲಿ ಕನ್ನಡ ಭಾಷೆ ಕುರಿತಂತೆ ಅರಿವು ಮೂಡಿಸಲು ಈ ಸಮ್ಮೇಳನ ಮಹತ್ವದ ಪಾತ್ರವಹಿಸಲಿದೆ ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ನಿಕಟಪೂರ್ವ ಅಧ್ಯಕ್ಷರಾದ ಎಂ.ಚಂದ್ರಶೇಖರ್, ಡಾ. ವೈ.ಡಿ. ರಾಜಣ್ಣ, ಉಪಾಧ್ಯಕ್ಷ ಟಿ.ತ್ಯಾಗರಾಜ್, ಸಂಘಟನಾ ಕಾರ್ಯದರ್ಶಿ ಮೈನಾ.ಲೋಕೇಶ್, ಮುಖಂಡರಾದ ರವಿನಂದನ್, ಹೆಚ್.ಎಸ್. ಪ್ರಕಾಶ್, ರವಿಕುಮಾರ, ಮಹೇಶ್, ಲೋಕೇಶ್ ಕುಮಾರ್ ಹಾಗೂ ಮತ್ತಿತರರು ಡಾ.ಚಿದಾನಂದ ಗೌಡ–ತಾರಿಣಿ ದಂಪತಿಗೆ ಪುಷ್ಪಗುಚ್ಛವನ್ನು ನೀಡಿ ಗೌರವಿಸಿದರು.

ಚಾಮುಂಡಿಬೆಟ್ಟದಲ್ಲಿ ರೋಪ್‌ವೇ ; ಪಾರಂಪರಿಕತೆ ರಕ್ಷಣೆ ದೃಷ್ಟಿಕೋನದಲ್ಲಿ ಪರಿಶೀಲನೆ

ವಿರೋಧದ ಹಿನ್ನೆಲೆಯಲ್ಲಿ ತಜ್ಞರೊಂದಿಗೆ ಚರ್ಚಿಸಿ ಸೂಕ್ತ ಕ್ರಮ; ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್



ಮೈಸೂರು,ಜ.27(ಪಿಎಂ)– ಚಾಮುಂಡಿಬೆಟ್ಟದಲ್ಲಿ ರೋಪ್‌ವೇ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಆದರೆ ಅದರ ಬಗ್ಗೆ ವಿರೋಧ ಇರುವ ಕಾರಣ ತಜ್ಞರೊಂದಿಗೆ ಚರ್ಚೆ ಮಾಡಬೇಕು. ಪಾರಂಪರಿಕತೆ ರಕ್ಷಣೆಯ ದೃಷ್ಟಿಕೋನದಲ್ಲೂ ಅದನ್ನು ಮಾಡಬೇಕಾ? ಅಥವಾ ಮಾಡಬಾರದಾ? ಎಂದು ಪರಿಶೀಲಿಸಬೇಕಿದೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಹೇಳಿದರು.

ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಅವಶೇಷಗಳ ಛಾಯಾಚಿತ್ರ ಪ್ರದರ್ಶನದ ಗ್ಯಾಲರಿ ಉದ್ಘಾಟನೆ ವೇಳೆ ಅವರು ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಚಾಮುಂಡಿಬೆಟ್ಟದ ರೋಪ್‌ವೇ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳೊಂದಿಗೂ ಮಾತನಾಡುತ್ತೇನೆ. ನಂತರ ಸೂಕ್ತ ನಿರ್ಣಯ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟ ಪ್ರಾಧಿಕಾರ ರಚನೆ ಸಂಬಂಧ ಈಗಾಗಲೇ ಕ್ರಮ ವಹಿಸಿದ್ದೇವೆ. ಅಲ್ಲದೆ, ಪ್ರಸಾದ್ ಯೋಜನೆಯಡಿ ಸುಮಾರು 45 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಈಗಾಗಲೇ ಸಚಿವ ಸಂಪುಟ ಅನುಮೋದನೆ ನೀಡಿದೆ. ದಸರಾ ಜೊತೆಗೆ ಈ ಭಾಗದಲ್ಲಿ ಏನೇನು ಪ್ರವಾಸೋದ್ಯಮ ಅಭಿವೃದ್ಧಿ ಮಾಡಬೇಕೆಂಬ ಬಗ್ಗೆ ಪ್ರಕ್ರಿಯೆ ಶುರು ಮಾಡಿದ್ದೇವೆ ಎಂದರು.

ಸೋಮನಾಥಪುರಕ್ಕೆ ಬಸ್ ಸೌಕರ್ಯ: ಯುನೆಸ್ಕೋ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಮಾನ್ಯತೆ ಪಡೆದಿರುವ ಸೋಮನಾಥಪುರ ಚೆನ್ನಕೇಶವ ದೇವಾಲಯಕ್ಕೆ ಬಸ್ ಸೌಲಭ್ಯ ಹಾಗೂ ಮೂಲಸೌಕರ್ಯಗಳ ಕೊರತೆ ಇರುವ ಸಂಬಂಧ ಪ್ರತಿಕ್ರಿಯಿಸಿ, ಮೂಲಸೌಕರ್ಯಗಳನ್ನು ತತ್‌ಕ್ಷಣಕ್ಕೆ ಕಲ್ಪಿಸಲು ಸಾಧ್ಯವಾಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೂ ತಾತ್ಕಾಲಿಕವಾಗಿ ಏನು ಮಾಡಲು ಸಾಧ್ಯ ಎಂಬುದನ್ನು ಶೀಘ್ರವೇ ಪರಿಶೀಲಿಸಲಾಗುವುದು. ಬಸ್ ಸೌಲಭ್ಯ ಕಡಿಮೆಯಾಗಿದೆ ಎಂಬುದರ ಮಾಹಿತಿ ಇಲ್ಲ. ಈ ಸಂಬಂಧ ನಾನೇ ಖುದ್ದಾಗಿ ಕೆಎಸ್‌ಆರ್‌ಟಿಸಿ ಡಿಸಿ ಅವರೊಂದಿಗೆ ಮಾತನಾಡುತ್ತೇನೆ. ಸೋಮನಾಥಪುರಕ್ಕೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ರೀತಿ ಮಾಡಲಾಗುವುದು ಎಂದು ಹೇಳಿದರು.

ಹಾಗೇ ಹೇಳಿದ್ದರೋ ಇಲ್ಲವೋ: ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಶಿವಮೊಗ್ಗದಲ್ಲಿ ಸಂಸದ ಬಿ.ವೈ.ರಾಘವೇಂದ್ರ ಮತ್ತೆ ಗೆಲ್ಲಿಸಬೇಕೆಂದು ಕರೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿ, ಹಾಗೇ ಹೇಳಿದ್ದರೋ ಇಲ್ಲವೋ. ಏಕೆಂದರೆ ಶಾಮನೂರು ಶಿವಶಂಕರಪ್ಪ ನಮ್ಮ ಪಕ್ಷದ ಹಿರಿಯ ಹಾಗೂ ಜವಾಬ್ದಾರಿಯುತ ನಾಯಕರು. ಹಾಗೇ ಅವರು ಹೇಳಿರಲಿಕ್ಕೆ ಸಾಧ್ಯವಿಲ್ಲ. ಮಾಧ್ಯಮದಲ್ಲಿ ತಪ್ಪು ವರದಿ ಆಗಿರಬಹುದು ಅಥವಾ ತಪ್ಪು ಗ್ರಹಿಕೆಯಾಗಿರಬಹುದು. ನಾನು ಅದನ್ನು ಪರಿಶೀಲಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಲ್ಲಿ ಗಣರಾಜ್ಯೋತ್ಸವ



ಮೈಸೂರು, ಜ. 27– ನಗರದ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶುಕ್ರವಾರ 75ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಲೋಕಸಭಾ ಸಂಸದರಾದ ಪ್ರತಾಪ್ ಸಿಂಹ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ದೇಶದ ಪ್ರಗತಿಯಲ್ಲಿ ಯುವ ಶಕ್ತಿಯ ಪಾತ್ರ ಅಪಾರ ಮಹತ್ವದಾಗಿದೆ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ದೇಶದ ಅಮೂಲ್ಯ ಸಂಪತ್ತಾಗಿ ರೂಪಗೊಳಿಸುವಲ್ಲಿ ಬಹುಮುಖ್ಯ ಪಾತ್ರವಹಿಸಿವೆ. ಉನ್ನತ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಸಂಶೋಧನೆಯಲ್ಲಿ ತೊಡಗಬೇಕೆಂದು ತಿಳಿಸಿದರು. ವಿದ್ಯಾವರ್ಧಕ ಕಾಲೇಜಿನ ಪ್ರಾಂಶುಪಾಲ ಡಾ. ಬಿ ಸದಾಶಿವೇಗೌಡ, ಈ ಸಾಲಿನ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ತಮ್ಮ ಭಾಷಣದಲ್ಲಿ ಅಭಿನಂದನೆ ಸಲ್ಲಿಸುತ್ತಾ "ಯಾವುದೇ ಕ್ಷೇತ್ರದಲ್ಲಿ ಶ್ರದ್ಧೆಯಿಂದ ನಮ್ಮನ್ನು ನಾವು ತೊಡಗಿಸಿಕೊಂಡರೆ ಉನ್ನತ ಸಾಧನೆ ಮಾಡಲು ಸಾಧ್ಯ, ಮೈಸೂರು ಸ್ವಚ್ಛ ನಗರಿ ಎಂಬ ಗರಿಮೆಯನ್ನು ಮರಳಿ ಸ್ಥಾಪಿಸಲು ಪ್ರತಿಯೊಬ್ಬರು ಕೈ ಜೋಡಿಸಬೇಕು ಹಾಗೂ ದೇಶದ ಅಭಿವೃದ್ಧಿಗೆ ಸಹಕಾರಿಯಾಗಬೇಕು ಎಂದು ನೆರೆದಿದ್ದ ವಿದ್ಯಾರ್ಥಿ ಸಮೂಹವನ್ನು ಆಗ್ರಹಿಸಿದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಜಿ ಶ್ರೀಶೈಲ ರಾಮಣ್ಣವರ್, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮೂರನೇ ಪುಟದಿಂದ

ಬಿ.ವೈ.ರಾಘವೇಂದ್ರರನ್ನು ಮತ್ತೊಮ್ಮೆ ಗೆಲ್ಲಿಸಿ

ಅಂತೆಯೇ ಇನ್ನೇನು ಎರಡು ತಿಂಗಳಲ್ಲಿ ಲೋಕಸಭೆ ಚುನಾವಣೆ ಬರಲಿದೆ. ರಾಘವೇಂದ್ರ ಅವರೇ ಸ್ಪರ್ಧಿಸುತ್ತಾರೆ. ಬಿಜೆಪಿಯಿಂದ ಬೇರೆ ಯಾರಿಗೂ ಟಿಕೆಟ್ ನೀಡುವುದಿಲ್ಲ. ಅವರು ಮತ್ತೆ ಸ್ಪರ್ಧೆ ಮಾಡೇ ಮಾಡುತ್ತಾರೆ. ಅವರು ಕ್ಷೇತ್ರದ ಅಭಿವೃದ್ಧಿಗೆ ಎಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ಸಮತೂಕ ಮಾಡಿ ಅವರನ್ನು ಗೆಲ್ಲಿಸುವಂತಹ ದೊಡ್ಡ ಕರ್ತವ್ಯ ನಿಮ್ಮದಾಗಿದೆ. ಕ್ಷೇತ್ರದ ಜನತೆಗೆ ಏನು ಬೇಕು? ಅವರು ಬಯಸಿದ್ದು ಅಭಿವೃದ್ಧಿ. ಅಂತಹ ನಾಯಕನನ್ನು ಆಯ್ಕೆ ಮಾಡುವುದು ನಮ್ಮ ಕರ್ತವ್ಯ. ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರು ಅಭಿವೃದ್ಧಿಗೆ ಆದ್ಯತೆ ನೀಡಿ ಮುಂಬರುವ ಚುನಾವಣೆಯಲ್ಲಿ ರಾಘವೇಂದ್ರ ಅವರನ್ನು ಗೆಲ್ಲಿಸಿ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಕೂಡ ಆಗಿರುವ ಶಾಮನೂರು ಶಿವಶಂಕರಪ್ಪ ಹೇಳಿದರು. ಗುರು ಬಸವಶ್ರೀ ಪ್ರಶಸ್ತಿ ಸ್ವೀಕರಿಸಿದ ಸಂತಸ ವ್ಯಕ್ತಪಡಿಸಿದ ಶಿವಶಂಕರಪ್ಪ, ದಾವಣಗೆರೆ ಮಹಾಸಭಾದ ಸಮಾವೇಶದಲ್ಲಿ ಮಾಡಿದ ನಿರ್ಣಯದಂತೆ 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕರನ್ನಾಗಿ ನೇಮಿಸುವಂತೆ ಸರಕಾರಕ್ಕೆ ಮನವಿ ಮಾಡಿರುವುದಾಗಿ ಹೇಳಿದರು. ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿ ಬಸವಣ್ಣನನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಅನುಭವ ಮಂಟಪದ ಮೂಲಕ ಸಮುದಾಯಗಳನ್ನು ಒಗ್ಗೂಡಿಸಿದ ಮಹಾನ್ ನಾಯಕ ಬಸವಣ್ಣ ಎಂದು ಶಿವಶಂಕರಪ್ಪ ಹೊಗಳಿದರು.

ಶಿವಮೊಗ್ಗ ಅಭಿವೃದ್ಧಿಗೆ ಬದ್ಧ: ಬಳಿಕ ಮಾತನಾಡಿದ ಸಂಸದ ಬಿವೈ ರಾಘವೇಂದ್ರ ಗುರು ಹಿರಿಯರ ಮಾರ್ಗದರ್ಶನದಲ್ಲಿ ಭಾರತ ದೇಶವು ಸದೃಢವಾಗಿ ಮುನ್ನಡೆಯುತ್ತಿದ್ದು, ಶ್ರೇಷ್ಠ ಧಾರ್ಮಿಕ ಹಿನ್ನೆಲೆ ಹೊಂದಿರುವ ಐತಿಹಾಸಿಕ ದೇಶ ನಮ್ಮದು ಎಂದು ಸಂಸದ ಬಿ.ವೈ.ರಾಘವೇಂದ್ರ ಹೇಳಿದರು. ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮ ಆಗುತ್ತಿದ್ದು, ಇಂದು ಸವಳಂಗ ರಸ್ತೆ ಮೇಲ್ಸೇತುವೆ ಉದ್ಘಾಟನೆಯಾಗಿದೆ. ಎಫ್.ಎಂ, ಹೆದ್ದಾರಿ ಕಾಮಗಾರಿ, ಪ್ರವಾಸಿ ತಾಣಗಳ ಅಭಿವೃದ್ಧಿ ಹೀಗೆ ನೂರಾರು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಅಲ್ಲಮ ಪ್ರಭು ಜನ್ಮಸ್ಥಳ ಅಭಿವೃದ್ಧಿಗೆ ಕೇಂದ್ರದ ಪುರಾತತ್ವ ಇಲಾಖೆ ಒಪ್ಪಿಗೆ ನೀಡಿದ್ದು, 4 ಕೋಟಿ ರೂ. ವೆಚ್ಚದಲ್ಲಿ ಸರಕಾರದಿಂದ ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ಡಿಸಿಎಂ ಡಿಕೆಶಿ ಸಿಡಿಮಿಡಿ

ಮೋದಿ ಬೆಂಬಲಿಸಿ, ರಾಘವೇಂದ್ರ ಅವರಿಗೆ ಮತ ನೀಡಿ ಎಂದು ಶಾಮನೂರು ಹೇಳಿದ್ದಾರೆ. ಇದು ಏನು ಸಂದೇಶ ನೀಡುತ್ತದೆ ಎಂಬುದು ಗೊತ್ತಿಲ್ಲಾ, ಕಾಂಗ್ರೆಸ್ ಮನೆಯೊಂದು ಮೂರು ಬಾಗಿಲಾಗಿದೆ. ಮುಂದೆ ಒಡೆದು ನೂರು ಚೂರು ಆಗಲಿದೆ ಎಂದು ಹೇಳಿದ್ದಾರೆ. ಶಾಮನೂರು ಶಿವಶಂಕರಪ್ಪ ಹೇಳಿಕೆಗೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ರಾಘವೇಂದ್ರ ಅವರ ಕಾರ್ಯವನ್ನು ಎಲ್ಲರೂ ಮೆಚ್ಚಿದ್ದಾರೆ. ಅದನ್ನು ಬಹಿರಂಗವಾಗಿ ಪ್ರಕಟಪಡಿಸಿದ್ದಕ್ಕಾಗಿ ಶಾಮನೂರು ಶಿವಶಂಕರಪ್ಪ ಅವರನ್ನು ಅಭಿನಂದಿಸುತ್ತೇನೆ ಎಂದು ಹೇಳಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಿರ್ನಾಮ ಮಾಡಬೇಕು ಎಂಬ ಜಗದೀಶ್ ಶೆಟ್ಟರ್ ಹೇಳಿಕೆಗೆ ಕೂಡ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್, ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ನಿರ್ನಾಮ ಮಾಡಲು ಶೆಟ್ಟರ್ ಕರೆ ನೀಡಿದ್ದರು. ಇದೇ ಶೆಟ್ಟರ್ ಬಿಜೆಪಿ ನಿರ್ನಾಮ ಮಾಡಿ ಎಂದು ಕರೆ ನೀಡಿದ್ದರು ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

ಮೈಸೂರಲ್ಲಿ ಸಂಭ್ರಮದ ಗಣರಾಜ್ಯೋತ್ಸವ ಆಚರಣೆ



ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಶುಕ್ರವಾರ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಪೊಲೀಸರಿಂದ ಪರೇಡ್ ವಂದನೆ ಸ್ವೀಕರಿಸಿದರು.

ಮೈಸೂರು, ಜ. 27(ಆರ್‌ಕೆ)– ಜಿಲ್ಲಾಡಳಿತದ ವತಿಯಿಂದ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಶುಕ್ರವಾರ ದೇಶಪ್ರೇಮದೊಂದಿಗೆ ಸಂಭ್ರಮದಿಂದ 75ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಪೊಲೀಸರಿಂದ ಪರೇಡ್ ವಂದನೆ ಸ್ವೀಕರಿಸಿ, ನಂತರ ಧ್ವಜಾರೋಹಣ ನೆರವೇರಿಸಿದರು. ನಂತರ ಮಾತನಾಡಿದ ಅವರು, ನೂರಾರು ವರ್ಷಗಳ ಸುದೀರ್ಘ ಹೋರಾಟದ ಮೂಲಕ 1947ರ ಆಗಸ್ಟ್ 15ರಂದು ದಾಸ್ಯದ ಸರಪಳಿಯಿಂದ ಕಳಚಿಕೊಂಡು, 1950ರ ಜನವರಿ 26ರಂದು ನಮ್ಮದೇ ಆದ ಸಂವಿಧಾನ ಹೊಂದುವ ಕನಸು ನನಸಾಯಿತು ಎಂದರು.

ಇದೀಗ ನಾವು ಒಕ್ಕೂಟ ವ್ಯವಸ್ಥೆಯಲ್ಲಿ ರಾಷ್ಟ್ರದ ಸಾರ್ವಭೌಮತ್ವ ಗೌರವಿಸಿ ಸ್ವತಂತ್ರವಾಗಿ ಬದುಕುತ್ತಿದ್ದೇವೆ. ಡಾ. ಬಿ.ಆರ್. ಅಂಬೇಡ್ಕರ್ ಕಟ್ಟಿಕೊಟ್ಟ ಸಂವಿಧಾನದಲ್ಲಿ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸಾಕಾರಗೊಳಿಸಿ ಪ್ರಜಾಪ್ರಭುತ್ವದ ಬೇರುಗಳನ್ನು ಸದೃಢಗೊಳಿಸುವುದೇ ಸಂವಿಧಾನದ ಧ್ಯೇಯವಾಗಿದೆ ಎಂದು ಅವರು ತಿಳಿಸಿದರು. ಭಾರತವನ್ನು ಬಲಾಢ್ಯ ಗಣರಾಜ್ಯವನ್ನಾಗಿ ರೂಪಿಸುವಲ್ಲಿ ತನು–ಮನ ತ್ಯಾಗ ಮಾಡಿದ ನಾಯಕರು, ದೇಶಾಭಿಮಾನಿಗಳನ್ನು ಸ್ಮರಿಸುತ್ತಾ ರಾಷ್ಟ್ರವನ್ನು ಅಭ್ಯುದಯದ ಪಥದಲ್ಲಿ ಮುನ್ನಡೆಸುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯ. ವಿವಿಧತೆಯಲ್ಲಿ ಏಕತೆ ಸಾರುವ, ಸಮಗ್ರತೆ ಕಾಪಾಡಿಕೊಂಡು ಸದೃಢ ರಾಷ್ಟ್ರವಾಗಿ ಭಾರತ ಬೆಳೆದು ನಿಂತಿದೆ ಎಂದು ಸಚಿವರು ನುಡಿದರು.

ರಾಜ್ಯ ಸರ್ಕಾರವು ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ವಿದ್ಯಾನಿಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಬಡವರು, ದಲಿತರು, ಹಿಂದುಳಿದವರು ಹಾಗೂ ಮಹಿಳೆಯರಿಗೆ ನೆರವಾಗಿ ನಿಂತಿದೆ. ಬರದಿಂದ ಸಂಕಷ್ಟಕ್ಕೀಡಾಗಿರುವ ಜಿಲ್ಲೆಯ 72,277 ರೈತರಿಗೆ 12.81 ಕೋಟಿ ರೂ. ಪರಿಹಾರ ಹಣ ವಿತರಿಸಲಾಗಿದೆ ಎಂದು ಡಾ. ಹೆಚ್.ಸಿ. ಮಹದೇವಪ್ಪ ನುಡಿದರು.

ಕೃಷಿ ಇಲಾಖೆಯಿಂದ 13,536 ಕ್ವಿಂಟಾಲ್ ಬಿತ್ತನೆ ಬೀಜ, 8.66 ಕೋಟಿ ರೂ. ವೆಚ್ಚದ ಯಂತ್ರೋಪಕರಣಗಳನ್ನು 2,133 ರೈತರಿಗೆ ಒದಗಿಸಲಾಗಿದೆ. ತೋಟಗಾರಿಕೆ ಇಲಾಖೆಯಿಂದ 1,310 ಮಂದಿಗೆ 616.85 ಲಕ್ಷ ರೂ. ಸವಲತ್ತು ಒದಗಿಸಿ ಜೇನು ಕೃಷಿ ಅವಲಂಬಿಸಿದ 45 ಫಲಾನುಭವಿಗಳಿಗೆ ನೀಡಲಾಗಿದೆ ಎಂದು ಅವರು ತಿಳಿಸಿದರು. ಗೃಹಲಕ್ಷ್ಮಿ ಯೋಜನೆಯಡಿ ಮೈಸೂರು ಜಿಲ್ಲೆಯ 6,63,626 ಮಹಿಳೆಯರು ಫಲಾನುಭವಿಗಳಾಗಿದ್ದಾರೆ. ಶಿಶು ಅಭಿವೃದ್ಧಿ ಯೋಜನೆಯಲ್ಲಿ 1,70,870 ಮಂದಿಗೆ 6,946.64 ಲಕ್ಷ ರೂ. ಖರ್ಚು ಮಾಡಲಾಗಿದೆ. ರೇಷ್ಮೆ ಹುಳು ಸಾಕಾಣಿಕೆ ನಿರತರಿಗೆ 375.99 ಲಕ್ಷ ರೂ. ಸಹಾಯಧನ ಪಾವತಿಸಲಾಗಿದೆ. ಮೆಟ್ರಿಕ್ ನಂತರದ ಪ.ಜಾತಿ ವಿದ್ಯಾರ್ಥಿಗಳಿಗೆ 851.68 ಲಕ್ಷ ರೂ. ಪ್ರೋತ್ಸಾಹ ಧನ ಮಂಜೂರು ಮಾಡಲಾಗಿದೆ ಎಂದು ಡಾ.ಮಹದೇವಪ್ಪ ನುಡಿದರು.

ಜೇನು ಕುರುಬ ಜನಾಂಗದವರಿಗಾಗಿ 1,734 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 12,873 ಕುಟುಂಬಗಳಿಗೆ ಪೌಷ್ಟಿಕ ಆಹಾರ ಪದಾರ್ಥ ತಲುಪಿಸಲಾಗುತ್ತಿದ್ದು, ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 9,00,724 ಗ್ರಾಹಕರು ಅರ್ಹರಾಗಿದ್ದು, 8,89,986 ಗ್ರಾಹಕರು ಪ್ರಯೋಜನ ಪಡೆಯುತ್ತಿದ್ದಾರೆ ಎಂದ ಡಾ. ಮಹದೇವಪ್ಪ, 'ಶಕ್ತಿ'ಯಡಿ 3.59 ಲಕ್ಷ ಮಹಿಳೆಯರು ಪ್ರತೀ ದಿನ ಉಚಿತವಾಗಿ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸುತ್ತಿದ್ದಾರೆ ಎಂದರು. ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಎಡಿಸಿ ಆರ್. ಲೋಕನಾಥ್, ದಕ್ಷಿಣ ವಲಯ ಡಿಐಜಿಪಿ ಡಾ. ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯ್ತಿ ಸಿಇಓ ಕೆ.ಎಂ. ಗಾಯತ್ರಿ, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಸೇರಿದಂತೆ ಇತರ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಜಿಲ್ಲೆಯಾದ್ಯಂತ ಸಂಚರಿಸಲು ಸಿದ್ಧಪಡಿಸಿರುವ ಸಂವಿಧಾನ ಜಾಗೃತಿ ಜಾಥಾ ಸ್ತಬ್ಧಚಿತ್ರಕ್ಕೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಶುಕ್ರವಾರ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.



ಶಾಲಾ ವಿದ್ಯಾರ್ಥಿಗಳು ದೇಶಭಕ್ತಿ ನೃತ್ಯ ಪ್ರದರ್ಶನ ಮಾಡಿ ಗಮನ ಸೆಳೆದರು.

ಸಂವಿಧಾನ ಜಾಗೃತಿ ಜಾಥಾ: ಮೈಸೂರು ಜಿಲ್ಲೆಯಾದ್ಯಂತ ಸಂಚರಿಸಲು ಸಿದ್ಧಪಡಿಸಿರುವ ಸಂವಿಧಾನ ಜಾಗೃತಿ ಜಾಥಾ ಸ್ತಬ್ಧಚಿತ್ರಕ್ಕೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಶುಕ್ರವಾರ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಅದು ಜಿಲ್ಲೆಯ 256 ಗ್ರಾಮ ಪಂಚಾಯ್ತಿಗಳು, 15 ಸ್ಥಳೀಯ ಸಂಸ್ಥೆಗಳಲ್ಲಿ ಸಂಚರಿಸಿ ಸಂವಿಧಾನದ ಬಗ್ಗೆ ಅರಿವು ಮೂಡಿಸಲಿದೆ. ಸಿಟಿ ಸಿವಿಲ್, ಸಿಎಆರ್, ಡಿಎಆರ್, ಕೆಎಸ್‌ಆರ್‌ಪಿ, ಟ್ರಾಫಿಕ್, ಮಹಿಳಾ, ಅಬಕಾರಿ, ಅರಣ್ಯ, ಸ್ಕೌಟ್ಸ್ ಅಂಡ್ ಗೈಡ್ಸ್, ಮೌಂಟೆಡ್ ಪೊಲೀಸ್, ಎನ್‌ಸಿಸಿ, ಸೇವಾದಳ ಸೇರಿದಂತೆ ವಿವಿಧ ತುಕಡಿಗಳು ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡು ಆಕರ್ಷಕ ಪಥಸಂಚಲನ ನಡೆಸಿದವಲ್ಲದೆ, ಶಾಲಾ–ಕಾಲೇಜು ವಿದ್ಯಾರ್ಥಿಗಳು ದೇಶ ಭಕ್ತಿ ಸಾರುವ ನೃತ್ಯರೂಪಕ ಪ್ರದರ್ಶಿಸಿದರು.

ರೈಲ್ವೆ ಕಾರ್ಯಾಗಾರ ಕಾಲೋನಿ ಸರ್ಕಾರಿ ಪ್ರೌಢಶಾಲೆಯಲ್ಲಿ ಗಣರಾಜ್ಯೋತ್ಸವ



ಮೈಸೂರು, ಜ. 27 – ಮೈಸೂರಿನ ಅಶೋಕಪುರಂನ ರೈಲ್ವೆ ಕಾರ್ಯಾಗಾರದಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರೌಢಶಾಲೆ ರೈಲ್ವೆ ಕಾರ್ಯಾಗಾರದ ಮಕ್ಕಳು ರೈಲ್ವೆ ರಕ್ಷಣಾ ದಳದವರೊಂದಿಗೆ ಶಿಸ್ತಿನಿಂದ ಪಥ ಸಂಚಲನ ಕಾರ್ಯಕ್ರಮದಲ್ಲಿ ಪಾಲ್ಗೊಂಡರು ಮತ್ತು ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಗಣರಾಜ್ಯೋತ್ಸವದ ಹಿರಿಮೆಯನ್ನು ಎತ್ತಿ ಹಿಡಿದರು. ಸರ್ಕಾರಿ ಪ್ರೌಢಶಾಲೆಯ ಹೆಣ್ಣು ಮಕ್ಕಳಿಂದ ರಾಷ್ಟ್ರೀಯ ಹಬ್ಬದ ಬಗ್ಗೆ ನೃತ್ಯ ಕಾರ್ಯಕ್ರಮ ಮತ್ತು ಗಂಡು ಮಕ್ಕಳಿಂದ ಪಿರಮಿಡ್ ರಚನೆಯ ಕಾರ್ಯಕ್ರಮವನ್ನು ನೀಡಲಾಯಿತು. ಕಾರ್ಯಾಗಾರದ ಮುಖ್ಯ ಪ್ರಬಂಧಕರಾದ ಓ.ಪಿ.ಶಾ ರವರು ಶಾಲೆಯ ಮಕ್ಕಳನ್ನು ಪ್ರಶಂಸಿಸಿ ಬಹುಮಾನಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ಕಾರ್ಯಾಗಾರದ ಎಲ್ಲಾ ಹಿರಿಯ ಅಧಿಕಾರಿಗಳು, ರೈಲ್ವೆ ನೌಕರರ ಸಂಘದ ಕಾರ್ಯದರ್ಶಿಗಳಾದ ಯತಿರಾಜು, ಪದಾಧಿಕಾರಿಗಳು, ಮುಖ್ಯ ಶಿಕ್ಷಕಿಯರಾದ ಎಲ್.ಲತಾ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಎನ್. ನಾಗರಾಜು, ಮಹೇಶ್ ಕೆ.ಎಂ., ನೂರ್ ಸಲ್ಮಾ ಬಾನು, ವಿನುತಬಗರೆ ಚಂದ್ರಕಾಂತ ಗಣಪತಿ, ನೇತ್ರಾವತಿ ಇತರರು ಭಾಗವಹಿಸಿದ್ದರು.

ನೃಪತುಂಗ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಣೆ



ಮೈಸೂರು, ಜ.27–ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ನೃಪತುಂಗ ಕನ್ನಡ ಶಾಲೆಯಲ್ಲಿ 75 ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣವನ್ನು ಮಾಡಿದ ಪತ್ರಕರ್ತ ಟಿ.ಗುರುರಾಜ್, ಮಕ್ಕಳಿಗೆ ರಾಷ್ಟ್ರಧ್ವಜದ ಕೇಸರಿ, ಬಿಳಿ ಮತ್ತು ಹಸಿರು ಮೂರು ಬಣ್ಣಗಳ ಮಹತ್ವ ವಿವರಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಉಪಾಧ್ಯಕ್ಷ ಸ.ರ.ಸುದರ್ಶನ, ಮಕ್ಕಳಿಗೆ ಗಣರಾಜ್ಯ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಓದಿ ಪ್ರಮಾಣವಚನ ಸ್ವೀಕರಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಸವಿತಾ ಪ. ಮಲ್ಲೇಶ್, ಖಜಾಂಚಿ ಪ್ರೊ ಹೆಚ್.ಟಿ. ಶೈಲಜ, ಕಾಲೇಜಿನ ಪ್ರಾಂಶುಪಾಲ ಮಮತಾ, ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶೀಲಾ ಮತ್ತು ಸೌಮ್ಯಶ್ರೀ, ಕಾಲೇಜಿನ ಉಪನ್ಯಾಸಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂವಿಧಾನದ ಸಂಪೂರ್ಣ ಅನುಷ್ಠಾನಕ್ಕೆ ಅಡಚಣೆಯಾದರೆ ಮತ್ತೊಂದು ಸಾಮಾಜಿಕ ಕ್ರಾಂತಿ ಭಾರತಕ್ಕೆ ಅನಿವಾರ್ಯ


ವಿಶ್ರಾಂತ ಕುಲಪತಿ ಪಿ.ವೆಂಕಟರಾಮಯ್ಯ ಅಭಿಮತ

ಮೈಸೂರು, ಜ. 27– ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಇಂದಿರಾ ಕಾಂಗ್ರೆಸ್ ಭವನದಲ್ಲಿ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು

ಈ ವೇಳೆ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ಮಾತನಾಡಿ, ಭಾರತವು ಅಮೃತ ಮಹೋತ್ಸವದ ಗಣರಾಜ್ಯವನ್ನು ಆಚರಿಸುತ್ತಿದ್ದು ಸಂವಿಧಾನದ ಸಂಪೂರ್ಣ ಆಚರಣೆ ಮತ್ತು ಅನುಷ್ಠಾನದಲ್ಲಿ ಮಹತ್ತರವಾದ ಜವಾಬ್ದಾರಿ ಬಾಕಿ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.


ಸುಭದ್ರ ಭಾರತ ನಿರ್ಮಾಣಕ್ಕಾಗಿ ಹಲವಾರು ಮಹನೀಯರು ತನು ಮನ ಧನ ಮತ್ತು ಪ್ರಾಣಗಳನ್ನೇ ಪಣವಾಗಿ ಇಟ್ಟು ಹೋರಾಡಿದ ಭವ್ಯ ಇತಿಹಾಸ ನಮ್ಮ ಕಣ್ಣ ಮುಂದೆ ಇದೆ. ಈ ಸಂದರ್ಭದಲ್ಲಿ ಅವರ ಋಣವನ್ನು ನಾವು ನೆನೆದುಕೊಳ್ಳಲೇಬೇಕು ಎಂದು ಹೇಳಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಡಾ. ಬಿ.ಜೆ.ವಿಜಯಕುಮಾರ್ ಅವರು ಮಾತನಾಡಿ ಭಾರತ ಸ್ವಾತಂತ್ರ್ಯದ ಕಿಡಿ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿ ಕಾಡಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರನ್ನು ಸ್ಮರಿಸಿಕೊಳ್ಳುತ್ತಾ, ಪ್ರಸ್ತುತ ಕಾಲಮಾನದಲ್ಲಿ ಸಾಮಾಜಿಕ ಹೋರಾಟದ ಅಗತ್ಯತೆ ಬಗ್ಗೆ ಗಮನಾರ್ಹವಾದ ಹೇಳಿಕೆಗಳನ್ನು ನೀಡಿದರು. ಫ್ರೆಂಚ್, ರಷ್ಯಾ, ಜರ್ಮನಿ ಹಾಗೂ ಅಮೆರಿಕ ಇತರೆ ದೇಶಗಳಲ್ಲಿ ಸ್ವತಂತ್ರ್ಯೋತ್ತರ ಚಳುವಳಿ ಮತ್ತು ಸ್ವಾತಂತ್ರ್ಯ ನಂತರದ ಚಳುವಳಿಗಳ ವಿಸ್ತಾರವನ್ನು ತಿಳಿಸುತ್ತಾ ಮನುಷ್ಯ ಹೆಚ್ಚು ಹೆಚ್ಚು ಸವಲತ್ತಿಗೆ ಮತ್ತು ಅನುಕೂಲತೆಗೆ ಒಳಗಾದ ನಂತರ ಚಳುವಳಿಯು ನೆನಪಾಗುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.



ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಇಂದಿರಾ ಕಾಂಗ್ರೆಸ್ ಭವನದಲ್ಲಿ 75ನೇ ಗಣರಾಜ್ಯೋತ್ಸವ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ ಪಿ ವೆಂಕಟರಾಮಯ್ಯ ಅವರನ್ನು ಸನ್ಮಾನಿಸಿದರು.

ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಪಕ್ಷದ ಪ್ರಮುಖರಾದ ಕೆಪಿಸಿಸಿ ಕಾರ್ಯದರ್ಶಿ ಭಾಸ್ಕರ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಎಂ.ಶಿವಣ್ಣ, ಎಡತಲೆ ಮಂಜುನಾಥ್, ಈಶ್ವರ್ ಚಕ್ಕಡಿ, ಶಿವಪ್ರಸಾದ್, ಗುರುಮಲ್ಲೇಶ್, ನಾಗೇಶ್, ಗಿರೀಶ್, ಅಶೋಕ್, ಯೋಗೇಶ್, ಪುಷ್ಪಲತಾ ಚಿಕ್ಕಣ್ಣ, ಶ್ರೀಮತಿ ಮೂದಾಮಣಿ , ಪ್ರೊ. ಶಿವಕುಮಾರ್, ಸುನಂದಕುಮಾರ್, ರಮೇಶ್, ದಾಸನೂರ ಪುಟ್ಟಸ್ವಾಮಿ, ಮಳಿಯೂರ್ ಸಂತೋಷ್, ವಕೀಲರಾದ ತಿಮ್ಮಯ್ಯ, ಪ್ರೇಮ್, ಮನೋನ್ಮಣಿ, ಚರಣರಾಜ್, ಗೀತಾ, ಜಮೀರ್, ಸಿದ್ದರಾಜು, ಮನೋಜ್, ಮುರುಡೇಶ್, ಅನೂಪ್, ಬಸವರಾಜ್, ಮಹೇಶ್ ಇತರ ಪ್ರಮುಖರು ಭಾಗವಹಿಸಿದ್ದರು.



ಮೈಸೂರಿನ ಅಶೋಕಪುರಂ ಅಭಿಮಾನಿಗಳ ಬಳಗದಿಂದ ಅಂಬೇಡ್ಕರ್ ಉದ್ಯಾನವನದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ನಗರ ಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಸಮಾಜ ಸೇವಕಿ ಬಬಿತಾ, ಮುಖಂಡರಾದ ಪುಟ್ಟಸಿದ್ದಯ್ಯ, ಸಿದ್ದಸ್ವಾಮಿ, ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಸಿ. ಶಿವಣ್ಣ, ಶ್ಯಾಮ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 28 ಜನವರಿ 2024

ಜನಾಕರ್ಷಿಸುತ್ತಿರುವ ರಾಜಾಸೀಟ್ ಫಲಪುಷ್ಪ ಪ್ರದರ್ಶನ

ಹೂಗಳಲ್ಲಿ ಅರಳಿದ ಶ್ರೀಪಾಡಿ ಇಗ್ಗುತಪ್ಪ ದೇವಾಲಯ, ಹಣ್ಣಿನಲ್ಲೂ ಗಣ್ಯರು, ಹೂವುಗಳ ಕಾಶಿ



ಫಲಪುಷ್ಪ ಪ್ರದರ್ಶನವನ್ನು ಉಸ್ತುವಾರಿ ಸಚಿವ ಭೋಸರಾಜು ಉದ್ಘಾಟಿಸಿದರು.





ಮಡಿಕೇರಿ, ಜ.27– ಪ್ರಸಿದ್ದ ಪ್ರವಾಸಿ ತಾಣ ರಾಜಾಸೀಟಿನಲ್ಲಿ ಆಯೋಜಿಸಲಾಗಿರುವ ಫಲಪುಷ್ಪ ಪ್ರದರ್ಶನ ಜನಾಕರ್ಷಣೆ ಪಡೆಯುತ್ತಿದೆ. ಉದ್ಯಾನವನದ ತುಂಬೆಲ್ಲ ಬಣ್ಣ ಬಣ್ಣದ ಹೂವುಗಳು ರಾರಾಜಿಸುತ್ತಿದ್ದು, ಫಲಪುಷ್ಪ ಪ್ರದರ್ಶನಕ್ಕೆ ಮೆರುಗು ತುಂಬಿದೆ. ಸೇವಂತಿಗೆ, ಸಾಲ್ವಿಯ, ಚೆಂಡು ಹೂ, ಝೀನಿಯಾ, ಡಯಾಂಥಸ್, ಅಸ್ಟರ್, ವಿಂಕಾ ರೋಸಿಯಾ, ಕಾಕ್ಸ್ ಕೋಂಬ್, ಡೇಲಿಯಾ ಸೇರಿದಂತೆ ಒಟ್ಟು 20ಕ್ಕೂ ಹೆಚ್ಚು ಬಗೆಯ ಹೂವು ಗಿಡಗಳು ಹಾಗು ವಿವಿಧ ಬಗೆಯ ಅಲಂಕಾರಿಕ ಹೂ ಕುಂಡಗಳನ್ನು ಸುಂದರವಾಗಿ ಜೋಡಿಸಲಾಗಿದ್ದು, ಫಲಪುಷ್ಪ ಪ್ರದರ್ಶನಕ್ಕೆ ಮೆರುಗು ತುಂಬಿದೆ.

ಜನಾಕರ್ಷಕ ಶ್ರೀಪಾಡಿ ಇಗ್ಗುತ್ತಪ್ಪ: ಫಲಪುಷ್ಪ ಪ್ರದರ್ಶನದ ಆಕರ್ಷಣೆಯಾಗಿ ಈ ಬಾರಿ ಕೊಡಗಿನ ಕಕ್ಕಬ್ಬೆಯ ಪಾಡಿ ಶ್ರೀ ಇಗುತ್ತಪ್ಪ ದೇವಾಲಯದ ಬೃಹತ್ ಕಲಾಕೃತಿಯನ್ನು ಹತ್ತಾರು ಬಣ್ಣದ ಲಕ್ಷಾಂತರ ಹೂವುಗಳಿಂದ ನಿರ್ಮಿಸಲಾಗಿದೆ. 15 ಅಡಿ ಎತ್ತರ, 48 ಅಡಿ ಉದ್ದ, 28 ಅಡಿ ಅಗಲವಾಗಿ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದ ಕಲಾಕೃತಿ ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗ ಆನೆ ಕಲಾಕೃತಿಗಳು ಮತ್ತು ದೇವಾಲಯದ ಒಳಭಾಗ ಬೃಹತ್ ಶಿವಲಿಂಗ ಮಾದರಿಯನ್ನು ಸಂಪೂರ್ಣವಾಗಿ ಹೂವಿನಿಂದಲೇ ನಿರ್ಮಿಸಲಾಗಿದ್ದು, ನೋಡುಗರನ್ನು ಆಕರ್ಷಿಸುತ್ತಿದೆ. ವಿವಿಧ ಬಣ್ಣಗಳ ಗುಲಾಬಿ, ಸೇವಂತಿಗೆ, ಆಸ್ಟರ್ ಹೂವುಗಳಿಂದ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದ ಕಲಾಕೃತಿ ಸುಂದರವಾಗಿ ಮೂಡಿ ಬಂದಿದ್ದು, ಪ್ರವಾಸಿಗರು ಸೇರಿದಂತೆ ಸ್ಥಳೀಯರು ಕೂಡ ದೇವಾಲಯ ಕಲಾಕೃತಿ ಮುಂಭಾಗ ಫೋಟೊ ಕ್ಲಿಕ್ಕಿಸಿಕೊಂಡು ಸಂಭ್ರಮಿಸುತ್ತಿರುವುದು ಕಂಡು ಬಂತು.

ಹೂವಿನ ಕಲಾಕೃತಿಗಳು: ರಾಜಾಸೀಟು ಉದ್ಯಾನದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಯೋಧ, ಪಿರಂಗಿ ಹಾಗೂ ರಾಷ್ಟ್ರ ಧ್ವಜದ ಕಲಾಕೃತಿ, ಚಿಟ್ಟೆ ಅಣಬೆ ಹಾಗೂ ಬಲೂನು ಮಾದರಿಯ ಕಲಾಕೃತಿಗಳು ಬಗೆ ಬಗೆಯ ಹೂವುಗಳಲ್ಲಿ ಬಂದಿವೆ ಮಕ್ಕಳಿಗೆ ಮನರಂಜನೆ ನೀಡುವಂತೆ ಚೋಟಾ ಬೀಮ್, ಬಾರ್ಬಿ ಡಾಲ್, ಸ್ಪೈಡರ್ ಮ್ಯಾನ್, ಬ್ಯಾಟ್ ಮ್ಯಾನ್, ಕಲಾಕೃತಿಗಳನ್ನು ಹೂವಿನಿಂದ ಅಲಂಕರಿಸಿ ಫೋಟೋ ಫ್ರೇಮ್ ಹಾಗೂ ಸೆಲ್ಫಿ ಝೋನ್ ಮಾದರಿಗಳನ್ನು ನಿರ್ಮಿಸಲಾಗಿದೆ. ಹಿರಿಯರು ಕಿರಿಯರು ಎನ್ನದೆ ಎಲ್ಲರೂ ಫೋಟೋಗಳಿಗೆ ಪೋಸು ನೀಡಿತ್ತಾ ಸಂಭ್ರಮಿಸುತ್ತಿದ್ದಾರೆ.

ಹಣ್ಣಿನಲ್ಲಿ ಅರಳಿದ ಗಣ್ಯರು: ಇದರೊಂದಿಗೆ ವಿವಿಧ ಕ್ಷೇತ್ರಗಳ ಗಣ್ಯರುಗಳ ಕಲಾಕೃತಿಗಳನ್ನು ಕಲ್ಲಂಗಡಿ ಹಣ್ಣು ಮತ್ತು ತರಕಾರಿಗಳಲ್ಲಿ ಕೆತ್ತನೆ ಮಾಡಲಾಗಿದ್ದು, ಕಲಾವಿದನ ಕೈಚಳಕಕ್ಕೆ ನೋಡುಗರು ಮೂಕ ವಿಸ್ಮಿತರಾಗುತ್ತಿದ್ದಾರೆ. ಮಹಾತ್ಮ ಗಾಂಧಿ, ಸರ್.ಎಂ. ವಿಶ್ವೇಶರಯ್ಯ, ಸಂವಿಧಾನ ಶಿಲ್ಪಿ ಅಂಬೇಡ್ಕರ್, ಕ್ರಾಂತ್ರಿ ವೀರ ಭಗತ್ ಸಿಂಗ್, ಜನರಲ್ ತಿಮ್ಮಯ್ಯ, ಸ್ವಾಮಿ ವಿವೇಕಾನಂದ, ಸುಭಾಷ್ ಚಂದ್ರ ಬೋಸ್, ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಕಲಾಂ, ರಾಷ್ಟ್ರಕವಿ ಕುವೆಂಪು, ಸಿನಿಮಾ ತಾರೆಗಳಾದ ಪುನೀತ್ ರಾಜ್‌ಕುಮಾರ್, ಅಂಬರೀಶ್ ಸೇರಿದಂತೆ ಹತ್ತಾರು ಮಹಾನ್ ವ್ಯಕ್ತಿಗಳ ಚಿತ್ರಗಳು ಹಣ್ಣಿನ ಕೆತ್ತನೆಯಲ್ಲಿ ಅರಳಿದ್ದು ಮುದ ನೀಡುತ್ತಿವೆ.

ಸಹಸ್ರಾರು ಮಂದಿಯಿಂದ ವೀಕ್ಷಣೆ: ಜ.26ರಂದು ಫಲಪುಷ್ಪ ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಅವರು ಉದ್ಘಾಟಿಸಿದ್ದು, ಈಗಾಗಲೇ 30 ಸಾವಿರ ಮಂದಿ ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದ್ದಾರೆ. ಕೊಡಗು ಜಿಲ್ಲೆಯ ವಿವಿಧೆಡೆಗಳ ಸಹಿತ ಹೊರ ಊರುಗಳ ಸಹಸ್ರಾರು ಸಂಖ್ಯೆಯ ಪ್ರವಾಸಿಗರು ಜಿಲ್ಲೆಗೆ ಆಗಮಿಸಿ ರಾಜಾಸೀಟಿನ ಸೌಂದರ್ಯವನ್ನು ಸವಿದಿದ್ದಾರೆ. ಸರಣಿ ರಜೆ ಹಿನ್ನೆಲೆಯಲ್ಲಿ ಮತ್ತಷ್ಟು ಮಂದಿ ವೀಕ್ಷಕರು ರಾಜಾ ಸೀಟಿಗೆ ಆಗಮಿಸುವ ನಿರೀಕ್ಷೆ ಇದ್ದು, ಒಟ್ಟು ವೀಕ್ಷಕರ ಸಂಖ್ಯೆ 50 ಸಾವಿರವನ್ನು ಮೀರಬಹುದು ಎಂದು ತೋಟಗಾರಿಕೆ ಇಲಾಖೆ ಮೂಲಗಳು ವಿಶ್ವಾಸ ವ್ಯಕ್ತಪಡಿಸಿವೆ ಜ.28ರವರೆಗೂ ಫಲಪುಷ್ಪ ಪ್ರದರ್ಶನ ನಡೆಯಲಿದೆ.

ನೀಲಮ್ಮ ನಿಧನ



ವಿರಾಜಪೇಟೆ, ಜ.27– ವಿರಾಜಪೇಟೆ ಸಮೀಪದ ಕೋಟೆ ಕೊಪ್ಪ ಗ್ರಾಮದ ನಿವಾಸಿ ದಿ. ಈರಪ್ಪ ಅವರ ಪತ್ನಿ ವಿ.ಈ. ನೀಲಮ್ಮ (85) ನಿಧನರಾದರು. ಅಂತ್ಯಕ್ರಿಯೆ ಮೃತರ ತೋಟದಲ್ಲಿ ನೆರವೇರಿಸಲಾಯಿತು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಗೆ ಆಗ್ರಹಿಸಿ

ಮಡಿಕೇರಿ ಡಿಸಿ ಕಚೇರಿ ಎದುರು ಸಿಎನ್‌ಸಿ ಪ್ರತಿಭಟನೆ



ಮಡಿಕೇರಿ, ಜ.27– ಸಂವಿಧಾನದ ವಿಧಿ 244 ಆರ್/ಡಬ್ಲ್ಯೂ 6 ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ನೀಡಬೇಕೆಂದು ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಗಣರಾಜ್ಯೋತ್ಸವದ ದಿನವಾದ ಇಂದು ಮಡಿಕೇರಿಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿತು.

ಕೊಡವ ಲ್ಯಾಂಡ್ ಪರ ಘೋಷಣೆಗಳನ್ನು ಕೂಗಿದ ಸಿಎನ್‌ಸಿ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಹಾಗೂ ಪ್ರಮುಖರು ವಿಶ್ವಸಂಸ್ಥೆಯ 217 ವಿಧಿಯಂತೆ ಪ್ರಾಚೀನ ಆದಿಮ ಸಂಜಾತ ಸೂಕ್ಷ್ಮಾತೀ ಸೂಕ್ಷ್ಮ ಕೊಡವರ ಸ್ವಯಂ–ನಿರ್ಣಯ ಹಕ್ಕುಗಳನ್ನು ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿ ಗೌರವಿಸಬೇಕು ಮತ್ತು ಖಾತರಿ ಪಡಿಸಬೇಕು. ಕೊಡವರನ್ನು ಎಸ್‌ಟಿ ಪಟ್ಟಿಯಲ್ಲಿ ಸೇರಿಸಲು ಪೂರಕವಾಗಿ ಸಿಎನ್‌ಸಿಯ ಮೇಲ್ಮನವಿಯನ್ನು ಪರಿಗಣಿಸಿ ಕೊಡವರ ಸಮಗ್ರ ಕುಲಶಾಸ್ತ್ರ ಅಧ್ಯಯನವನ್ನು ನಡೆಸಲು ಹೈಕೋರ್ಟ್ ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ಎನ್.ಯು.ನಾಚಪ್ಪ ಮಾತನಾಡಿ, ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು ಹಾಗೂ ಸಾಂವಿಧಾನಿಕ ಪರಿಹಾರಗಳ ಹಕ್ಕು ಸೇರಿದಂತೆ ಆರು ಮೂಲಭೂತ ಹಕ್ಕುಗಳನ್ನು ಭಾರತೀಯ ಸಂವಿಧಾನವು ಖಾತರಿಪಡಿಸಿದೆ. ಇದರಡಿ ಕೊಡವರ ಹಕ್ಕುಗಳನ್ನು ನಾವು ಕೇಳುತ್ತಿದ್ದೇವೆ ಎಂದರು.

ಸತ್ಯಾಗ್ರಹದಲ್ಲಿ ಭಾಗವಹಿಸಿದ ಕೊಡವರು ಗುರು ಕಾರೋಣ ಸೂರ್ಯ, ಚಂದ್ರ, ಜಲದೇವತೆ ಕಾವೇರಿ, ಭೂಮಿ ತಾಯಿ, ಪ್ರಕೃತಿ ದೇವತೆ, ಪರ್ವತ ದೇವತೆಯ ಹೆಸರಿನಲ್ಲಿ ಸಿಎನ್‌ಸಿಯ ಆಶಯಗಳೊಂದಿಗೆ ಪ್ರಮಾಣ ವಚನ ಸ್ವೀಕರಿಸಿದರು. ಬಳಿಕ ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿ, ಪ್ರಧಾನಮಂತ್ರಿ, ವಿಶ್ವ ರಾಷ್ಟ್ರ ಸಂಸ್ಥೆಯ ಮಹಾ ಕಾರ್ಯದರ್ಶಿ, ಕೇಂದ್ರ ಕಾನೂನು ಮಂತ್ರಿ, ಕೇಂದ್ರ ಗೃಹಮಂತ್ರಿ, ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ, ಕರ್ನಾಟಕದ ಮುಖ್ಯಮಂತ್ರಿಗಳು ಮತ್ತು ಯುನೆಸ್ಕೋದ ಮಹಾನ್ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.

ಚೋಳಪಂಡ ಜ್ಯೋತಿ ನಾಣಯ್ಯ, ಸರ್ವಶ್ರೀ ಕಾಂಡೇರ ಸುರೇಶ್, ಅಳ್ಮಂಡ ಜೈ, ಪಟ್ಟಮಾಡ ಕುಶ, ಅಜ್ಜಿಕುಟ್ಟಿರ ಲೋಕೇಶ್, ಚಂಬಂಡ ಜನತ್, ಕಿರಿಯಮಾಡ ಶರೀನ್, ಪಾರ್ವಂಗಡ ನವೀನ್, ಮಂದಪಂಡ ಮನೋಜ್, ಪುಲ್ಲೇರ ಕಾಳಪ್ಪ, ಕಾಟುಮಣಿಯಂಡ ಉಮೇಶ್, ಕೂಪದಿರ ಸಾಬು, ಮಣವಟ್ಟಿರ ಚಿಣ್ಣಪ್ಪ, ಪುದಿಯೊಕ್ಕಡ ಕಾಶಿ, ಪುಟ್ಟಿಚಂಡ ಡಾನ್ ದೇವಯ್ಯ ಇತರರು ಧರಣಿಯಲ್ಲಿದ್ದರು.

ಜೀವನದಲ್ಲಿ ಜಿಗುಪ್ಸೆಗೊಂಡು ಮಹಿಳೆ ಆತ್ಮಹತ್ಯೆ



ನಾಪೋಕ್ಲು, ಜ.27– ಜೀವನದಲ್ಲಿ ಜಿಗುಪ್ಸೆಗೊಂಡ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ನೆಲಜಿ ಗ್ರಾಮದಲ್ಲಿ ಶನಿವಾರ ನಡೆದಿದೆ.

ಬಲ್ಲಮಾವಟ್ಟಿ ಗ್ರಾಪಂನ ನೆಲಜಿ ಗ್ರಾಮದ ಮುಂಡಂಡ ಪ್ರಭು ಪೆಮ್ಮಯ್ಯ ಅವರ ಪತ್ನಿ ಡೀನ (ತೀರ್ಥ) ಶನಿವಾರ ಮಧ್ಯಾಹ್ನ ನೆಲಜಿ ಗ್ರಾಮದ ಸ್ವಗೃಹದ ಒಳಗೆ ಛಾವಣಿಯ ಕೌಕೋಳಿಗೆ ದುಪ್ಪಟದಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ 27 ವರ್ಷ ವಯಸ್ಸಾಗಿದೆ.

ಪತಿ ಪ್ರಭು ಪೆಮ್ಮಯ್ಯ ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾರೆ. ಇವರಿಗೆ 8 ವರ್ಷದ ಹೆಣ್ಣು ಮಗಳಿದ್ದು, ಕಳೆದ ಕೆಲವು ದಿನಗಳಿಂದ ಡೀನ ಹೊದ್ದೂರಿನಲ್ಲಿ ಪೋಷಕರೊಂದಿಗೆ ವಾಸವಾಗಿದ್ದರು. ಶನಿವಾರ ಬೆಳಿಗ್ಗೆ ತಮ್ಮ ಕಾರಲ್ಲಿ ನೆಲೆಜಿ ಗ್ರಾಮದಲ್ಲಿರುವ ಅವರ ಸ್ವಂತ ಮನೆಗೆ ತೆರಳಿದ್ದರೂ ಎನ್ನಲಾಗಿದೆ. ಜೀವನದಲ್ಲಿ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿ ಕೊಂಡಿರುವುದಾಗಿ ಡೆತ್ ನೋಟ್ ಬರೆದಿಟ್ಟಿದ್ದು, ಚೀಟಿ ಘಟನಾ ಸ್ಥಳದಲ್ಲಿ ಪೊಲೀಸರಿಗೆ ಲಭ್ಯವಾಗಿದೆ. ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್, ಕ್ರೈಂ ಪಿಎಸ್‌ಐ ಬಿ.ಶ್ರೀಧರ್, ಮಹಿಳಾ ಸಿಬ್ಬಂದಿ ಪೂರ್ಣಿಮಾ ಘಟನಾ ಸ್ಥಳಕ್ಕೆ ಭೇಟಿ ನೀಡಿ ದೂರು ದಾಖಲಿಸಿಕೊಂಡು ಕಾನೂನಿನ ಕ್ರಮ ಕೈಗೊಂಡಿದ್ದಾರೆ.

'ಕಾಟೇರ' ದರ್ಶನ್‌ಗೆ 'ಭೂಮಿಪುತ್ರ' ಬಿರುದು ಪ್ರದಾನ



ಪಾಂಡವಪುರ ಪಟ್ಟಣದಲ್ಲಿ ಚಿತ್ರನಟ ದರ್ಶನ್ ಅವರನ್ನು ಅಭಿನಂದಿಸಲಾಯಿತು.

ಪಾಂಡವಪುರ, ಜ.27– 'ಕಾಟೇರ' ಸಿನಿಮಾ ಯಶಸ್ಸಿಗೆ ಕಾರಣರಾದ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರಿಗೆ ಭೂಮಿಪುತ್ರ ಬಿರುದು ನೀಡಿ ಅಭಿನಂದಿಸಲಾಯಿತು.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ರೈತ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ರೈತನಾಯಕ, ಮಾಜಿ ಶಾಸಕ ದಿ.ಕೆ.ಎಸ್.ಪುಟ್ಟಣ್ಣಯ್ಯ ಅವರ 75ನೇ ವರ್ಷದ ಜನ್ಮದಿನಾಚರಣೆ, 75ನೇ ಗಣರಾಜ್ಯೋತ್ಸವ ಹಾಗೂ ಕಾಟೇರ ಚಿತ್ರದ ತಂಡಕ್ಕೆ ಅಭಿನಂದನಾ ಸಮಾರಂಭದಲ್ಲಿ 'ದರ್ಶನ್'ಗೆ ಈ ಬಿರುದು ಪ್ರದಾನ ಮಾಡಲಾಯಿತು.

ರೈತ ನಾಯಕರಾದ ಕೆ.ಎಸ್. ಪುಟ್ಟಣ್ಣಯ್ಯ, ಪ್ರೊ.ನಂಜುಂಡಸ್ವಾಮಿ, ಸುಂದರೇಶ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಮಾರಂಭವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು. ಕಾಟೇರ ಚಿತ್ರದ ನಾಯಕ ನಟ ದರ್ಶನ್, ನಿರ್ದೇಶಕ ತರುಣ್ ಸುದೀರ್, ಸಂಗೀತ ನಿರ್ದೇಶಕ ಹರಿಕೃಷ್ಣ ಸೇರಿದಂತೆ ಚಿತ್ರದ ತಂಡ ಕಲಾವಿದರನ್ನು ಅಭಿನಂದಿಸಲಾಯಿತು. ಚಿತ್ರನಟ ದರ್ಶನ್ ಅವರಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಭೂಮಿಪುತ್ರ ಎಂಬ ಬಿರುದು ನೀಡಿ ಟಗರು, ಕಬ್ಬಿನ ಜಲ್ಲೆಯನ್ನು ಉಡುಗೊರೆಯಾಗಿ ನೀಡಿದರು. ಚಿತ್ರರಂಗದ ಹಲವು ನಟಿಮಣಿಯರಿಂದ ನೃತ್ಯ ಪ್ರದರ್ಶನ ಮೂಡಿಬಂತು. ಪ್ರೇಕ್ಷಕರು ಶಿಳ್ಳೆ ಚಪ್ಪಾಳೆ ಹೊಡೆದು ಸಂಭ್ರಮಿಸಿದರು.

ಚಿತ್ರನಟ ದರ್ಶನ್ ಮಾತನಾಡಿ, ಕಾಟೇರ ಸಿನಿಮಾ 25ನೇ ದಿನವನ್ನು ಯಶಸ್ವಿಯಾಗಿ ಪೂರೈಸಿದೆ. ಕಾಟೇರ ಸಿನಿಮಾವನ್ನು ಇಷ್ಟೊಂದು ದೊಡ್ಡಮಟ್ಟದಲ್ಲಿ ಯಶಸ್ವಿಗೊಳಿಸಿ ಬೆಳೆಸಿದ ಕನ್ನಡಿಗರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್, ಅಂಬರೀಶ್ ಹಾಗೂ ಶಂಕರ್ ನಾಗ್ ಅವರು ಕನ್ನಡ ಚಿತ್ರ ರಂಗದ ಪಿಲ್ಲರ್‌ಗಳು, ಪಿಲ್ಲರ್ ಕೆಳಗೆ ಇರುವ ಕಂಬಗಳು ಕಲಾವಿದರು. ನಾವೆಲ್ಲ ಕಂಬಕ್ಕೆ ಸಪೋರ್ಟ್ ಆಗಿ ಕೊಟ್ಟಿರುವ ಚಿಕ್ಕ ಪೀಸ್‌ಗಳು. ನಾವೆಲ್ಲ ಹೀರೋಗಳಲ್ಲ. ಆದರೆ, ನಮ್ಮ ಜತೆಗೆ ನಮ್ಮವರನ್ನೇ ಕರೆದು ಕೊಂಡು ಹೋಗಬೇಕು, ಕನ್ನಡ ಚಿತ್ರಗಳನ್ನು ನೋಡಿ ಬೆಂಬಲಿಸಿ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಮೇರಿಕ ಬಿಟ್ಟು ಬಂದು ಇಲ್ಲಿ ಶಾಸಕರಾಗಿದ್ದಾರೆ. ಅಮೇರಿಕದಲ್ಲಿದ್ದ ಕಂಪನಿ ಮಾರಾಟ ಮಾಡಿ 8 ಕೋಟಿ ಸಾಲ ತೀರಿಸಿ ಇದೀಗ ಅದೇ ಕಂಪನಿಯಲ್ಲಿ ಉದ್ಯೋಗಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಕಾಟೇರ ಸಿನಿಮಾ ರೈತರ ಪರವಾಗಿರುವ ಸಿನಿಮಾವಾಗಿದ್ದು ಉಳುವವನೇ ಭೂಮಿಯ ಒಡೆಯ ಎಂಬ ವಿಚಾರವಾಗಿ ಚಿತ್ರ ಮೂಡಿಬಂದಿದೆ. ಹಾಗಾಗಿ ಚಿತ್ರ ತಂಡಕ್ಕೆ ಅಭಿನಂದನೆ ಸಲ್ಲಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜತೆಗೆ ನಟ ದರ್ಶನ್ ಅವರು ಕೊಟ್ಟ ಮಾತಿನಂತೆ ಕಳೆದ ನನ್ನ ಚುನಾವಣೆಯಲ್ಲಿ ಭಾಗವಹಿಸಿ ನನ್ನ ಪರವಾಗಿ ಪ್ರಚಾರ ನಡೆಸಿ ನನ್ನ ಗೆಲುವಿಗೆ ಸಹಕಾರಿಯಾದರು. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಇದಕ್ಕೂ ಮುನ್ನ ಚಿತ್ರನಟ ದರ್ಶನ್ ಸೇರಿದಂತೆ ಎಲ್ಲಾ ಕಲಾವಿಧರನ್ನು ಪಟ್ಟಣದಲ್ಲಿ ಎತ್ತಿನಗಾಡಿಯಲ್ಲಿ ರೋಡ್ ಶೋ ನಡೆಸುವ ಮೂಲಕ ವೇದಿಕೆಗೆ ಕರೆತರಲಾಯಿತು.

ಸಮಾರಂಭದಲ್ಲಿ ಚಿತ್ರನಟರಾದ ಚಿಕ್ಕಣ್ಣ, ವಿನೋದ್ ಪ್ರಭಾಕರ್, ಧನ್‌ವೀರ್, ರೈತಸಂಘದ ರಾಜ್ಯಾಧ್ಯಕ್ಷ ನಾಗೇಂದ್ರ, ಸರ್ವೋದಯ ಕರ್ನಾಟಕ ಪಕ್ಷದ ಅಧ್ಯಕ್ಷ ಚಾಮರಸಮಾಲೀ ಪಾಟೀಲ್, ಸುನೀತ ಪುಟ್ಟಣ್ಣಯ್ಯ, ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ, ನಾಗರಾಜು ಇತರರಿದ್ದರು.

ಮೈಶುಗರ್‌ನಲ್ಲಿ 1.68 ಲಕ್ಷ ಕ್ವಿಂಟಾಲ್ ಸಕ್ಕರೆ ಉತ್ಪಾದನೆ

ಮಂಡ್ಯದಲ್ಲಿ ಗಣರಾಜ್ಯೋತ್ಸವದಲ್ಲಿ ಸಚಿವ ಚಲುವರಾಯಸ್ವಾಮಿ ಹರ್ಷ



ಮಂಡ್ಯದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ 75ನೇ ಗಣರಾಜ್ಯೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಧ್ವಜವಂದನೆ ಸ್ವೀಕರಿಸಿದರು.

ಮಂಡ್ಯ, ಜ.27– ಜಿಲ್ಲೆಗೆ ಮುಕುಟದಂತಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕೆ ಮತ್ತು ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಜಿಲ್ಲೆಯ ರೈತರ ಮತ್ತು ಜನಪ್ರತಿನಿಧಿಗಳ ಸಹಕಾರದಿಂದ ಪುನರಾರಂಭವಾದ ಬಳಿಕ 2.41 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ನುರಿಸಿ ಈಗಾಗಲೇ 1.68 ಲಕ್ಷ ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಲಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆದ 75ನೇ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಮೈಷುಗರ್ ಕಾರ್ಖಾನೆಯನ್ನು ಮತ್ತಷ್ಟು ಅಭಿವೃದ್ಧಿ ಮತ್ತು ಇಡೀ ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಜಿಲ್ಲೆಯ ಎಲ್ಲಾ ಶಾಸಕರು ಸೇರಿದಂತೆ ನಾನು ಕಂಕಣ ಬದ್ಧರಾಗಿದ್ದೇವೆ ಎಂದು ಘೋಷಿಸಿದರು.

ನಮ್ಮ ದೇಶವನ್ನು ಬ್ರಿಟಿಷರ ಕಪಿಮುಷ್ಠಿಯಿಂದ 1947 ಆಗಸ್ಟ್ 15 ರಂದು ಮುಕ್ತಿಗೊಳಿಸಿದರೂ ಸಹಾ ಭಾರತೀಯರೆಲ್ಲರಿಗೂ ನಮ್ಮದೇ ಆದ ಆಡಳಿತ ವ್ಯವಸ್ಥೆ ಮತ್ತು ಸಂವಿಧಾನ ಇರಲಿಲ್ಲ. ನಮ್ಮದೇ ಆದ ಭೌಗೋಳಿಕ ವ್ಯವಸ್ಥೆಗೆ ಸಂವಿಧಾನದ ಅಗತ್ಯತೆಯನ್ನು ಮನಗಂಡು ನಮ್ಮ ದೇಶಕ್ಕೆ ವಿಶ್ವದಲ್ಲಿಯೇ ಅತಿದೊಡ್ಡ ಸಂವಿಧಾನವನ್ನು ಜಾರಿಗೊಳಿಸಿದ ದಿನವಾದ ಜನವರಿ 26 ರಂದು ಗಣರಾಜ್ಯೋತ್ಸವ ದಿನವನ್ನಾಗಿ ಭಾರತೀಯರಾದ ನಾವೆಲ್ಲರೂ ಹೆಮ್ಮೆಯಿಂದ ಆಚರಿಸುತ್ತೀದ್ದೇವೆ ಎಂದರು. ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದು, ರಾಷ್ಟ್ರದ ಸಾರ್ವಭೌಮತೆಯನ್ನು ಗೌರವಿಸಿ, ಅದನ್ನು ಎತ್ತಿಹಿಡಿಯುತ್ತೇವೆ. ನಮ್ಮದೇ–ದೇಶ, ನಮ್ಮದೇ–ಸಂವಿಧಾನ, ನಮ್ಮದೇ–ಆಡಳಿತ, ನಾವು ಸ್ವತಂತ್ರರಾಗಿ ಬದುಕುತ್ತೇವೆ ಎನ್ನುವ ಶಪಥವನ್ನು ಕೈಗೊಂಡ ದಿನವೇ ಗಣರಾಜ್ಯ ದಿನ. ಈ ದಿನ ಸಮಸ್ತ ಭಾರತೀಯರಿಗೆ ನಮಗೆ ಅತ್ಯಂತ ಪವಿತ್ರ ದಿನವಾಗಿದೆ. ಭಾರತೀಯರಾದ ನಾವೆಲ್ಲರೂ ಸಂವಿಧಾನದ ಮಹತ್ವವನ್ನು ಅರಿತುಕೊಳ್ಳಬೇಕಿದೆ. ಸಂವಿಧಾನದ ಮಹತ್ವ ಮತ್ತು ಅದರ ಪ್ರಾಮುಖ್ಯತೆಯನ್ನು ತಿಳಿಸುವ ಕುರಿತು ನಮ್ಮ ಸರ್ಕಾರ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಗಣರಾಜ್ಯ ದಿನದಂದೇ ರಾಜ್ಯಾದ್ಯಂತ ಚಾಲನೆ ನೀಡಲಾಗುತ್ತಿದೆ ಎಂದರು.

ಸರ್ಕಾರದ ಮೂಲ ಧ್ಯೇಯ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಅದರಲ್ಲೂ ಜನ ಸಾಮಾನ್ಯರ ಮತ್ತು ಹಿಂದುಳಿದ ವರ್ಗದವರ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವ ಆಶಯವನ್ನು ನಮ್ಮ ಸರ್ಕಾರ ಹೊಂದಿದೆ. ಆರ್ಥಿಕ ಸಬಲೀಕರಣ, ಮಹಿಳಾ ಸಬಲೀಕರಣ, ಸಾಮಾಜಿಕ ನ್ಯಾಯ ಮತ್ತು ಸಮಾನತೆ ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಅದರಲ್ಲಿ ಮಹತ್ವಾಕಾಂಕ್ಷೆ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದ್ದೇವೆ ಎಂಬ ಹೆಗ್ಗಳಿಕೆ ನಮ್ಮ ಸರ್ಕಾರಕ್ಕಿದೆ ಎಂದರು.

ಮಳೆಯ ಕೊರತೆಯಿಂದಾಗಿ ಉಂಟಾದ ಬೆಳೆ ನಷ್ಟಕ್ಕೆ ಪರಿಹಾರ ನೀಡುವ ಸಲುವಾಗಿ ಗರಿಷ್ಠ 2,000 ರೂ.ಗಳವರೆಗೆ ಪರಿಹಾರ ವಿತರಿಸಲಾಗುತ್ತಿದ್ದು, ಈವರೆಗೆ ಜಿಲ್ಲೆಯ 74,489 ರೈತರಿಗೆ 28.89 ಕೋಟಿ ರೂ. ಹಣವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮವಹಿಸಲಾಗಿದೆ. ಬರ ಪರಿಸ್ಥಿತಿಯ ತುರ್ತು ಕ್ರಮಗಳನ್ನು ನಿರ್ವಹಿಸಲು ನಮ್ಮ ಸರ್ಕಾರದಿಂದ ಈಗಾಗಲೇ 10.50 ಕೋಟಿ ರೂ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದರು.

ಗ್ರಾಮೀಣಾಭಿವೃದ್ಧಿ ಇಲಾಖೆ ವತಿಯಿಂದ ಜಿಲ್ಲೆಯ 233 ಗ್ರಾಮ ಪಂಚಾಯಿತಿಗಳಲ್ಲಿ ಇ–ಸ್ವತ್ತು ಅಭಿಯಾನವನ್ನು ಕೈಗೊಳ್ಳಲಾಗಿದ್ದು, ಮನೆ ಮತ್ತು ನಿವೇಶನದ ಮಾಲೀಕರಿಗೆ ಇ–ಸ್ವತ್ತು ತಂತ್ರಾಂಶದಲ್ಲಿ 8,663 ಇ–ಸ್ವತ್ತು ದಾಖಲೆಗಳನ್ನು ವಿಶೇಷ ಆಂದೋಲನದ ಮೂಲಕ ನೀಡಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಶಾಸಕ ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ್, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್, ಎಡಿಸಿ ಡಾ. ಹೆಚ್.ಎಲ್.ನಾಗರಾಜು ಸೇರಿದಂತೆ ಉಪಸ್ಥಿತರಿದ್ದರು.

ಎಡಮುರಿಯಲ್ಲಿ ಮೈಸೂರು ಯುವಕ ಜಲಸಮಾಧಿ

ಶ್ರೀರಂಗಪಟ್ಟಣ, ಜ.27– ತಾಲೂಕಿನ ಪ್ರವಾಸಿ ತಾಣವಾದ ಗ್ರಾಮದ ಬಳಿಯ ಎಡಮುರಿ ಫಾಲ್ಸ್‌ನ ಕಾವೇರಿ ನದಿಯಲ್ಲಿ ಈಜುತ್ತಿದ್ದ ಯುವಕ ನದಿಯಲ್ಲಿ ಆಕಸ್ಮಿಕವಾಗಿ ಮುಳುಗಿ ಸಾವನಪ್ಪಿರುವ ಘಟನೆ ಶನಿವಾರ ನಡೆದಿದೆ.

ಮೈಸೂರು ಅಜೀಜ್ ಸೇಠ್ ನಗರದ ನಿವಾಸಿ ಸಯ್ಯದ್ ಇಮ್ರಾನ್ ಮಗ ಸಯ್ಯದ್ ರಿಯಾನ್(17) ಎಂಬಾತನೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ದುರ್ದೈವಿ. ಈತ ತನ್ನ ಸ್ನೇಹಿತರು ಮತ್ತು ಸಂಬಂಧಿಕರ ಜೊತೆ ಎಡಮುರಿ ಪ್ರವಾಸಿ ತಾಣಕ್ಕೆ ಬಂದಿದ್ದ ಸಂದರ್ಭದಲ್ಲಿ ಶನಿವಾರ ಮಧ್ಯಾಹ್ನ ಈಜಲು ನೀರಿಗೆ ಇಳಿದಾಗ ಈ ಘಟನೆ ನಡೆದಿದೆ. ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಾಟಾ ಏಸ್‌ಗೆ ಸಾರಿಗೆ ಬಸ್ ಡಿಕ್ಕಿ; ಓರ್ವನ ಸಾವು


ಗುಂಡ್ಲುಪೇಟೆ, ಜ.27– ಚಿಕ್ಕಲ್ಲೂರು ಜಾತ್ರೆಗೆ ಜನರನ್ನು ಕರೆದೊಯ್ಯುತ್ತಿದ್ದ ಟಾಟಾ ಏಸ್ ಹಾಗೂ ಸಾರಿಗೆ ಬಸ್ ನಡುವೆ ಡಿಕ್ಕಿ ಸಂಭವಿಸಿ ಒಬ್ಬ ಸ್ಥಳದಲ್ಲಿಯೇ ಸಾವಿಗೀಡಾದ ಘಟನೆ ತಾಲೂಕಿನ ಲಕ್ಕೂರು ಗೇಟ್ ಸಮೀಪ ಶನಿವಾರ ನಡೆದಿದೆ. ತಾಲೂಕಿನ ಹಂಗಳ ಗ್ರಾಮದ ಸಿದ್ದರಾಜು(32) ಸಾವಿಗೀಡಾದವರಾಗಿದ್ದು, ಹಂಗಳ ಗ್ರಾಮದಿಂದ ಚಿಕ್ಕಲ್ಲೂರಿಗೆ ಹೊರಟಿದ್ದ ಸುಮಾರು 20 ಜನರು ಎರಡು ಟಾಟಾ ಏಸ್ ವಾಹನಗಳಲ್ಲಿ ಪ್ರಯಾಣಿಸುತ್ತಿದ್ದರು. ಟಾಟಾ ಏಸ್ ವಾಹನ ಹಾಗೂ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸಿದ್ದರಾಜು ಸ್ಥಳದಲ್ಲಿಯೇ ಸಾವಿಗೀಡಾದರೆ, ಐವರಿಗೆ ತೀವ್ರ ಪೆಟ್ಟುಬಿದ್ದಿದೆ. ಡಿಕ್ಕಿ ಹೊಡೆದ ರಭಸಕ್ಕೆ ವಾಹನದಲ್ಲಿದ್ದ ಪಾತ್ರೆಗಳು, ಆಹಾರಧಾನ್ಯಗಳು ಹಾಗೂ ಪ್ರಯಾಣಿಕರು ಚೆಲ್ಲಾಪಿಲ್ಲಿಯಾಗಿ ಹೊರಗೆ ಬಿದ್ದಿದ್ದರಿಂದ ಈ ಮಾರ್ಗದಲ್ಲಿ ವಾಹನಗಳ ಸಂಚಾರ ಸಂಪೂರ್ಣ ಅಸ್ತವ್ಯಸ್ಥವಾಗಿತ್ತು.

ಕೂಡಲೇ ಸ್ಥಳಕ್ಕೆ ಆಗಮಿಸಿದ ತೆರಕಣಾಂಬಿ ಪೊಲೀಸರು ವಾಹನಗಳನ್ನು ಬದಲಿ ರಸ್ತೆಯಲ್ಲಿ ಸಂಚರಿಸುವಂತೆ ಮಾಡಿ ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ಕಳುಹಿಸಿದರು. ಸ್ಥಳಕ್ಕೆ ಡಿವೈಎಸ್‌ಪಿ ಲಕ್ಷ್ಮಯ್ಯ, ಸರ್ಕಲ್ ಇನ್ಸ್‌ಪೆಕ್ಟರ್ ವನರಾಜು ಹಾಗೂ ಸಬ್‌ಇನ್ಸ್‌ಪೆಕ್ಟರ್ ಈಶ್ವರ್ ಭೇಟಿ ನೀಡಿ ಪರಿಶೀಲಿಸಿದರು. ಈ ಬಗ್ಗೆ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುಂಡ್ಲುಪೇಟೆಯಲ್ಲಿ ಅದ್ದೂರಿ ಕನಕ ಜಯಂತಿ

ಶೋಷಿತ ಸಮುದಾಯ ಒಗ್ಗೂಡಿಸಿದ ಕೀರ್ತಿ ಸಿಎಂ ಸಿದ್ದರಾಮಯ್ಯ ಅವರದು

ಸಚಿವ ಬೈರತಿ ಸುರೇಶ್ ಅಭಿಮತ



ಗುಂಡ್ಲುಪೇಟೆ ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕನಕಜಯಂತಿ ಕಾರ್ಯಕ್ರಮವನ್ನು ಮಾಜಿ ಸಚಿವ ಹೆಚ್.ಎಂ.ರೇವಣ್ಣ ಉದ್ಘಾಟಿಸಿದರು.

ಗುಂಡ್ಲುಪೇಟೆ, ಜ.27– ರಾಜ್ಯದಲ್ಲಿ ಶೋಷಿತ ಸಮಾಜವನ್ನು ಒಗ್ಗೂಡಿಸಿದ ಕೀರ್ತಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅಹಿಂದ ಸಂಘಟನೆಯನ್ನು ಬಲಿಷ್ಟಗೊಳಿಸಿದ ಪರಿಣಾಮ ಹಿಂದುಳಿದ ವರ್ಗಗಳು ಒಗ್ಗೂಡುವಂತಾಗಿದ್ದು ಕನಕ ಜಯಂತಿ ಆಚರಿಸುವಂತಾಗಿದೆ. ತಾವು ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸುವ ಜತೆಗೆ ಎಲ್ಲಾ ವರ್ಗದ ಬಡವರ ಬಗ್ಗೆ ಕಾಳಜಿ ವಹಿಸಿದ್ದಾರೆ. ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವರದಿ ಜಾರಿಗೊಳಿಸಿ ರಾಜ್ಯದ ಜನತೆಗೆ ಸಲ್ಲಬೇಕಾದ ಸವಲತ್ತುಗಳಲ್ಲಿ ತಲುಪಿಸಲಾಗುವುದು. ಚುನಾವಣೆ ಸಂದರ್ಭದಲ್ಲಿ ದೇವರ ಹೆಸರು ಮುನ್ನೆಲೆಗೆ ತರುವ ಮೂಲಕ ಬಿಜೆಪಿಯವರು ಸಮಾಜದಲ್ಲಿ ಜಾತಿ ಜಾತಿಗಳ ನಡುವೆ ಕಂದಕವುಂಟು ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಸಮಾಜದಲ್ಲಿ ಶೋಷಿತ ಸಮುದಾಯಗಳ ಸಂಘಟನೆ ಮೂಲಕ ಹಿಂದುಳಿದವರ ಸ್ವಾಭಿಮಾನ ಜಾಗೃತಗೊಳಿಸಲಾಗುತ್ತಿದೆ ಎಂದರು. ಹಿಂದುಳಿದ ವರ್ಗದ ಮುಖಂಡರಿಗೆ ರಾಜಕೀಯ ಶಕ್ತಿ ದೊರಕಿದಾಗ ಮಾತ್ರ ತಮ್ಮ ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು ಸಾಧ್ಯವಾಗುತ್ತಿದೆ. ತಮ್ಮ ತಂದೆಯವರ ಪ್ರಯತ್ನದಿಂದ ಸರ್ಕಾರದ ಮಟ್ಟದಲ್ಲಿ ಕನಕ ಜಯಂತಿ ಆಚರಿಸುವಂತೆ ಆಗಿದೆ ಎಂದು ಹೇಳಿದರು.

ಬಿಜೆಪಿಯವರು ಅಪೂರ್ಣ ರಾಮ ಮಂದಿರ ನಿರ್ಮಾಣವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದಾರೆ. ದೇವಸ್ಥಾನ ಕಟ್ಟುವುದು ಒಂದು ಭಾಗ. ಆದರೆ ರಾಮ ಮಂದಿರ ಕಟ್ಟಿದಾಕ್ಷಣ ರಾಮರಾಜ್ಯ ಸೃಷ್ಟಿಯಾಗುವುದಿಲ್ಲ. ಬಡವರನ್ನು, ದೀನದಲಿತರಿಗೆ ನ್ಯಾಯ ಸಿಕ್ಕಾಗ, ಅಬಲೆಯರು ಮಹಿಳೆಯರು ಮಧ್ಯರಾತ್ರಿಯಲ್ಲಿ ನಿರ್ಭಯವಾಗಿ ಸಂಚರಿಸುವಂತಾದಾಗ ಮಾತ್ರ ರಾಮ ರಾಜ್ಯವಾಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು. ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಮಾತನಾಡಿದರು.

ಈ ಸಂದರ್ಭದಲ್ಲಿ ಕನಕಗುರು ಪೀಠದ ಶಿವಾನಂದಪುರಿ ಸ್ವಾಮೀಜಿ, ಮಾಜಿ ಸಚಿವರಾದ ಹೆಚ್.ವಿಶ್ವನಾಥ್, ಹೆಚ್.ಎಂ. ರೇವಣ್ಣ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಕುರುಬ ಸಮುದಾಯದ ಯುವಕರು, ಮುಖಂಡರು ಮತ್ತು ಯಜಮಾನರು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಇದ್ದರು.

ನಗರದಲ್ಲಿ ಇಂದು ಅರ್ಜುನ್ ಜನ್ಯ, ಹೇಮಂತ್, ಶರಣ್ ಅವರಿಂದ ಸಂಗೀತ ರಸಸಂಜೆ



ಚಾಮರಾಜನಗರ, ಜ.27– ಚಾಮರಾಜನಗರ ಜಿಲ್ಲಾಡಳಿತದ ವತಿಯಿಂದ ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕರು ಹಾಗೂ ಗಾಯಕರಾದ ಅರ್ಜುನ್ ಜನ್ಯ, ಹೇಮಂತ್ ಹಾಗೂ ಚಲನಚಿತ್ರ ನಟ ಶರಣ್ ಅವರಿಂದ ಸಂಗೀತ ರಸಸಂಜೆ ಹಾಗೂ ಕಿರುತೆರೆಯ ಕಾಮಿಡಿ ಕಿಲಾಡಿಗಳು ಕಲಾವಿದರಿಂದ ಹಾಸ್ಯ ಸಂಜೆ ಕಾರ್ಯಕ್ರಮ ಜನವರಿ 28ರಂದು ಸಂಜೆ 6.15 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿ ಆಯೋಜನೆಯಾಗಿದೆ.

ಮೈಸೂರು ರಾಜ್ಯವು ಕರ್ನಾಟಕ ಎಂದು ಮರು ನಾಮಕರಣಗೊಂಡು 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ನಾಡು ನುಡಿ ಹಾಗೂ ಸಂಸ್ಕೃತಿ ಮಹತ್ವ ಸಾರುವ ವಿಶೇಷ ಕಾರ್ಯಕ್ರಮಗಳನ್ನು ವರ್ಷವಿಡೀ ಆಯೋಜಿಸಲಾಗುತ್ತಿದೆ. ಕರ್ನಾಟಕ 50ರ ಸಂಭ್ರಮವನ್ನು ಅರ್ಥಪೂರ್ಣವಾಗಿ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಸಾಕಾರಗೊಳಿಸುವ ನಿಟ್ಟಿನಲ್ಲಿ ಚಾಮರಾಜನಗರದಲ್ಲೂ ಹೆಸರಾಂತ ಕಲಾವಿದರಿಂದ ಸಂಗೀತ, ಹಾಸ್ಯ ಸಂಜೆ ಏರ್ಪಾಡಾಗಿದೆ.

ಜನವರಿ 28ರಂದು ಸಂಜೆ 6.15 ಗಂಟೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಾಲಯ ಮುಂಭಾಗದಲ್ಲಿ ತೆರೆದ ವರ್ಣರಂಜಿತ ವೇದಿಕೆಯಲ್ಲಿ ಹೆಸರಾಂತ ಅರ್ಜುನ್ ಜನ್ಯ, ಹೇಮಂತ್, ಶರಣ್ ಅವರೊಂದಿಗೆ ಗಾಯಕರಾದ ಸಂತೋಷ್ ದೇವ್, ಜೀ ಕನ್ನಡ ವಾಹಿನಿಯ ಸರಿಗಮಪ ಖ್ಯಾತಿಯ ಕಂಬದ ರಂಗಯ್ಯ, ಸುಹಾನ ಸಯ್ಯದ್ ಅವರು ಸಂಗೀತೋತ್ಸವ ನಡೆಸಿಕೊಡಲಿದ್ದಾರೆ.

ಮಜಾ ಟಾಕೀಸ್ ಖ್ಯಾತಿಯ ರೆಮೋ, ರಿಯಾಲಿಟಿ ಶೋನ ಪ್ರಸಿದ್ದ ಪುಷ್ಪ ಆರಾಧ್ಯ, ಖ್ಯಾತ ನಿರೂಪಕಿ ಪ್ರತಿಭಾ ಮತ್ತಿತರ ಹೆಸರಾಂತ ಕಿರುತೆರೆಯ ಕಲಾವಿದರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಕಾಮಿಡಿಕಿಲಾಡಿ, ಗಿಚ್ಚಿ ಗಿಲಿಗಿಲಿ ಕಲಾವಿದರು ಹಾಸ್ಯ ಕಾರ್ಯಕ್ರಮ ಪ್ರಸ್ತುತ ಪಡಿಸಲಿದ್ದಾರೆ. ಕನ್ನಡ ನಾಡು ನುಡಿ ಕುರಿತ ಗೀತೆಗಳು, ನೃತ್ಯ ರೂಪಕಗಳು ಸಹ ಕಾರ್ಯಕ್ರಮದಲ್ಲಿ ಇರಲಿವೆ. ಕನ್ನಡ ಚಲನಚಿತ್ರ ಗೀತೆಗಳ ಗಾಯನ ಸುಧೆ ಹರಿದು ಬರಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಡಾ. ಯತೀಂದ್ರ ವಿರುದ್ಧ ಅವಾಚ್ಯ ಶಬ್ದ ಬಳಕೆ ಆರೋಪ: ವಕೀಲನ ಬಂಧನ; ಬಿಡುಗಡೆ

ಗುಂಡ್ಲುಪೇಟೆ, ಜ.27–ಕನಕ ಜಯಂತಿ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ, ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಭಾಷಣದ ವೇಳೆ ಅವಾಚ್ಯ ಪದ ಬಳಸಿದ ವಕೀಲನನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತನೂ ಆದ ವಕೀಲ ರಂಜಿತ್ ಬಂಧನಕ್ಕೊಳಗಾದವನಾಗಿದ್ದು, ಈತ ಬೇರೊಬ್ಬರ ವಿರುದ್ಧ ಅವಾಚ್ಯ ಪದ ಬಳಸಿದ್ದು, ಅದನ್ನು ಯತೀಂದ್ರ ವಿರುದ್ಧ ಬಳಸಿದ್ದಾನೆ ಎಂದು ತಪ್ಪಾಗಿ ಅರ್ಥೈಸಿಕೊಂಡಿದ್ದರಿಂದ ಕೆಲ ಕಾಲ ಸಭೆಯಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಸಮಾರಂಭದಲ್ಲಿ ವಕೀಲ ರಂಜಿತ್ ವೇದಿಕೆ ಮೇಲೆ ಅತಿಥಿಗಳಿಗೆ ಕುರುಬ ಸಮುದಾಯದ ಶಾಲುಗಳನ್ನು ಹಾಕುತ್ತಿದ್ದ. ಆದರೆ ಆತ ಪಾನಮತ್ತನಾಗಿದ್ದ ಎಂಬ ಕಾರಣಕ್ಕಾಗಿ ಪುರಸಭೆ ಮಾಜಿ ಅಧ್ಯಕ್ಷ ರಮೇಶ್ ಅವರು ಆತನನ್ನು ವೇದಿಕೆಯಿಂದ ಕೆಳಗಿಳಿಸಿದ್ದರು. ಈ ವೇಳೆ ರೊಚ್ಚಿಗೆದ್ದ ಆತ ರಮೇಶ್ ವಿರುದ್ಧ ಅವಾಚ್ಯ ಪದ ಬಳಸಿ ಬೈಕ್‌ನಲ್ಲಿ ತೆರಳಿದ. ಕಾಕತಾಳೀಯವೆಂಬಂತೆ ಆ ಸಂದರ್ಭದಲ್ಲಿ ಡಾ. ಯತೀಂದ್ರ ಭಾಷಣ ಮಾಡುತ್ತಿದ್ದು, ಅವರ ವಿರುದ್ಧವೇ ರಂಜಿತ್ ಈ ಪದ ಬಳಸಿದ ಎಂದು ತಪ್ಪಾಗಿ ಅರ್ಥೈಸಿಕೊಳ್ಳಲಾಗಿತ್ತು. ವೇದಿಕೆಯಲ್ಲಿದ್ದ ಸಚಿವ ಭೈರತಿ ಸುರೇಶ್ ಅವರು ಪೊಲೀಸರನ್ನುದ್ದೇಶಿಸಿ, ಸಭೆಯಲ್ಲಿ ಗೊಂದಲ ಉಂಟು ಮಾಡಿದವನನ್ನು, ಬಂಧಿಸಿ ಎಂದು ತಾಕೀತು ಮಾಡಿದ್ದರು. ಇದಾದ ಸ್ವಲ್ಪ ಸಮಯಕ್ಕೆ ಆತ ಮತ್ತೆ ಕಾರ್ಯಕ್ರಮದ ಸ್ಥಳಕ್ಕೆ ಬಂದಾಗ ಸಭಿಕರು ಆತನ ವಿರುದ್ಧ ಮುಗಿ ಬಿದ್ದರು. ಸ್ಥಳದಲ್ಲಿದ್ದ ಪೊಲೀಸರು ಆತನನ್ನು ರಕ್ಷಿಸಿ ಠಾಣೆಗೆ ಕರೆದೊಯ್ದು, ಪ್ರಕರಣ ದಾಖಲಿಸಿಕೊಂಡು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಮೂರನೇ ಪುಟದಿಂದ

ಗೆಲುವು ನಿಶ್ಚಿತ!

ಬರಲು ಕಾರಣವಾಯಿತು ಎಂದು ಅಭಿಪ್ರಾಯಿಸಿರುವ ಸಭೆ, ಈ ಬಾರಿ ನಮ್ಮ ತಪ್ಪುಗಳನ್ನು ತಿದ್ದಿಕೊಂಡು ಒಗ್ಗಟ್ಟಿನ ಹೋರಾಟ ಮಾಡೋಣ ಎಂದಿದೆ. ವಿಶೇಷ ಕಾರ್ಯಕಾರಿಣಿ ಉದ್ಘಾಟಿಸಿ ಮಾತನಾಡಿದ ಭೂಪೇಂದ್ರ ಯಾದವ್ ಅವರು, ದೇಶದಲ್ಲಿ ಮೋದಿ ಗ್ಯಾರಂಟಿ ಎಂದರೆ, ಅದು ನೈಜ ಗ್ಯಾರಂಟಿ ಎಂಬುದನ್ನು ಜನರು ಅರ್ಥ ಮಾಡಿಕೊಂಡಿದ್ದಾರೆ. ಸುಳ್ಳು ಗ್ಯಾರಂಟಿಗಳ ಮೂಲಕ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎಂಬ ವಿಷಯವನ್ನು ಲೋಕಸಭಾ ಚುನಾವಣಾ ಪ್ರಚಾರಕ್ಕೆ ತೆರಳಿದಾಗ ಮತದಾರರಿಗೆ ಮನವರಿಕೆ ಮಾಡಿಕೊಡಿ ಎಂದು ಇಲ್ಲಿಯ ಮುಖಂಡರಿಗೆ ಕಿವಿ ಮಾತು ಹೇಳಿದರು. ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸ್‌ಘಡ ರಾಜ್ಯಗಳ ಜನತೆ ಕಾಂಗ್ರೆಸ್ ಗ್ಯಾರಂಟಿಯನ್ನು ತಿರಸ್ಕರಿಸಿದರು. ಮುಂದಿನ ಲೋಕಸಭಾ ಚುನಾವಣೆಯಲ್ಲಿ 400 ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಲಿದ್ದಾರೆ ಎಂದು ಭವಿಷ್ಯ ನುಡಿದರು.

ರಾಷ್ಟ್ರದ ಏಕತೆ, ಅಭಿವೃದ್ಧಿ ಮತ್ತು ರಾಮರಾಜ್ಯ ನಿರ್ಮಾಣಕ್ಕಾಗಿ ಮೋದಿ ಅವರು, 2014ರಿಂದಲೂ ನಿರಂತರವಾಗಿ ಶ್ರಮಿಸುತ್ತಲೇ ಬಂದಿದ್ದಾರೆ. ಕಾಂಗ್ರೆಸ್ ಪಕ್ಷ ಜಾತಿಗಳನ್ನು ವಿಭಜಿಸಿ ಅಧಿಕಾರಕ್ಕೆ ಬರಲು ಹವಣಿಸುತ್ತಿದ್ದು, ಇದಕ್ಕೆ ಜನರು ಮಣೆ ಹಾಕದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು. ಕಳೆದ ಒಂದು ದಶಕದಿಂದ ರಾಷ್ಟ್ರದ ರಾಜಕೀಯ ಕ್ಷೇತ್ರದಲ್ಲಿ ಮಹಾನ್ ಪರಿವರ್ತನೆಯಾಗಿದೆ. ಬಡವರಿಗೆ ನ್ಯಾಯ ಕೊಡುವ ವಿಷಯಕ್ಕೆ ಆದ್ಯತೆ ಕೊಡಲಾಗಿದೆ ಎಂದರು. ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಜನರ ದಿಕ್ಕುತಪ್ಪಿಸಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಆಂತರಿಕ ಕಲಹದಿಂದ ಆಡಳಿತ ಯಂತ್ರ ಕುಸಿದಿದೆ.

ಭ್ರಷ್ಟಾಚಾರ ತಾಂಡವವಾಡುತ್ತಿದೆ. ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಇದರ ನಡುವೆಯೂ ದುರ್ಮಾರ್ಗದಲ್ಲಿ ಮತಗಳಿಸುವ ಕುತಂತ್ರ ನಡೆಸಿದ್ದಾರೆ. ಜನರಿಗೆ ವಾಸ್ತವ ತಿಳಿಸಿ ನಾವು 28 ಕ್ಷೇತ್ರಗಳಲ್ಲಿ 28 ಅನ್ನು ಗೆಲ್ಲಲ್ಲೇಬೇಕೆಂದು ಪಣ ತೊಡೋಣ ಎಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಲೋಕಸಭೆ ಚುನಾವಣೆವರೆಗೂ ವಿಶ್ರಾಂತಿ ಪಡೆಯದೇ ಕಾಂಗ್ರೆಸ್‌ಗೆ ಪಾಠ ಕಲಿಸೋಣ ಎಂದು ಹೇಳಿದರು.

ಬಿಜೆಪಿಗೆ 400 ಸೀಟುಗಳು ಖಚಿತ

ಪಶ್ಚಿಮ ಬಂಗಾಳ ಹಾಗೂ ಬಿಹಾರದ ಬೆಳವಣಿಗೆಯಿಂದ ಕಾಂಗ್ರೆಸ್ ಮತ್ತಷ್ಟು ಕುಗ್ಗಿದೆ ಎಂದು ಭೂಪೇಂದ್ರ ಯಾದವ್ ಹೇಳಿದರು.

ಮೋದಿಯವರಿಗೆ ಕೊಡುಗೆ ನೀಡಬೇಕಿದೆ: ಮಾಜಿ ಸಿಎಂ ಯಡಿಯೂರಪ್ಪ ಮಾತನಾಡಿ, ನಮಗೆ ಮೋದಿಯೇ ಗ್ಯಾರಂಟಿ. ಹತ್ತು ವರ್ಷದ ಅವಧಿಯಲ್ಲಿ ಕರ್ನಾಟಕಕ್ಕೆ ರೈಲ್ವೆ, ಹೆದ್ದಾರಿಗೆ ಕೇಂದ್ರ ಸರ್ಕಾರ ಸಾಕಷ್ಟು ಅನುದಾನ ನೀಡಿದೆ. ಲೋಕಸಭಾ ಸಮರವು ನಮ್ಮೆಲ್ಲರಿಗೆ ಬಹುದೊಡ್ಡ ತಿರುವಿನ ಸತ್ವ ಪರೀಕ್ಷೆಯಾಗಿದೆ. ಈ ಬಾರಿ 28ಕ್ಕೆ 28 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ನರೇಂದ್ರ ಮೋದಿಯವರಿಗೆ ನಮ್ಮದೇ ಆದ ಕೊಡುಗೆ ನೀಡಬೇಕಿದೆ ಎಂದು ಯಡಿಯೂರಪ್ಪ ಕರೆ ಕೊಟ್ಟರು.

ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾತಾಡಿ, ಕಾಂಗ್ರೆಸ್ ಸರ್ಕಾರ ದಲಿತ ವಿರೋಧಿ, ರೈತ ವಿರೋಧಿ, ಬಡವರ ವಿರೋಧಿ ಸರ್ಕಾರ. ಅರೆಬರೆ ಗ್ಯಾರಂಟಿ ಇಟ್ಕೊಂಡು ಲೋಕಸಭೆ ಗೆಲ್ಲುವ ಭ್ರಮೆಯಲ್ಲಿದ್ದಾರೆ. ಇಡೀ ದೇಶ ಮೋದಿಯವರು ಮತ್ತೆ ಪ್ರಧಾನಿ ಆಗಲಿ ಅಂತ ಕಾಯುತ್ತಿದ್ದಾರೆ. ನಾವು ಈ ಬಾರಿ ರಾಜ್ಯದಲ್ಲಿ ಎಲ್ಲ 28 ಕ್ಷೇತ್ರ ಗೆಲ್ಲೋದು ನಿಶ್ಚಿತ ಅಂತ ಗುಡುಗಿದರು. ಲೋಕಸಭಾ ಚುನಾವಣೆ ದೃಷ್ಟಿಯಿಂದ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ 900 ನಾಯಕರು ಭಾಗವಹಿಸಿದ್ದರು. ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಜೊಳಿ, ಎಸ್.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್, ಮಾಜಿ ಸಚಿವ ವಿ. ಸೋಮಣ್ಣ, ಮಾಜಿ ಸಚಿವ ಸುಧಾಕರ್ ಗೈರಾಗಿದ್ದರು. ರಾಮಮಂದಿರ ನಿರ್ಮಾಣ ಹಿನ್ನೆಲೆ ಮೋದಿಯವರಿಗೆ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು. ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ಖಂಡನಾ ನಿರ್ಣಯ ತೆಗೆದುಕೊಳ್ಳಲಾಯಿತು.

ಪುನಶ್ಚೇತನಕ್ಕೆ ಶೀಘ್ರವೇ ಟೆಂಡರ್

ಲಲಿತಮಹಲ್ ಪ್ಯಾಲೇಸ್ ಹೋಟೆಲ್ ನವೀಕರಣಕ್ಕೆ ಪಾರಂಪರಿಕ ತಜ್ಞರ ಸಮಿತಿ ರಚನೆ ಮಾಡಲಾಗುವುದೇ ಎಂಬ ಪ್ರಶ್ನೆಗೆ, ಕಟ್ಟಡದ ಪಾರಂಪರಿಕ ಶೈಲಿಯ ಮೂಲ ಸ್ವರೂಪಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆಯಾಗದಂತೆ ನವೀಕರಣ ಕಾರ್ಯ ಮಾಡಲಾಗುವುದು ಎಂದು ಹೆಚ್.ಕೆ.ಪಾಟೀಲ್ ಭರವಸೆ ನೀಡಿದರು.

ಲಲಿತ ಮಹಲ್ ಪ್ಯಾಲೇಸ್ ಹೋಟೆಲ್‌ನ ಮೂಲ ಸೌಂದರ್ಯವನ್ನು ಹಾಗೆ ಕಾಪಾಡಿಕೊಳ್ಳಲಾಗುವುದು. ಈ ಮೂಲಕ ಹೋಟೆಲ್ ಅನ್ನು ಉನ್ನತ ದರ್ಜೆಗೇರಿಸಿ ಮತ್ತಷ್ಟು ಆಕರ್ಷಣೆಯ ಸ್ಥಳವಾಗಿ ಮಾಡಲಾಗುವುದು ಎಂದು ಹೇಳಿದರು.

ಡಿಸಿ ಕಚೇರಿ ಮ್ಯೂಸಿಯಂ ಆಗಿ ಮಾರ್ಪಾಡು

ಮೈಸೂರು ಅರಮನೆಯಲ್ಲಿ ಪ್ರಾಚ್ಯವಸ್ತು ಇಲಾಖೆಯ ಮ್ಯೂಸಿಯಂ ಇದ್ದು, ಕರ್ನಾಟಕದ ಎಲ್ಲಾ ಕಡೆ ದೊರೆತಿರುವ ಪ್ರಾಚ್ಯವಸ್ತುಗಳನ್ನು ಅಲ್ಲಿಡಲಾಗಿದೆ. ನಾನು ಕೂಡ ಅಲ್ಲಿ ಭೇಟಿ ನೀಡಿ ವೀಕ್ಷಣೆ ಮಾಡಿದ್ದೇನೆ. ಅಲ್ಲಿರುವ ಎಲ್ಲಾ ವಸ್ತುಗಳನ್ನು ಕೂಡ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಟ್ಟು ದೊಡ್ಡ ಮ್ಯೂಸಿಯಂ ಆಗಿ ಮಾರ್ಪಡಿಸಲು ಚಿಂತನೆ ನಡೆಸಲಾಗಿದೆ ಎಂದರು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರೊಡನೆ ಮಾತುಕತೆ ನಡೆಸಲಾಗುವುದು. ಸರ್ಕಾರದಿಂದ ಇದಕ್ಕೆ ಹಸಿರು ನಿಶಾನೆ ತೋರಿಸುತ್ತಿದ್ದಂತೆ ಹಳೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮ್ಯೂಸಿಯಂ ನಿರ್ಮಾಣ ಕಾರ್ಯ ಆರಂಭಿಸಲಾಗುವುದು ಎಂದು ಹೆಚ್.ಕೆ.ಪಾಟೀಲ್ ಹೇಳಿದರು.

ಪ್ರತಿದಿನ ವಿಶಿಷ್ಟ ಸಂಗೀತ ಕಾರ್ಯಕ್ರಮ

ವಾಸ್ತವ್ಯ ಹೂಡುವ ವಾತಾವರಣವಿಲ್ಲ ಎಂದು ಪ್ರಶ್ನೆಗೆ, ಮೈಸೂರು ನಗರದಲ್ಲೆ ಕನಿಷ್ಟ ಒಂದು ದಿನವಾದರೂ ವಾಸ್ತವ್ಯ ಹೂಡುವಂತೆ ಮಾಡಲು ಅರಮನೆಯಲ್ಲಿ ಪ್ರತಿದಿನ ರಾತ್ರಿ ಎರಡು ಗಂಟೆ ವಿಶಿಷ್ಟ ಸಂಗೀತ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಹೇಳಿದರು. ರಾತ್ರಿ ನಡೆಯುವ ಸಂಗೀತ ಕಾರ್ಯಕ್ರಮ ವೀಕ್ಷಣೆ ನಂತರ ಮೈಸೂರಿನಲ್ಲೆ ವಾಸ್ತವ್ಯ ಹೂಡುತ್ತಾರೆ. ಇದರಿಂದ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿ ಹೆಚ್ಚಾಗಲಿದ್ದು, ಇಲ್ಲಿನ ವ್ಯಾಪಾರ ವಹಿವಾಟು ಕೂಡ ವೃದ್ಧಿಯಾಗಲಿದೆ. ಈ ಹಿನ್ನೆಲೆ ಅರಮನೆಯಲ್ಲಿ ಯಾವ ರೀತಿಯ ಸಂಗೀತ ಕಾರ್ಯಕ್ರಮ ಇರಬೇಕೆಂದು ಚಿಂತನೆ ನಡೆಸಲಾಗುತ್ತಿದೆ ಎಂದು ಹೆಚ್.ಕೆ.ಪಾಟೀಲ್ ತಿಳಿಸಿದರು.

ಮೈಸೂರಿನ ಹೋಟೆಲ್‌ಗಳನ್ನು ರಾತ್ರಿ 10 ಗಂಟೆಗೆ ಮುಚ್ಚಿಸುತ್ತಿರುವ ಕಾರಣ ಹೊರ ಸ್ಥಳಗಳಿಂದ ಬರುವ ಪ್ರವಾಸಿಗರಿಗೆ ತೊಂದರೆ ಆಗುತ್ತಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಹೆಚ್.ಕೆ.ಪಾಟೀಲ್, ಈ ವಿಚಾರದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಉತ್ತರ ಕೊಡುತ್ತಾರೆ ಎಂದು ಹೇಳಿದರು.

ನಿತೀಶ್ ಕುಮಾರ್ ಸಿಎಂ ಸ್ಥಾನಕ್ಕೆ ರಾಜೀನಾಮೆ ಸಾಧ್ಯತೆ

ರಾಜೀನಾಮೆ ನೀಡಲಿದ್ದಾರೆ ಎಂದು ಮೂಲಗಳು ಹೇಳಿವೆ. ದಿಢೀರ್ ಬೆಳವಣಿಯಲ್ಲಿ ಬಿಜೆಪಿ ಬೆಂಬಲದೊಂದಿಗೆ ಸರ್ಕಾರ ರಚನೆಗೆ ನಿತೀಶ್ ಕುಮಾರ್ ಮುಂದಾಗಿರುವುದರಿಂದ ಭಾನುವಾರವೂ ಸೆಕ್ರೆಟರಿಯೇಟ್‌ನಂತಹ ಸರ್ಕಾರಿ ಕಚೇರಿಗಳನ್ನು ತೆರೆದಿರಲು ತಿಳಿಸಲಾಗಿದೆ. ಈ ಮಧ್ಯೆ ಬಿಜೆಪಿ ಶಾಸಕಾಂಗ ಪಕ್ಷದ ನಡೆದಿದ್ದು, ನಿತೀಶ್ ಕುಮಾರ್ ಜೊತೆ ಸೇರಿ ಸರ್ಕಾರ ರಚಿಸುವ ಕುರಿತು ಯಾವುದೇ ಘೋಷಣೆ ನೀಡದಿರಲು ಕಮಲ ನಾಯಕರು ನಿರ್ಧರಿಸಿದ್ದಾರೆ. ಮೂರು ವರ್ಷಗಳ ಹಿಂದೆ ಎನ್ ಡಿಎ ಮೈತ್ರಿ ತೊರೆದಿದ್ದ ನಿತೀಶ್ ಕುಮಾರ್ ಅಧಿಕೃತ ಘೋಷಣೆ ನೀಡುವವರೆಗೂ ಬಿಜೆಪಿ ನಾಯಕರು ಯಾವುದೇ ಮಾಹಿತಿ ನೀಡದಂತೆ ಹೈಕಮಾಂಡ್‌ನಿಂದ ಸೂಚನೆ ಬಂದಿದೆ ಎಂದು ಮೂಲಗಳು ಹೇಳಿವೆ.

ರೇವಣ್ಣ ಪುತ್ರ ಸೂರಜ್

ಟಿಕೆಟ್ ನೀಡಿ ಆ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು. ಮತ್ತೆ ಲೋಕಸಭಾ ಚುನಾವಣೆಯಲ್ಲಿ ಇದೇ ಪುನರಾರಂಭ ಗೊಳ್ಳಬಹುದು ಎಂಬ ಭಯ ರೇವಣ್ಣ ಅವರ ಕುಟುಂಬದಲ್ಲಿ ಕಾಡುತ್ತಿದೆ. ಇತ್ತೀಚೆ ಗಂತು ರೇವಣ್ಣ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವೇ ಸಾರ್ವ ಜನಿಕವಾಗಿ ನಿಂತಿದ್ದಾರೆ. ಕುಟುಂಬ ವರ್ಗ ಮುಂದಾಲೋಚನೆಯಿಂದ ಕಾಂಗ್ರೆಸ್ ಬಾಗಿಲು ಬಡಿದಿದೆ ಎಂದು ರಾಜಕೀಯ ವಲಯದಲ್ಲಿ ಚರ್ಚೆ ಆಗುತ್ತಿದೆ. ಸೂರಜ್ ರೇವಣ್ಣ ಅವರು ಶಿವಕುಮಾರ್ ಜೊತೆ ಮುಖಾಮುಖಿ ಬಹು ಸಮಯ ಚರ್ಚೆ ಮಾಡಿದ್ದಾರೆ. ಇತ್ತೀಚಿನ ಬೆಳವಣಿಗೆಗಳನ್ನು ಶಿವಕುಮಾರ್ ಅವರ ಗಮನಕ್ಕೆ ಸೂರಜ್ ತಂದಿದ್ದಾರೆ ಎನ್ನಲಾಗಿದೆ. ಕುಮಾರಸ್ವಾಮಿ ರಾಜ್ಯಾಧ್ಯಕ್ಷರಾದದ್ದು, ಬಿಜೆಪಿ ಜೊತೆ ಕೈಜೋಡಿಸಿದ್ದು, ಅವರ ಇಚ್ಛೆಯಂತೆ ನಡೆದುಕೊಳ್ಳುತ್ತಿರುವುದು. ಪ್ರಧಾನಿ ಸೇರಿದಂತೆ ಬಿಜೆಪಿ ರಾಷ್ಟ್ರೀಯ ನಾಯಕರ ಭೇಟಿ ಸಂದರ್ಭದಲ್ಲಿ ತಮ್ಮ ಕುಟುಂಬದವರನ್ನು ಹೊರಗಿಟ್ಟಿದ್ದಾರೆ. ಇತ್ತೀಚೆಗೆ ಅಯೋಧ್ಯೆಯ ರಾಮದೇವರ ಪ್ರಾಣ ಪ್ರತಿಷ್ಠಾಪನೆ ಸಂದರ್ಭದಲ್ಲೂ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂಬ ಅಸಮಾಧಾನ ಸೇರಿದಂತೆ ಅನೇಕ ವಿಚಾರಗಳನ್ನು ಬಿಚ್ಚಿಟ್ಟಿದ್ದಾರೆನ್ನಲಾಗಿದೆ. ಇವರಿಬ್ಬರ ಭೇಟಿ ವಿಚಾರ ದೇವೇಗೌಡರ ಕುಟುಂಬ ಹಾಗೂ ಜೆಡಿಎಸ್‌ನಲ್ಲೂ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಅವರು ಯಾವುದೋ ಅನುದಾನದ ವಿಚಾರಕ್ಕೆ ಭೇಟಿಯಾಗಿದ್ದರೂ ಎಂಬ ಮಾತು ಈ ವಲಯದಿಂದ ಕೇಳಿಬಂದಿದೆ.

ಸೂರಜ್ ಜೊತೆ ಡಿ.ಕೆ.ಶಿವಕುಮಾರ್ ಮುಖಾಮುಖಿ ಮಾತನಾಡುವಾಗ ಯಾರನ್ನು ಹತ್ತಿರ ಸುಳಿಯಗೊಡಲಿಲ್ಲ. 30 ನಿಮಿಷಗಳ ಕಾಲ ಗೌಪ್ಯ ಚರ್ಚೆಯಾಗಿದೆ. ಚರ್ಚೆಯ ಫಲಿತಾಂಶವೇನು ಎಂಬುದು ಮುಂದಿನ ದಿನಗಳಲ್ಲಷ್ಟೇ ಬಹಿರಂಗಗೊಳ್ಳಬೇಕಿದೆ.

ಕರ್ನಾಟಕದಲ್ಲಿನ ಪ್ರಮುಖ 500 ಸ್ಮಾರಕಗಳ ಗುರುತಿಸಿ

ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅಧಿಕಾರಿಗಳಿಗೆ ತಾಕೀತು

ಮೈಸೂರು, ಜ.27(ಬಿಎಲ್‌ಯು)– ಶಿಥಿಲಾವಸ್ಥೆಯಲ್ಲಿರುವ ಕರ್ನಾಟಕದ 500 ಸ್ಮಾರಕಗಳನ್ನು ಮಾರ್ಚ್ ಅಂತ್ಯದ ವೇಳೆಗೆ ಗುರುತಿಸುವಂತೆ ಪ್ರಾಚ್ಯವಸ್ತು ಇಲಾಖೆಯ ಆಯುಕ್ತರಿಗೆ ತಾಕೀತು ಮಾಡಿದ್ದೇನೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದರು.



ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ಸ್ ಆರ್ಟ್ಸ್‌ನಲ್ಲಿ ಆಯೋಜಿಸಿರುವ ಕಲಾವಿದ ಡಾ.ವಿಠ್ಠಲರಡ್ಡಿ ಎಸ್.ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಉದ್ಘಾಟಿಸಿದರು.

ಮೈಸೂರಿನ ವಿಜಯನಗರದ ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ಸ್ ಆರ್ಟ್ಸ್‌ನಲ್ಲಿ ಆಯೋಜಿಸಿರುವ ಕಲಾವಿದ ಡಾ.ವಿಠ್ಠಲರಡ್ಡಿ ಎಸ್.ಚುಳಕಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಶಿಥಿಲಾವಸ್ಥೆಯಲ್ಲಿರುವ ಸ್ಮಾರಕಗಳನ್ನು ಗುರುತಿಸಿ ಅವುಗಳನ್ನು ಸಂರಕ್ಷಿಸಲಾಗುವುದು ಎಂದು ಹೇಳಿದರು.

ಕರ್ನಾಟಕದಲ್ಲಿ ಸುಮಾರು 24 ಸಾವಿರ ಸ್ಮಾರಕಗಳಿವೆ. ಇವುಗಳಲ್ಲಿ 850 ಸ್ಮಾರಕಗಳನ್ನು ಈಗಾಗಲೇ ಗುರುತಿಸಲಾಗಿದೆ. ಇವುಗಳಲ್ಲಿ 500 ಸ್ಮಾರಕಗಳನ್ನು ಸಂರಕ್ಷಿಸಿದ್ದು, ಪ್ರವಾಸಿಗರು ಭೇಟಿ ನೀಡಿ ಅವುಗಳನ್ನು ವೀಕ್ಷಿಸುವ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಸಂರಕ್ಷಿಸಿರುವ ಸ್ಮಾರಕಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕೂಡ ಕಲ್ಪಿಸಲಾಗಿದೆ ಎಂದು ಅಂಕಿ ಅಂಶಗಳ ವಿವರ ನೀಡಿದರು.

ಆದರೆ ಕರ್ನಾಟಕದಲ್ಲಿ ಇನ್ನುಳಿದಿರುವ 23,150 ಸ್ಮಾರಕಗಳನ್ನು ಇನ್ನು ಗುರುತಿಸಿಲ್ಲ. ಈ ಸ್ಮಾರಕಗಳು ಗುಡಿ ಸೇರಿದಂತೆ ಬೇರೆ ಬೇರೆ ರೂಪಗಳಲ್ಲಿವೆ. ಬಹಳಷ್ಟು ವರ್ಷಗಳಾಗಿರುವ ಕಾರಣ ಈ ಸ್ಮಾರಕಗಳು ಶಿಥಿಲಾವಸ್ಥೆಯಲ್ಲಿವೆ. ಈ ಹಿನ್ನೆಲೆಯಲ್ಲಿ ಮಾರ್ಚ್ ಅಂತ್ಯದ ವೇಳೆಗೆ ಇವುಗಳಲ್ಲಿ 500 ಸ್ಮಾರಕಗಳನ್ನು ಗುರುತಿಸುವಂತೆ ಪ್ರಾಚ್ಯವಸ್ತು ಇಲಾಖೆಯ ಆಯುಕ್ತರಿಗೆ ತಾಕೀತು ಮಾಡಿದ್ದೇನೆ. ಸ್ಮಾರಕಗಳನ್ನು ಗುರುತಿಸಿದ ನಂತರ ಅವುಗಳನ್ನು ಸಂರಕ್ಷಿಸುವ ಕಾರ್ಯ ಆರಂಭಿಸಲಾಗುವುದು ಎಂದು ಹೆಚ್.ಕೆ.ಪಾಟೀಲ್ ಭರವಸೆ ನೀಡಿದರು.

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರದ ನಾಗಾವಿಯಲ್ಲಿ ಕ್ರಿ.ಶ.2ನೇ ಶತಮಾನದ ವಿಶ್ವವಿದ್ಯಾನಿಲಯ ಪತ್ತೆಯಾಗಿದೆ. 1,800 ವರ್ಷಗಳ ಹಿಂದೆ ಇದ್ದ ಈ ವಿಶ್ವವಿದ್ಯಾನಿಲಯ ನಳಂದ ವಿಶ್ವವಿದ್ಯಾನಿಲಯಕ್ಕಿಂತ ಮೊದಲೆ ಇದ್ದ ಪ್ರಾಚೀನ ವಿಶ್ವವಿದ್ಯಾನಿಲಯವಾಗಿದೆ. ಅಲ್ಲಿ 250 ಕ್ಕೂ ಹೆಚ್ಚು ವಿದ್ವಾಂಸರು ಅಧ್ಯಯನ ಮಾಡುತ್ತಿದ್ದ ಕುರುಹು ಪತ್ತೆಯಾಗಿದೆ. ಕರ್ನಾಟಕದಲ್ಲಿರುವ ಇಂತಹ ಹತ್ತು ಹಲವು ಸ್ಮಾರಕಗಳನ್ನು ಈಗ ಸಂರಕ್ಷಿಸಬೇಕಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಹೆಚ್.ಕೆ.ಪಾಟೀಲ್ ಹೇಳಿದರು.

ಕರ್ನಾಟಕ ಒಂದರಲ್ಲೇ 25 ಸಾವಿರ ಗುಡಿಗಳಿದ್ದು, ಅವುಗಳ ಸಂರಕ್ಷಣೆ ಮಾಡುತ್ತಿಲ್ಲ. ಅದರ ಬದಲು ಒಂದು ಗುಡಿ ನಿರ್ಮಾಣಕ್ಕೆ ಬಡಿದಾಡುತ್ತಿದ್ದಾರೆ ಎಂದು ರಾಮಮಂದಿರ ನಿರ್ಮಾಣ ವಿಚಾರವನ್ನು ಪರೋಕ್ಷವಾಗಿ ಉಲ್ಲೇಖಿಸಿದ ಹೆಚ್.ಕೆ.ಪಾಟೀಲ್, ಇನ್ನು ಕೂಡ ಪ್ರಚಲಿತಕ್ಕೆ ಬಾರದ ಬಹಳಷ್ಟು ಸ್ಮಾರಕಗಳನ್ನು ಈಗಲಾದರೂ ಸಂರಕ್ಷಿಸಲು ಮುಂದಾಗಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದರು.

ನಮ್ಮ ನಾಡಿನ ಕಲೆ ಉಳಿಸಿ, ಭವಿಷ್ಯತ್ತಿನ ಪ್ರಜೆಗಳು ತಿಳಿಯುವಂತಾಗಲು ಸಂರಕ್ಷಿಸಬೇಕು. ಇಲ್ಲದಿದ್ದರೆ ಇತಿಹಾಸ ಮರೆತಂತಾಗುತ್ತದೆ. ಇತಿಹಾಸ ತಿಳಿಯದವರು, ಇತಿಹಾಸ ಸೃಷ್ಟಿಸಲಾರರು ಎಂಬ ಮಾತಿನ ಮಹತ್ವವನ್ನು ಅರಿಯಬೇಕು ಎಂದು ಕಿವಿಮಾತು ಹೇಳಿದರು.

ಇವತ್ತಿಗೂ ಕೂಡ ಕಲೆಗೆ ಬಹಳಷ್ಟು ಬೆಲೆ ಇದೆ. ಬೆಂಗಳೂರಿನಲ್ಲಿ ನಡೆದ ಚಿತ್ರಸಂತೆಯಲ್ಲಿ ಸುಮಾರು 8 ಕೋಟಿ ರೂಪಾಯಿಗೂ ಮೀರಿ ವಹಿವಾಟು ನಡೆದಿದೆ. ಕಲೆ ಬಗ್ಗೆ ಜನರಿಗಿರುವ ಆಸಕ್ತಿ, ಗೌರವ ಎಷ್ಟರ ಮಟ್ಟಿಗೆ ಇದೆ ಎಂಬುದು ಇದರಿಂದ ಸಾಬೀತಾಗುತ್ತದೆ. ಈ ನಿಟ್ಟಿನಲ್ಲಿ ಕಲೆಯನ್ನು ಉಳಿಸಿ, ಸಂರಕ್ಷಿಸಬೇಕು ಎಂದು ಹೆಚ್.ಕೆ.ಪಾಟೀಲ್ ಮತ್ತೊಮ್ಮೆ ಸಲಹೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಲಲಿತಕಲಾ ಅಕಾಡೆಮಿ ನಿಕಟ ಪೂರ್ವ ಅಧ್ಯಕ್ಷ ಡಾ.ಎಂ.ಎಸ್.ಮೂರ್ತಿ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಕಾರ್ಯದರ್ಶಿ ಬಾಬುರಾವ್, ಪತ್ರಕರ್ತ ನರಸಿಂಹ ಮೂರ್ತಿ, ಕಾಲೇಜಿನ ಪ್ರಾಚಾರ್ಯ ಕೆ.ಸಿ.ಮಹದೇವಶೆಟ್ಟಿ, ಕಲಾವಿದ ಡಾ.ವಿಠ್ಠಲರಡ್ಡಿ ಎಸ್.ಚುಳಕಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಾಳೆಯಿಂದ ಮೈಸೂರಲ್ಲಿ ಮಂಜಿರ ಮಹೋತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ವತಿಯಿಂದ ಮಂಜಿರ ಮಹೋತ್ಸವದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ಜ.27(ಜಿಎ)–ಮೈಸೂರಿನ ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ವತಿಯಿಂದ ಮಂಜಿರ ಮಹೋತ್ಸವವನ್ನು ಜ.29 ರಿಂದ 31ರವರೆಗೂ ಕುವೆಂಪು ನಗರದಲ್ಲಿರುವ ಗಾನ ಭಾರತೀ ರಮಾಗೋವಿಂದ ಕಲಾ ವೇದಿಕೆಯಲ್ಲಿ ಏರ್ಪಡಿಸಲಾಗಿದೆ ಎಂದು ಸೆಂಟರ್‌ನ ಮ್ಯಾನೇಜಿಂಗ್ ಟ್ರಸ್ಟಿ ಎಂ.ಬಿ.ನಾಗಶ್ರೀ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಜಿರ ಮಹೋತ್ಸವವನ್ನು ಜ.29 ರಂದು ಸಂಜೆ 5.45ಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಅಧ್ಯಕ್ಷ ಎಂ.ಕೆ.ಬಾಲ ರಾಜು, ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ನಿರ್ದೇಶಕಿ ವಿದುಷಿ ಡಾ.ಕೃಪಾ ಫಡ್ಕೆ ಆಗಮಿಸಲಿದ್ದಾರೆ. ಈ ವೇಳೆ ಒಡಿಸ್ಸಿ ನೃತ್ಯ ಕಲಾವಿದೆ ವಿದುಷಿ ಸಿಂಧು ಕಿರಣ್ ಅವರನ್ನು ಅಭಿನಂದಿಸಲಾಗುವುದು ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಸಂಜೆ 6ಕ್ಕೆ ಖ್ಯಾತ ಭರತನಾಟ್ಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಅವರು ಭರತ ನಾಟ್ಯ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ನಂತರ 7.30ಕ್ಕೆ ರುದ್ರ ನೃತ್ಯ ಯೋಗಶಾಲೆಯ ನಿರ್ದೇಶಕಿ ವಿದುಷಿ ಸಿಂಧು ಕಿರಣ್ ಒಡಿಸ್ಸಿ ನೃತ್ಯ ಪ್ರದರ್ಶಿಸಲಿದ್ದಾರೆ. ಜ.30ರಂದು ಸಂಜೆ 6ಗಂಟೆಗೆ ವಿದ್ವಾನ್ ಎನ್.ಶ್ರೀಕಾಂತ್, ವಿದುಷಿ ಅಶ್ವತಿ ವಿನಾಯರ್ ಭರತ ನಾಟ್ಯ ಪ್ರದರ್ಶನ ನೀಡಲಿದ್ದಾರೆ. ನಂತರ 7.30 ವಿದುಷಿ ಅದಿತಿ ಅಶೋಕ್, ವಿದುಷಿ ಸ್ಫೂರ್ತಿ ಅಶೋಕ್ ಕಥಕ್ ನೃತ್ಯ ಪ್ರಸ್ತುತ ಪಡಿಸಲಿದ್ದಾರೆ. ಜ.31 ರಂದು ಸಂಜೆ 6ಗಂಟೆಗೆ ವಿದ್ವಾನ್ ಸತ್ಯನಾರಾಯಣ ರಾಜು ಮತ್ತು 7.30ಕ್ಕೆ ವಿದುಷಿ ರಚಿನಿ ಕಲ್ಲೂರು ಭರತನಾಟ್ಯ ಪ್ರದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೃಪಾ ಫಡ್ಕೆ, ಬಾಲ ರಾಜು, ಫಣೀಂದ್ರ ಕುಮಾರ್ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ರಾಜ್ಯಮಟ್ಟದ ಅಲೆಮಾರಿ, ಅರೆ ಅಲೆಮಾರಿ ಸಾಹಿತ್ಯ, ಸಾಂಸ್ಕೃತಿಕ ಕಲೋತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕೆ.ರವೀಂದ್ರ ಶೆಟ್ಟಿ ಮಾತನಾಡಿದರು.

ಮೈಸೂರು,ಜ.27(ಜಿಎ)–ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ (ಹಿಂದುಳಿದ ವರ್ಗಗಳ ಪ್ರವರ್ಗ–1) ಜನಾಂಗಗಳ ಒಕ್ಕೂಟದ ವತಿಯಿಂದ ಜ.28 ರಂದು ಮೈಸೂರಿನ ಪುರಭವನದಲ್ಲಿ ರಾಜ್ಯಮಟ್ಟದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವ ಆಯೋಜಿಸಲಾಗಿದೆ ಎಂದು ಒಕ್ಕೂಟದ ಗೌರವ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಲಿದ್ದಾರೆ. ಪ್ರತಿಭಾ ಪುರಸ್ಕಾರ, ಒಕ್ಕೂಟದ ಕ್ಯಾಲೆಂಡರ್ ಅನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಿಡುಗಡೆಗೊಳಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ವಹಿಸಲಿದ್ದಾರೆ. ವಿಶೇಷ ಅತಿಥಿಗಳಾಗಿ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಡಾ.ಮನೋಹರ್ ಲೋಹಿಯ ವಿಚಾರ ವೇದಿಕೆಯ ಅಧ್ಯಕ್ಷ ಮಳವಳ್ಳಿ ಶಿವಣ್ಣ ಭಾಗವಹಿಸಲಿದ್ದಾರೆ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಬೆಳಗ್ಗೆ 11.30ರಿಂದ 12.30ರವರೆಗೂ 'ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಸಮಸ್ಯೆಗಳು ಮತ್ತು ಸವಾಲುಗಳು' ಕುರಿತು ವಿಚಾರಗೋಷ್ಠಿ ನಡೆಯಲಿದೆ. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎಂ.ಪ್ರಕಾಶ್, ಪ್ರತಾಪ್ ಕುಮಾರ್ ಒ.ಜೋಗಿ, ಬಸವರಾಜ್ ಹೇಳವ, ಯಧುರಾಜ್ ಯಾದವ್, ವೆಂಕಟೇಶ್ ಯಾದವ್, ರಾಮಕೃಷ್ಣ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ 30 ಜೊತೆ ಕುಸ್ತಿ ಪಂದ್ಯಾವಳಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕುಸ್ತಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ಜ.27(ಜಿಎ)–ಮೈಸೂರು ಜಿಲ್ಲಾ ಕುಸ್ತಿ ಸಂಘದ ವತಿಯಿಂದ ಜ.28ರಂದು ನಗರದ ವಿವಿದೋದ್ದೇಶ ಕ್ರೀಡಾಂಗಣದಲ್ಲಿ 30 ಜೊತೆಗಳ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ.

ಸಂಘದ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ಸ್ಟಾರ್ ವೆಂಕಟೇಶ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಅಂದು ಮಧ್ಯಾಹ್ನ 3 ಗಂಟೆಗೆ ಪಂದ್ಯಾವಳಿ ಆರಂಭವಾಗಲಿದ್ದು, ನಟ ಶ್ರೀಮುರಳಿ, ಕೃಷಿ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ರಾಮಚಂದ್ರಪ್ಪ ಚಾಲನೆ ನೀಡಲಿದ್ದಾರೆ. ಮಹಾರಾಷ್ಟ್ರದ ಹಿರಿಯ ಕುಸ್ತಿ ಪಟುಗಳಾದ ಪೈಲ್ವಾನ್ ಉತ್ತಮ್‌ಕದಂ, ಪೈಲ್ವಾನ್ ಕೇದರ್ ನಾಥ್, ಪೈಲ್ವಾನ್ ಸ್ಪಿಂಗ್ ಎಕ್ಬಾಲ್ ವಿಶೇಷ ಅತಿಥಿಗಳಾಗಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್, ಮಾಜಿ ಮೇಯರ್‌ಗಳಾದ ಸಂದೇಶ್ ಸ್ವಾಮಿ, ಪುರುಷೋತ್ತಮ್, ಸಮಾಜ ಸೇವಕ ಕೆ.ಜಿ.ಕೊಪ್ಪಲ್ ಬಸವರಾಜು ಆಗಮಿಸಲಿದ್ದಾರೆ ಎಂದರು.

ಈ ಪಂದ್ಯಾವಳಿಯಲ್ಲಿ ಮೈಸೂರು ಕುಸ್ತಿ ಪಟುಗಳಿಗೆ ಮಾತ್ರ ಅವಕಾಶ ಕಲ್ಪಿಸಿದ್ದು, ವಿಶೇಷವಾಗಿ ಎರಡು ಮಾರ್ಫಿಟ್ ಕುಸ್ತಿ ನಡೆಯಲಿದೆ. ವಿಜೇತರಿಗೆ ನಗದು ಬಹುಮಾನ ಮತ್ತು ಗದೆ ನೀಡಿ ಅಭಿನಂದಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಪೈಲ್ವಾನ್ ಚಂದ್ರಶೇಖರ್ ಇಟ್ಟಿಗೆಗೂಡು, ಖಜಾಂಚಿ ಪೈಲ್ವಾನ್ ರಾಜಶೇಖರ್, ಗೌರವಾಧ್ಯಕ್ಷ ಪೈಲ್ವಾನ್ ಛೋಟಾ ರಫಿಕ್ ಮತ್ತಿತರರು ಉಪಸ್ಥಿತರಿದ್ದರು.

ಜ.30, 'ಬಾಳೊಂದು ಭಾವಗೀತೆ' ಗಾಯನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎ.ಎಸ್.ರವಿಶಂಕರ್ ಮಾತನಾಡಿದರು.

ಮೈಸೂರು,ಜ.27(ಜಿಎ)– ಮೈಸೂರಿನ ಸೌಂಡ್ ಎನ್ ರಿದಂ ವತಿಯಿಂದ ಜ.30ರಂದು ಸಂಜೆ 5.30ಕ್ಕೆ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಬಾಳೊಂದು ಭಾವಗೀತೆ' ಶೀರ್ಷಿಕೆ ಅಡಿ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಮುಖ್ಯಸ್ಥ ಎ.ಎಸ್.ರವಿಶಂಕರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿ, ಅಂದಿನ ಕಾರ್ಯಕ್ರಮದಲ್ಲಿ 80, 90ರ ದಶಕದ ಆಯ್ದ 26 ಕನ್ನಡ ಗೀತೆಗಳನ್ನು ಗಾಯಕರು ಪ್ರಸ್ತುತ ಪಡಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಅರುಣಾಚಲಂ, ಗಣೇಶ, ಗಂಗಾಧರ್, ಅನುರಾಧ ಉಪಸ್ಥಿತರಿದ್ದರು.

ನಮ್ಮ ಮೈಸೂರು ಹೊರವಲಯದಲ್ಲೇ ಪ್ರಿಂಟ್ ಆಗುತ್ತಿದ್ದವು 500, 200ರ ನಕಲಿ ನೋಟುಗಳು!

- ಮೈಸೂರು ಜಿಲ್ಲೆಯ ಇಬ್ಬರು ಸೇರಿ ಆರು ಮಂದಿ ಬಂಧನ
- ದಾವಣಗೆರೆ ಬಳಿ ಚಲಾವಣೆಗಿಳಿದಾಗ ಜಾಲ ಬಯಲು



ಮೈಸೂರು, ಜ.27– ದಾವಣಗೆರೆ ಪೊಲೀಸರು ಖೋಟಾ ನೋಟು ಚಲಾವಣೆ ಮಾಡುತ್ತಿದ್ದ ಜಾಲವನ್ನು ಭೇದಿಸಿ ಆರು ಮಂದಿಯನ್ನು ಬಂಧಿಸಿದ್ದು, ಆ ಖದೀಮರು ಮೈಸೂರಿನಲ್ಲೇ ನಕಲಿ ನೋಟು ತಯಾರಿಸುತ್ತಿದ್ದರು ಎಂಬುದು ಬಯಲಾಗಿದೆ.

ದಾವಣಗೆರೆ ಜಿಲ್ಲೆ, ಹರಿಹರ ತಾಲೂಕು ಹನಗವಾಡಿ ಬಳಿ ನಕಲಿ ನೋಟು ಚಲಾವಣೆ ಮಾಡುತ್ತಿದ್ದ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಭಾರೀ ಜಾಲವೇ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಕೂಡಲೇ ಕಾರ್ಯಾಚರಣೆ ತೀವ್ರಗೊಳಿಸಿದ ಪೊಲೀಸರು ಆರು ಮಂದಿ ಆರೋಪಿಗಳನ್ನು ಬಂಧಿಸಿ, ಸುಮಾರು 7 ಲಕ್ಷ ರೂ. ನಕಲಿ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲೆ ತಿ.ನರಸೀಪುರ ತಾಲೂಕು, ಬನ್ನೂರು ಹೋಬಳಿಯ ಮಾಕನಹಳ್ಳಿಯ ಮನೋಜ್ ಗೌಡ(21), ಕೆ.ಆರ್.ನಗರ ತಾಲೂಕು ಬೋರೆ ಕಲ್ಲಹಳ್ಳಿಯ ಸಂದೀಪ(30), ಹರಿಹರ ತಾಲೂಕಿನ ಕುಕ್ಕವಾಡದ ತಳವಾರ ಕುಬೇರಪ್ಪ(58), ಐಗೂರು ಲಿಂಗಾಪುರದ ಹರೀಶ(29), ಭದ್ರಾವತಿ ತಾಲೂಕು ದೊಡ್ಡಗೊಪ್ಪನಹಳ್ಳಿಯ ಜೆ.ರುದ್ರೇಶ(39), ಹೊಳಲ್ಕೆರೆ ತಾಲೂಕಿನ ಕಲ್ಕೆರೆ ಲಂಬಾಣಿ ಹಟ್ಟಿಯ ಕೃಷ್ಣನಾಯಕ(28) ಬಂಧಿತರು.

ಮೈಸೂರಲ್ಲೇ ಮುದ್ರಣ: ಮನೋಜ್ ಗೌಡ ಹಾಗೂ ಜೆ.ರುದ್ರೇಶ್‌ನನ್ನು ಮೈಸೂರಿನ ಕೂರ್ಗಳ್ಳಿ–ಮೇಗಲ ಕೊಪ್ಪಲಿನ ಬಾಡಿಗೆ ಮನೆಯಲ್ಲೇ ಬಂಧಿಸಿದ್ದು, ನಕಲಿ ನೋಟುಗಳ ಜೊತೆಗೆ ಕೃತ್ಯಕ್ಕೆ ಬಳಸಿದ ಕಾರು, ಖೋಟಾ ನೋಟು ತಯಾರಿಸಲು ಉಪಯೋಗಿಸಿದ ಲ್ಯಾಪ್‌ಟಾಪ್‌ಗಳು, ಕಲರ್ ಪ್ರಿಂಟರ್‌ಗಳು, ಪೇಪರ್ ಕಟ್ಟರ್, ಕಲರ್ ಬಾಟಲಿಗಳು, ಕೆಲವು ಅರೆಬರೆ ಮುದ್ರಿತ ನೋಟುಗಳು ಹಾಗೂ ಇತರೆ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಆ ಕೊಠಡಿಯಲ್ಲೇ ಖೋಟಾ ನೋಟು ಮುದ್ರಿಸಿ, ಅಸಲಿ ನೋಟುಗಳ ಜೊತೆ ಸೇರಿಸಿ ಸಂತೆ, ಜಾತ್ರೆ, ಜನಸಂದಣಿ ಇರುವ ಅಂಗಡಿಗಳಿಗೆ ನೀಡಿ ಚಿಲ್ಲರೆ ಪಡೆಯುತ್ತಿದ್ದರು ಎಂದು ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಎರಡು ದಿನಗಳ ಹಿಂದೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೊರೊನಾ ಎಫೆಕ್ಟ್?: ಭದ್ರಾವತಿ ಮೂಲದ ರುದ್ರೇಶ್, ಎಂಬಿಎ ವ್ಯಾಸಂಗ ಮಾಡಿದ್ದು ತಾಂತ್ರಿಕ ಕೌಶಲಗಳನ್ನು ರೂಢಿಸಿಕೊಂಡಿದ್ದಾನೆ. ಈತ ನೋಟುಗಳನ್ನು ಸ್ಕ್ಯಾನ್ ಮಾಡಿ ಮುಖ ಬೆಲೆಯನ್ನು ಬರೆಯುವ ಕೌಶಲ ಹೊಂದಿದ್ದ. ಕೊರೊನಾ ಸಮಯದಲ್ಲಿ ವ್ಯವಹಾರದಲ್ಲಿ ನಷ್ಟವಾಗಿ ಎಲ್ಲೂ ಕೆಲಸ ಸಿಗದೇ ಇದ್ದಾಗ ಕೆಟ್ಟ ಆಲೋಚನೆ ಮಾಡಿದ್ದ. ಆರಂಭದಲ್ಲಿ ಕೋಳಿಫಾರಂ ಇಟ್ಟುಕೊಂಡಿದ್ದು ಜಮೀನಿನ ಪಕ್ಕದಲ್ಲೇ ಇದ್ದ ತಳವಾರ್ ಕುಬೇರಪ್ಪ ಅವನ ಪರಿಚಯವಾಗಿ ಈ ದಂಧೆಗೆ ಇಳಿದಿದ್ದ. ರುದ್ರೇಶ್ ತಾಂತ್ರಿಕ ಕೆಲಸಗಳನ್ನು ಮಾಡಿದರೆ ಮನೋಜ್ ಹಾಗೂ ಸಂದೀಪ್ ನಕಲಿ ನೋಟು ಮುದ್ರಣಕ್ಕೆ ಸಹಾಯ ಮಾಡುತ್ತಿದ್ದರು. ತಳವಾರ್ ಕುಬೇರಪ್ಪ, ಹರೀಶ್ ಹಾಗೂ ಕೃಷ್ಣನಾಯಕ ಹಣ ಚಲಾವಣೆ ಮಾಡುತ್ತಿದ್ದರು. ಯೂಟ್ಯೂಬ್‌ನಲ್ಲಿ ನೋಡಿ ರುದ್ರೇಶ್ ನೋಟು ಮುದ್ರಣ ಕಲೆ ಕಲಿತಿದ್ದ. ಮುದ್ರಣಕ್ಕೆ ಬೇಕಾಗುವ ಪರಿಕರಗಳನ್ನು ಬೆಂಗಳೂರಿನಲ್ಲಿ ಖರೀದಿಸಿದ್ದಾರೆ ಆರೋಪಿಗಳ ಜೊತೆ ಬೇರೆಯವರೂ ಶಾಮೀಲಾಗಿದ್ದಾರಾ ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ಅರೆಬರೆ ಮುದ್ರಣಗೊಂಡಿರುವ ನೋಟುಗಳೇ ಹೆಚ್ಚು ಸಿಕ್ಕಿದ್ದು, ಮೂರು ತಿಂಗಳಿನಿಂದ ಸುಮಾರು 20 ಲಕ್ಷ ಖೋಟಾ ನೋಟು ಚಲಾವಣೆ ಮಾಡಿರುವುದಾಗಿ ಆರೋಪಿಗಳು ಹೇಳಿದ್ದಾಗಿ ಪೊಲೀಸರು ಹೇಳಿದ್ದಾರೆ.

ಜ್ಞಾನವಾಪಿ: ಲಿಂಗ ಇರುವೆಡೆ ಪೂಜೆಗಾಗಿ ಅನುಮತಿಗೆ ವಿಎಚ್‌ಪಿ ಆಗ್ರಹ

ಭೋಪಾಲ್, ಜ.27– ಜ್ಞಾನವಾಪಿ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ಕಂಡುಕೊಂಡಿರುವ ಅಂಶಗಳು ಅಲ್ಲಿ ದೇವಾಲಯ ಇತ್ತೆಂಬುದನ್ನು ಪುಷ್ಟೀಕರಿಸಿವೆ. ಆ ಪ್ರದೇಶದ ವಝುಖಾನಾದಲ್ಲಿ ಪತ್ತೆಯಾಗಿರುವ ಲಿಂಗಕ್ಕೆ ಸೇವಾ ಪೂಜೆ ನೆರವೇರಿಸಲು ಅನುಮತಿ ನೀಡಬೇಕು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಶನಿವಾರ ಆಗ್ರಹಿಸಿದೆ.


ಮಸೀದಿಯ ಆಡಳಿತ ನಿರ್ವಹಿಸುತ್ತಿರುವ ಇಂತೆಜಾಮಿಯಾ ಸಮಿತಿಯು ಮಸೀದಿಯನ್ನು ಗೌರವಯುತವಾಗಿ ಬೇರೆಡೆಗೆ ಸ್ಥಳಾಂತರಲು ಒಪ್ಪಿಗೆ ನೀಡಬೇಕು. ಜ್ಞಾನವ್ಯಾಪಿ ಮಸೀದಿ ಇರುವ ಸ್ಥಳವನ್ನು ಹಿಂದೂಗಳಿಗೆ ಹಸ್ತಾಂತರಿಸಬೇಕು ಎಂದು ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಜಗತ್ತೇ ಒಪ್ಪಿಕೊಳ್ಳಲಿದೆ: ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆಯಲ್ಲಿ ಎಎಸ್‌ಐ ಕಂಡುಕೊಂಡಿರುವ ಅಂಶಗಳನ್ನು ಇಡೀ ಜಗತ್ತೇ ಒಪ್ಪಿಕೊಳ್ಳಲಿದೆ ಎಂದು ಮಧ್ಯಪ್ರದೇಶ ಸಚಿವ ಪ್ರಹ್ಲಾದ್ ಪಟೇಲ್ ಹೇಳಿದ್ದಾರೆ.

ದೇವಾಲಯವನ್ನು ಧ್ವಂಸ ಮಾಡಿ, ಮಸೀದಿ ನಿರ್ಮಿಸಲಾಗಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್ ಹೇಳಿರುವುದನ್ನು ಉಲ್ಲೇಖಿಸಿ ಪಟೇಲ್ ಅವರು ಈ ಹೇಳಿಕೆ ನೀಡಿದ್ದಾರೆ.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 28-1-2024

ವೈಚಾರಿಕ ಪ್ರಜ್ಞೆಯ ನಾ.ಡಿಸೋಜರಿಗೆ 'ಪಂಪ ಪ್ರಶಸ್ತಿ'



'ನಾ.ಡಿಸೋಜ' ಎಂದರೆ ನಾಡು ಮೆಚ್ಚಿದ ಪ್ರಖ್ಯಾತ ಸಾಹಿತಿಯಷ್ಟೇ ಅಲ್ಲ. ಅಕ್ಷರಗಳಲ್ಲಿ ಸಾಹಿತ್ಯವನ್ನು ಮಾತ್ರ ನಿರ್ಮಿಸಿದವರಲ್ಲ. ಲೇಖನಿಯಿಂದ ಬರೀ ಪುಸ್ತಕಗಳ ಶಿಖರವನ್ನು ಕಟ್ಟಿದವರಲ್ಲ. ಅವರು ಪ್ರಖರವಾದ ವೈಚಾರಿಕ ಪ್ರಜ್ಞೆಯ ಚಿಂತಕ.ಸರ್ವ ಧರ್ಮ ಸಮಭಾವದ ಪ್ರತಿಪಾದಕ. ವಿಶ್ವ ಮಾನವತ್ವ ಮೇಳೈಸಿಕೊಂಡ ದಾರ್ಶನಿಕ.ಕ್ರೈಸ್ತ ದರ್ಶನವನ್ನು ತಿಳಿದಿರುವಷ್ಟೇ ಹಿಂದೂ ಮತ್ತು ಜೈನ ಹಾಗೂ ಇನ್ನಿತರೇ ಧರ್ಮ ದರ್ಶನಗಳನ್ನೂ ಅರಿತ ಅರಿವಿನ ಹರಿವಾಣ. ಎಡಪಂಥ-ಬಲ ಪಂಥಗಳೆನ್ನದೆ ಎಲ್ಲದರೊಳಗಿನ ಒಳಿತನ್ನು ತನ್ನೊಳಗಿರಿಸಿಕೊಂಡ ಒಳಿತನ ಹೂರಣ. ಎಡ-ಬಲಗಳೆಲ್ಲವನ್ನೂ ಮೀರಿದ ಸದ್ಭಾವನೆಯ ತೋರಣ.ಕಳೆದು ಹೋದ ಒಂದು ಕಾಲ ಮಾನದ ಸಾಕ್ಷಿ ಪ್ರಜ್ಞೆಯಾಗಿ ಹಲವು ಹತ್ತು ವಿಷಯಗಳಿಗೆ ಕನ್ನಡಿಯಾದ ಬಹುಮುಖಿ. ಪರಿಸರ ಪ್ರಜ್ಞೆಯ ಬೆಳಕು ಚೆಲ್ಲುವ ಸಾಮಾಜಿಕ ಕಳಕಳಿಯ ಸಮಾಜಮುಖಿ. ಅಪ್ರತಿಮ ಕನ್ನಡ ಪ್ರಜ್ಞೆಯ 'ಸಾಗರ'ದ ಸರ್ವಮುಖಿ. ಪರಿಸರ ಸಂರಕ್ಷಿಸುವ ಪರಿಸರ ಪರ ಹೋರಾಟಗಾರ. ಕನ್ನಡಕ್ಕಾಗಿ ಕೈಯೆತ್ತುವ, ಕೊರಳೆತ್ತುವ ಕನ್ನಡ ಚಳವಳಿಗಾರ. 'ಮುಳುಗಡೆ' ಸಂತ್ರಸ್ತರ ಪರ ಲೇಖನಿ ಹಿಡಿದು ಆಳುವ ಸರ್ಕಾರಕ್ಕೆ ಅರಿವಿನ ಹಣತೆ ಹಚ್ಚಿದ ಜನಪರ ಹೋರಾಟಗಾರ. ಇದೆಲ್ಲದರ ಒಟ್ಟು ಮೊತ್ತವೇ ನಾ. ಡಿಸೋಜ. ಇದೆಲ್ಲವನ್ನೂ ಅವರ ಬದುಕು-ಬರಹದಲ್ಲಿ ಅಕ್ಷರಶಃ ಕಾಣಬಹುದಾಗಿದೆ.


ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಡಿಸೋಜ ಅವರದು ಬದುಕು ಬೇರೆಯಲ್ಲ, ಬರಹ ಬೇರೆಯಲ್ಲ. ಎರಡೂ ಒಂದೇ. ಬರೆದಂತೆ ಬದುಕಿದವರು, ಬದುಕಿದಂತೆ ಬರೆದವರು. ನಡೆಯೊಂದು ನುಡಿಯೊಂದು ಇಲ್ಲವೇ ಇಲ್ಲ. ಬಾಲ್ಯದಿಂದಲೂ ಅಷ್ಟೇ, ಇಂಥ ಬದ್ಧತೆ ರಕ್ತಗತ.ಇವರು ಬಾಲ್ಯದಲ್ಲಿ ಶಾಲೆಗೆ ಹೋಗುತ್ತಿದ್ದಾಗ ಆ ಶಾಲೆಯಲ್ಲಿ ಬುಧವಾರ ಬಸವಣ್ಣನ ಬಗ್ಗೆ, ಗುರುವಾರ ಭಗವದ್ಗೀತೆ, ಶುಕ್ರವಾರ ಕುರಾನ್, ಶನಿವಾರ ಬೈಬಲ್ ಪಠಿಸಬೇಕಾಗಿತ್ತು. ಆಗೊಮ್ಮೆ ಚರ್ಚ್‌ನ ಪಾದ್ರಿಯೊಬ್ಬ ಬಾಲಕ ಡಿಸೋಜರನ್ನು ಕರೆದು, "ನೀನು ಕ್ರಿಶ್ಚಿಯನ್ ಹುಡುಗ ಕಣಪ್ಪಾ, ನಿನ್ನ ಸ್ಕೂಲಿನಲ್ಲಿ ಬೇರೆ ಧರ್ಮಗಳ ಬಗ್ಗೆ ಪ್ರಾರ್ಥನೆ ಮಾಡುವಾಗ ನೀನು ದೂರ ಹೋಗಿ ನಿಂತು ಬೈಬಲ್ ಮಾತ್ರ ಓದಬೇಕು" ಎಂದು ಬುದ್ಧಿ ಹೇಳಿದ್ದರಂತೆ. ಆಗ ಬಾಲಕ ಡಿಸೋಜ ಪಾದ್ರಿಗೆ ತಿರುಗಿ ಬಿದ್ದಿದ್ದರಂತೆ. ಅಷ್ಟೇ ಅಲ್ಲದೆ "ಕ್ರಿಸ್ತನ ಬಗ್ಗೆ ನನಗೆ ಗೌರವವಿದೆ. ಕ್ರೈಸ್ತ ಧರ್ಮದ ಬಗ್ಗೆಯೂ ನನಗೆ ಅಪಾರ ಭಕ್ತಿ ಇದೆ. ಆದರೆ ಇದೊಂದೇ ನಿಜವಾದ ಧರ್ಮವಲ್ಲ" ಅಂದಿದ್ದರಂತೆ. ಇದರ ಪರಿಣಾಮ ಆ ಪಾದ್ರಿ ಇದ್ದ ಚರ್ಚ್ ಇವರನ್ನು ಸಂಕೀರ್ತನೆಗಳಿಂದ ಹೊರಗಿಟ್ಟು ದಿವ್ಯ ಪ್ರಸಾದವನ್ನು ಕೊಡುವುದನ್ನು ನಿಲ್ಲಿಸಿತ್ತಂತೆ. ವಿದ್ಯಾರ್ಥಿ ದಿಶೆಯಲ್ಲೇ ಈ ರೀತಿಯ ವಿವೇಕ ಹೊಂದಿದ್ದ ಇಂಥ ಸರ್ವ ಧರ್ಮ ಸಮನ್ವಯಕಾರ ಡಿಸೋಜ ನಮ್ಮ ಕನ್ನಡದ ಸಾಹಿತಿ ಎಂಬುದೇ ಒಂದು ಹೆಮ್ಮೆ!.

ಏನೋ ಒಂದಿಷ್ಟು ಬರೆದು ಬಿಟ್ಟು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾ, ಮಂತ್ರಕ್ಕಿಂತ ಉಗುಳೇ ಜಾಸ್ತಿ ಎಂಬಂತೆ ಅಗ್ಗದ ಪ್ರಚಾರದ ಗದ್ದಲದಲ್ಲಿ, ಪ್ರಶಸ್ತಿ-ಪುರಸ್ಕಾರ, ಸ್ಥಾನ-ಮಾನಗಳ ಲಾಬಿಯಲ್ಲಿ ಮುಳುಗಿರುವವರೇ ಹೆಚ್ಚು ಮಂದಿ ನಮ್ಮ ಸಾರಸ್ವತ ಲೋಕದಲ್ಲಿ ಹಿಂದಿನಿಂದಲೂ ಇದ್ದಾರೆ. ಅಂತಹವರಿಗೆ ಅಕಾಡೆಮಿಕ್ ಹಿನ್ನೆಲೆ ಇದ್ದರಂತೂ ಮುಗಿದೇ ಹೋಯಿತು ಅವರ ತಲೆಗೆ ಕಾಲುಗಳು ಬಂದು ಬಿಟ್ಟಿರುತ್ತವೆ. ಇಂತಹ ವಾತಾವರಣದ ನಡುವೆ ನಾನ್ ಅಕಾಡೆಮಿಕ್ ಆಗಿದ್ದುಕೊಂಡು ದೂರದ ಒಳನಾಡಿನಲ್ಲಿ ಎಲ್ಲೋ ಒಂದು ಮೂಲೆಯಲ್ಲಿ 'ದ್ವೀಪ'ದಂತೆ ಕುಳಿತು ಸಮೃದ್ಧವಾದ ಸಾಹಿತ್ಯ ಕೃಷಿ ಮಾಡಿ ಮೌಲಿಕ ಕೃತಿಗಳ ಮಹಾ ಪರ್ವವನ್ನೇ ಸೃಷ್ಟಿಸಿದ ನಾ. ಡಿಸೋಜ ನಾಡು ಕಂಡ 'ಸಾಗರ'ದ ಮಹಾಚೇತನ. ಇವರ ಸಾಹಿತ್ಯ ಸಾಧನೆ ಯಾವ ಅಕಾಡೆಮಿಕ್ ಸಾಹಿತಿಗಳಿಗಿಂತ ಕಮ್ಮಿಯೇನಲ್ಲ. ಅಂತಂಥಾ ಅದ್ಭುತ ಸಾಹಿತ್ಯ ಕುಸುಮಗಳನ್ನು ತಮ್ಮ ಲೇಖನಿಯಿಂದ ಅರಳಿಸಿ ಕನ್ನಡಮ್ಮನ ಮುಡಿಯನ್ನು ಅಲಂಕರಿಸಿದ್ದಾರೆ.

ವಿಪರ್ಯಾಸವೆಂದರೆ ನಾಡಿನ ಉದ್ದಗಲಕ್ಕೂ ಓದುಗ ವಲಯವನ್ನು 'ಸಾಗರ' ದಂತೆ ಹೊಂದಿರುವ ಸತ್ವ ಮತ್ತು ಮಹತ್ವಗಳಲ್ಲಿ ಒಂದು ಕೈ ಮೇಲೇ ಇರುವ ಡಿಸೋಜ ಅವರ ಸಾಹಿತ್ಯಕ್ಕೆ ಅಕಾಡೆಮಿಕ್ ವಲಯದಲ್ಲಿ ಸಿಗಬೇಕಾದ ಪ್ರಾಮುಖ್ಯತೆ ಸಿಗಲೇ ಇಲ್ಲ. ಅಕಾಡೆಮಿಕ್ ಹಾಗೂ ನಾನ್ ಅಕಾಡೆಮಿಕ್ ತಾರತಮ್ಯತೆಯಿಂದಾಗಿ ಅಕಾಡೆಮಿಕ್ ವಲಯದ ಮಲತಾಯಿ ಧೋರಣೆಯ ದೃಷ್ಟಿದೋಷಕ್ಕೆ ಸಿಕ್ಕಿ ದಶ ದಿಕ್ಕುಗಳಲ್ಲೂ ಚರ್ಚೆಯಾಗಬೇಕಿದ್ದ ಡಿಸೋಜ ಅವರ ಸಾಹಿತ್ಯ ಆ ರೀತಿ ಆಗಲೇ ಇಲ್ಲ. ಆದರೆ ಇದಾವುದನ್ನೂ ಅಪೇಕ್ಷಿಸದೆ ಆನೆ ನಡೆದದ್ದೇ ಹಾದಿ ಎಂಬಂತೆ ಡಿಸೋಜ ಅವರು ತಮ್ಮ ಪಾಡಿಗೆ ತಾವು ನಿರ್ಲಿಪ್ತರಾಗಿ ಬರೆದೇ ಬರೆದರು. ಬರೆದು ಯಾರಿಗೂ ಜಗ್ಗದ, ಯಾವುದಕ್ಕೂ ಬಗ್ಗದ ಎಲ್ಲರಿಗೂ ಎಟುಕದ ಎತ್ತರ ಎತ್ತರಕ್ಕೆ ಬೆಳೆದರು. ಅಂಥ ಗಟ್ಟಿ ಸಾಹಿತ್ಯ ಅವರದ್ದಾಗಿತ್ತು. ಅಕಾಡೆಮಿಕ್ ಸಾಹಿತಿಗಳು ಮಾತ್ರ ವಿದ್ವಾಂಸರೆಂದು ಕೊಚ್ಚಿಕೊಳ್ಳುವ ಮಂದಿ ಬಾಯ್ಮೇಲೆ ಬೆರಳಿಟ್ಟು ಕೊಳ್ಳುವಂತೆ ವಿದ್ವತ್ ಪೂರ್ಣ ಸೃಜನಶೀಲ ಸಾಹಿತ್ಯ ಕೃತಿಗಳು ಡಿಸೋಜ ಅವರಿಂದ ವಿಸ್ಮಯದೋಪಾದಿಯಲ್ಲಿ ಬಂದಿದ್ದವು.

ಡಿಸೋಜ ಅವರು ಹೀಗೆ ಬರೆಯಲು, ಬೆಳೆಯಲು ಅವರೊಳಗಿನ ಮನುಷ್ಯ ಪ್ರೇಮ ಹಾಗೂ ಪರಿಸರ ಸಂದರ್ಭಗಳಿಗೆ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಹೃದಯವಂತಿಕೆಯೇ ಮೂಲಧಾತುವಾಗಿತ್ತು. ಸುತ್ತಮುತ್ತಲ ಪರಿಸರ, ಜೀವ, ಜೀವನ ಇವುಗಳೆಡೆಗಿನ ಆಪ್ತತೆ ಹಾಗೂ ಕಾಳಜಿಯೇ ಅವರ ಬರವಣಿಗೆಯ ಜೀವಾಳ. ಮಲೆನಾಡಿನ ಕಾಡು-ಕಣಿವೆ, ಬೆಟ್ಟ-ಗುಡ್ಡ, ತಿಟ್ಟು-ತೆಪ್ಪ, ಹಳ್ಳ-ಕೊಳ್ಳ, ಹೂವು-ಹಣ್ಣು, ಪ್ರಾಣಿ-ಪಕ್ಷಿ, ನದಿ-ನೆಲ, ಬುವಿ-ಬಾನು, ಬೇರು-ಬಳ್ಳಿ, ಒಕ್ಕಲು-ಮಕ್ಕಳು, ಜೀವಜಲ-ಜೀವಜಾಲ, ರುದ್ರತೆ-ಛಿದ್ರತೆ, ಮುಗ್ಧತೆ-ಮಾನವೀಯತೆ, ರೋಗ-ರುಜಿನ, ಕ್ರೌರ್ಯ-ಶೌರ್ಯ, ನಂಬಿಕೆ-ಸಂಕಟ, ಊರು-ಕೇರಿ, ಧಾರ್ಮಿಕತೆ-ಡಾಂಭಿಕತೆ, ಶೋಷಣೆ-ಮೌಢ್ಯಾಚರಣೆ, ಸಂಸ್ಕೃತಿ-ಸಂಕಟ, ಕುದಿ-ಬೇಗುದಿ, ಯೋಜನೆ-ಯಾಚನೆ, ಬೆಂಕಿ-ಬೆಳಕು, ಮುಳುಗಡೆ-ಮುದುಡಿದೆದೆ, ಸಂತ್ರಸ್ತ-ನಿರಾಶ್ರಿತ, ವೇದನೆ-ಯಾತನೆ..... ಇವುಗಳೆಲ್ಲಕೂ ಡಿಸೋಜ ಅವರು ಕಣ್ಣು, ಕಿವಿ, ಬಾಯಿ ಆದವರು. ಎಲ್ಲಕ್ಕಿಂತ ಮಿಗಿಲಾಗಿ ಹೃದಯವಾಗಿ ಮಿಡಿದವರು, ಮಲೆನಾಡೆಂಬೋ ಬೃಹತ್ ಕ್ಯಾನ್ವಾಸಿನಲ್ಲಿ ತಾನು ಕಂಡದ್ದನ್ನೆಲ್ಲಾ ಸೃಜನಾತ್ಮಕವಾಗಿ ಚಿತ್ರಿಸಿ ಕೃತಿಗಳನ್ನು ಕಟ್ಟಿ ಕೊಟ್ಟವರಿವರು, ಮಲೆನಾಡು, ಮುಳುಗಡೆ, ಮಕ್ಕಳು, ಇವರ ಸಾಹಿತ್ಯದ ಜೀವದ್ರವ್ಯ. ಅಂದ ಹಾಗೆ ನಾಡಿನಾದ್ಯಂತ ಹಾಗೂ ನಾಡಿನಾಚೆಗೂ ಖ್ಯಾತಿ ತಂದಿತ್ತ ಇವರ ಪ್ರಸಿದ್ಧ ಕಾದಂಬರಿ 'ಮುಳುಗಡೆ' ಡಿಸೋಜ ಅವರ ಸಮಗ್ರ ಸಾಹಿತ್ಯದ ರೂಪಕದಂತಿದೆ. ಹಾಗೆಯೇ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರಕ್ಕೆ ಭಾಜನವಾಗಿರುವ 'ಮುಳುಗಡೆಯ ಊರಿಗೆ ಬಂದವರು" ಕೃತಿಯಂತೂ ಮಕ್ಕಳಿಗಾಗಿ ಇವರು ಬರೆದ ವಿಭಿನ್ನ ಆಶಯದ್ದಾಗಿದ್ದು ಇವತ್ತಿನ ಶಾಲಾ ಮಕ್ಕಳಿಗೆ ಅತ್ಯಗತ್ಯವಾಗಿ ಪಠ್ಯವಾಗಬೇಕಿದೆ. ಮುಳುಗಡೆಯ ಜನರ ದುರಂತ ಬದುಕನ್ನು, ಸಂಕಷ್ಟದ ಪರಾಕಾಷ್ಠೆಯನ್ನು ಆ ಜನರ ಎದೆಯೊಳಗಿನ ವೇದನೆಯನ್ನು ಡಿಸೋಜ ಅವರಷ್ಟು ಸಹಜವಾಗಿ ಕಟ್ಟಿಕೊಟ್ಟ ಮತ್ತೊಬ್ಬ ಸಾಹಿತಿ ನಮ್ಮಲ್ಲಿಲ್ಲ!.

ಮಲೆನಾಡಿನ ಮಗ: ನಾಡಿಗೆ ಇಬ್ಬರು ರಾಷ್ಟ್ರಕವಿಗಳನ್ನು ಕೊಟ್ಟ ಹಾಗೂ ಎರಡು ಜ್ಞಾನ ಪೀಠ ಪ್ರಶಸ್ತಿಗಳನ್ನು ತಂದಿತ್ತ ಶಿವಮೊಗ್ಗ ಜಿಲ್ಲೆಯ ಮಲೆನಾಡು ಕುವೆಂಪು, ಜಿಎಸ್ಎಸ್, ಹಾಮಾನಾ, ಅನಂತಮೂರ್ತಿ, ತೇಜಸ್ವಿ, ಲಂಕೇಶ್ ಅವರಂಥ ಸಾಹಿತ್ಯ ದಿಗ್ಗಜಗಳಿಗೆ ಜನ್ಮ ನೀಡಿದ ಪುಣ್ಯ ಭೂಮಿ. ಇಂಥ ನೆಲದಿಂದ ಬಂದ ಮತ್ತೊಂದು ಸಾಹಿತ್ಯ ದಿಗ್ಗಜ ನಾ.ಡಿಸೋಜ. ಜಿಲ್ಲೆಯಿಂದ ಐದನೇ ಬಾರಿಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಹೆಗ್ಗಳಿಕೆ ಇವರದ್ದು. ಇವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಫಿಲಿಪ್ ಡಿಸೋಜ ಮತ್ತು ರೂಪೀನಾ ಡಿಸೋಜ ದಂಪತಿಯ ಸುಪುತ್ರರಾಗಿ 1937 ಜೂನ್ 6ರಂದು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಜನಿಸಿದರು. ಸಾಹಿತ್ಯ ಪ್ರಪಂಚದಲ್ಲಿ ನಾ.ಡಿಸೋಜ ಎಂದೇ ಚಿರಪರಿಚಿತರು. ಮಲೆನಾಡಿನ ಸೊಬಗಿನ ಸೌಂದರ್ಯ ಸಿರಿಯ 'ಸಾಗರ'ದ ಅಂಗಳದಲ್ಲೇ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಕಲಿತ ನಾ.ಡಿಸೋಜ ಅವರು ಇಂಟರ್ ಮೀಡಿಯೆಟ್‌ವರೆಗಿನ ಶಿಕ್ಷಣವನ್ನು ಶಿವಮೊಗ್ಗದ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ (ಇಂದಿನ ಸಹ್ಯಾದ್ರಿ ಕಾಲೇಜು) ಪೂರೈಸಿದರು. ಲೋಕೋಪಯೋಗಿ ಇಲಾಖೆಯಲ್ಲಿ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆ ಕೈ ಬೀಸಿ ಕರೆದಿತ್ತು. ಮೀನ-ಮೇಷ ಎಣಿಸದೆ 1959ರಲ್ಲಿ ಲೋಕೋಪಯೋಗಿ ಇಲಾಖೆ ಸೇರಿ ವೃತ್ತಿ ಆರಂಭಿಸಿದ ಡಿಸೋಜ ಅವರು ನಂತರದ ದಿನಗಳಲ್ಲಿ ಪ್ರಥಮ ದರ್ಜೆ ಗುಮಾಸ್ತರಾಗಿ ಶರಾವತಿ ಯೋಜನೆ (ಕಾರ್ಗಲ್), ಮಾಸ್ತಿಕಟ್ಟೆ, ತೀರ್ಥಹಳ್ಳಿ, ಸಾಗರ ಮತ್ತಿತರೆಡೆ ಸುಮಾರು ಮೂರೂವರೆ ದಶಕಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿ 1995ರಲ್ಲಿ ನಿವೃತ್ತಿ ಹೊಂದಿದರು.ಇಂಥ ವ್ಯಕ್ತಿ ಬದುಕಿನ ಜೊತೆ ಜೊತೆಯಲ್ಲೇ ಸಾಹಿತ್ಯ ಕೃಷಿಯನ್ನೂ ಒಂದು ವೃತ್ತಿ ಮಾಡಿಕೊಂಡು ವ್ರತದಂತೆ ಬರೆದುಕೊಂಡು ಬಂದವರು. ಡಿಸೋಜ ಅವರದು ಇವತ್ತು ಕನ್ನಡ ಸಾಹಿತ್ಯದಾಗಸದಲ್ಲಿ ಸೂರ್ಯ ಸದೃಶ ಹೆಸರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಇವರು ಸುಮಾರು ನೂರಕ್ಕೂ ಹೆಚ್ಚು ಕೃತಿಗಳ ಒಡೆಯರು.


“
ಡಿಸೋಜ ಅವರದು ಬದುಕು ಬೇರೆಯಲ್ಲ, ಬರಹ ಬೇರೆಯಲ್ಲ. ಎರಡೂ ಒಂದೇ. ಬರೆದಂತೆ ಬದುಕಿದವರು, ಬದುಕಿದಂತೆ ಬರೆದವರು. ನಡೆಯೊಂದು ನುಡಿಯೊಂದು ಇಲ್ಲವೇ ಇಲ್ಲ. ಬಾಲ್ಯದಿಂದಲೂ ಅಷ್ಟೇ, ಇಂಥ ಬದ್ಧತೆ ರಕ್ತಗತ.ಇವರು ಬಾಲ್ಯದಲ್ಲಿ ಶಾಲೆಗೆ ಹೋಗುತ್ತಿದ್ದಾಗ ಆ ಶಾಲೆಯಲ್ಲಿ ಬುಧವಾರ ಬಸವಣ್ಣನ ಬಗ್ಗೆ, ಗುರುವಾರ ಭಗವದ್ಗೀತೆ, ಶುಕ್ರವಾರ ಕುರಾನ್, ಶನಿವಾರ ಬೈಬಲ್ ಪಠಿಸಬೇಕಾಗಿತ್ತು. ಆಗೊಮ್ಮೆ ಚರ್ಚ್‌ನ ಪಾದ್ರಿಯೊಬ್ಬ ಬಾಲಕ ಡಿಸೋಜರನ್ನು ಕರೆದು, "ನೀನು ಕ್ರಿಶ್ಚಿಯನ್ ಹುಡುಗ ಕಣಪ್ಪಾ, ನಿನ್ನ ಸ್ಕೂಲಿನಲ್ಲಿ ಬೇರೆ ಧರ್ಮಗಳ ಬಗ್ಗೆ ಪ್ರಾರ್ಥನೆ ಮಾಡುವಾಗ ನೀನು ದೂರ ಹೋಗಿ ನಿಂತು ಬೈಬಲ್ ಮಾತ್ರ ಓದಬೇಕು" ಎಂದು ಬುದ್ಧಿ ಹೇಳಿದ್ದರಂತೆ. ಆಗ ಬಾಲಕ ಡಿಸೋಜ ಪಾದ್ರಿಗೆ ತಿರುಗಿ ಬಿದ್ದಿದ್ದರಂತೆ. ಅಷ್ಟೇ ಅಲ್ಲದೆ "ಕ್ರಿಸ್ತನ ಬಗ್ಗೆ ನನಗೆ ಗೌರವವಿದೆ. ಕ್ರೈಸ್ತ ಧರ್ಮದ ಬಗ್ಗೆಯೂ ನನಗೆ ಅಪಾರ ಭಕ್ತಿ ಇದೆ.ಆದರೆ ಇದೊಂದೇ ನಿಜವಾದ ಧರ್ಮವಲ್ಲ" ಅಂದಿದ್ದರಂತೆ.

ಮೊದಲ ಕಥೆ-ಮಾಧ್ಯಮಗಳ ನಂಟು: ಡಿಸೋಜ ಅವರು ಬಾಲ್ಯದಿಂದ ಬರೆಯುತ್ತಿದ್ದರೂ ಪ್ರಕಟಗೊಂಡ ಮೊದಲ ಕಥೆ 'ಸಾಹೇಬರು ಕಲಿಸಿದ ಪಾಠ' (1959), ಮೊದಲ ಕಾದಂಬರಿಯೆಂದರೆ 'ಬಂಜೆಬೆಂಕಿ' (1964), ಇದುವರೆಗೆ ಅವರು ಸುಮಾರು 75 ಕಾದಂಬರಿ, 6 ಚಾರಿತ್ರಿಕ ಕಾದಂಬರಿ, ಮಕ್ಕಳಿಗಾಗಿ 25 ಕಾದಂಬರಿ, 9 ಕಥಾ ಸಂಕಲನ, ಸಮಗ್ರ ಕಥೆಗಳ ಎರಡು ಸಂಪುಟಗಳು, 500ಕ್ಕೂ ಹೆಚ್ಚು ಕಥೆಗಳು, 10ಕ್ಕೂ ಹೆಚ್ಚು ನಾಟಕಗಳು, ಅಷ್ಟೇ ಸಂಖ್ಯೆಯ ರೇಡಿಯೋ ನಾಟಕಗಳು, ನಾಡಿನ ಪತ್ರಿಕೆಗಳಿಗೆ, ಇತರೇ ಪುರವಣಿ, ಸಂಚಿಕೆ, ಗ್ರಂಥಗಳಿಗೆ ಅಂತ ಸಾವಿರಾರು ಬಿಡಿ ಲೇಖನಗಳನ್ನು ಬರೆದಿದ್ದಾರೆ. 'ಪ್ರಂಪಂಚ' ಪತ್ರಿಕೆ ಮೂಲಕ ಮೊದಲಿಗೆ ಪತ್ರಿಕೆಯೊಂದಕ್ಕೆ ಬರೆಯಲು ಶುರುಮಾಡಿದ ಡಿಸೋಜ ಅಂದಿನಿಂದ ಇಂದಿನ ತನಕ ನಾಡಿನ ಬಹುತೇಕ ಎಲ್ಲಾ ಪತ್ರಿಕೆಗಳಿಗೂ ಬರೆದ, ಬರೆಯುತ್ತಿರುವ ವಿಶಿಷ್ಟ ಲೇಖಕರೆಂಬ ಹೆಗ್ಗಳಿಕೆ ಹೊಂದಿದವರು.


ಮಕ್ಕಳ ಚಿತ್ರಕಥೆ

ನಿಮಗೆ ಈ ಘಟನೆ ತಿಳಿದಿರುವ ಸಾಧ್ಯತೆ ಕಡಿಮೆ...!


-ಹೆಚ್.ಜಿ.ಎನ್.ಪ್ರಸಾದ್, ಮೊ:9845376199




"ವಿರಾಟ್ ಕೊಹ್ಲಿ"ಯವರ ಪರಿಚಯದ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ ಆದರೆ, ಬಹಳಷ್ಟು ಜನರಿಗೆ ಕೊಹ್ಲಿಯವರ ಜೀವನದಲ್ಲಿ ನಡೆದ ಈ ಘಟನೆ ತಿಳಿದಿರುವ ಸಾಧ್ಯತೆ ಕಡಿಮೆ. ವಿರಾಟ್ ಕೊಹ್ಲಿ ತಮ್ಮ 19ನೇ ವಯಸ್ಸಿನಲ್ಲಿ ದ್ದಾಗ, ಒಮ್ಮೆ ದೆಹಲಿ ಮತ್ತು ರೈಲ್ವೇಸ್ ತಂಡಗಳ ರಣಜಿ ಮ್ಯಾಚ್‌ಗೆ ಆಯ್ಕೆಯಾಗಿ ಆಡುತ್ತಿರುತ್ತಾರೆ. ಅಂದು ಎರಡನೇ ದಿನದ ಪಂದ್ಯ. ದಿನದ ಅಂತ್ಯಕ್ಕೆ 13 ರನ್ ಗಳಿಸಿ ನಾಟ್ ಔಟ್ ಆಗಿ ಉಳಿದು ಮನೆಗೆ ಹಿಂದಿರುಗಿರುತ್ತಾರೆ.




ಅಂದೇ ರಾತ್ರಿ ಸುಮಾರು 1-30 ಗಂಟೆಗೆ ಕೊಹ್ಲಿಯವರ ತಂದೆಯಾದ ಪ್ರೇಮ್ ಅವರಿಗೆ ತೀವ್ರ ಹೃದಯಾಘಾತವಾಗಿಬಿಡುತ್ತದೆ. ಮನೆಯಲ್ಲಿ ಕೊಹ್ಲಿಯವರ ತಾಯಿ-ಅಕ್ಕ ಸೇರಿದಂತೆ ಮೂವರು ಮಾತ್ರ ಇರುತ್ತಾರೆ. ಆ ತಡ ರಾತ್ರಿಯಲ್ಲಿ ಕಷ್ಟಪಟ್ಟು ಹಾಗೂ-ಹೀಗೂ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ. ಆದರೆ, ಸುಮಾರು 3-30 ಗಂಟೆಗೆ ಅವರ ತಂದೆ ನಿಧನರಾಗುತ್ತಾರೆ. ಕೊಹ್ಲಿಯವರ ತಂದೆಗೆ ತನ್ನ ಮಗ, ಕ್ರಿಕೆಟ್ ಲೋಕದಲ್ಲಿ ಹೆಸರಾಂತ ಆಟಗಾರನಾಗಬೇಕೆಂಬ ಮಹತ್ತರ ಬಯಕೆ ಇಟ್ಟುಕೊಂಡು ಸಂಪೂರ್ಣ ಪ್ರೋತ್ಸಾಹ ನೀಡುತ್ತಿರುತ್ತಾರೆ.




ಪರಿಸ್ಥಿತಿ ಹೀಗಿದ್ದರೂ ತಂದೆಯ ಆಸೆಯಂತೆ ತನ್ನ ಮಗ, ಜೀವನವನ್ನೇ ಕ್ರಿಕೆಟ್‌ಗಾಗಿ ಮುಡಿಪಿಟ್ಟಿದ್ದನ್ನ ಕಂಡು ಸದಾಕಾಲ ಬೆಂಬಲಿಸುತ್ತಿದ್ದ ಕೊಹ್ಲಿಯವರ ತಾಯಿ,"ನೋಡು, ಇಂದು ನಿನ್ನ ತಂದೆ ಇಹಲೋಕ ತ್ಯಜಿಸಿಯಾಗಿದೆ ನೀನು ಸಂಪೂರ್ಣ ದಿನ ನಮ್ಮೊಂದಿಗೆ ಇಲ್ಲೇ ಇದ್ದು, ಅಂತಿಮ ಕಾರ್ಯ ಮಾಡಬಹುದು ಅಥವಾ ನೀನು ಇಂದಿನ ದಿನದ ಕ್ರಿಕೆಟ್ ಪೂರೈಸಿಕೊಂಡು ಮನೆಗೆ ಬರಬಹುದು, ಆಯ್ಕೆ ನಿನ್ನದು" ಎಂದು ಕಣ್ಣೀರಿಡುತ್ತಾ ಹೇಳುತ್ತಾರೆ. ಅದಕ್ಕೆ ವಿರಾಟ್ ಕೊಹ್ಲಿಯವರು "ದಯವಿಟ್ಟು ನನಗೆ 10 ನಿಮಿಷ ಸಮಯ ಕೊಡಿ, ಯೋಚನೆ ಮಾಡಿ ತಿಳಿಸುತ್ತೇನೆ" ಎಂದು ಕೇಳಿಕೊಳ್ಳುತ್ತಾರೆ.



ಸ್ವಲ್ಪ ಸಮಯ ದುಃಖಿತಪ್ತರಾಗಿ ಚಿಂತಿಸುತ್ತಾ ಕುಳಿತ ಕೊಹ್ಲಿ ಕಡೆಗೆ, ತಮ್ಮ ತಾಯಿಯವರ ಬಳಿ ತೆರಳಿ, "ಅಂತಿಮ ಕ್ರಿಯೆಯು ಹೇಗೂ ನೆರವೇರುವುದು ಸಾಯಂಕಾಲದ ಸಮಯಕ್ಕೆ.. ನಾನು ಹೋಗಿ ಕ್ರಿಕೆಟ್ ಮುಗಿಸಿಕೊಂಡು ಬೇಗ ಬಂದುಬಿಡುತ್ತೇನೆ...!" ಎಂದು ಹೇಳಿ ಹೊರಟೇ ಬಿಡುತ್ತಾರೆ. ಸ್ಟೇಡಿಯಂ ತಲುಪಿದಾಗ ಅವರ ತರಬೇತುದಾರರು ಹಾಗೂ ಸಹವರ್ತಿಗಳಿಗೆ ವಿಷಯ ಅದಾಗಲೇ ತಿಳಿದಿದ್ದುದರಿಂದ ಅವರೆಲ್ಲರೂ ಒಟ್ಟಾಗಿ ಬಂದು "ನೀವು ಇಂದು ಆಡುವುದು ಬೇಡ, ನೀವು ಮನೆಗೆ ತೆರಳಿ ಅಂತಿಮ ಕಾರ್ಯದ ವ್ಯವಸ್ಥೆ ನೋಡಿಕೊಳ್ಳಿ, ನಮಗೆ ಏನೂ ತೊಂದರೆಯಾಗುವುದಿಲ್ಲ, ನಿಮಗೆ ಔಟ್ ಡಿಕ್ಲೇರ್ ಮಾಡುತ್ತಾರೆ ಅಷ್ಟೆ...! ಎನ್ನುತ್ತಾರೆ.



ಅದಕ್ಕೆ ಕೊಹ್ಲಿಯವರು. "ನಾನು ವಾಪಸ್ ಮನೆಗೆ ಹೋಗಿ ನಮ್ಮ ತಂದೆಯ ಮೃತ ಶರೀರದ ಜೊತೆಗೆ ಕುಳಿತ್ತಿದ್ದರೆ ಅವರ ಕಳೆದು ಹೋದ ಜೀವ ಮರಳಿ ಬರುವುದಿಲ್ಲ. ಆದರೆ ಈ ದಿನ ಆಟವನ್ನಾಡಿ ಅಕಸ್ಮಾತ್ ಒಂದು "ಸೆಂಚುರಿ" ಹೊಡೆದು ಬಿಟ್ಟರೆ ನಮ್ಮ ತಂದೆಯ ಆತ್ಮಕ್ಕೆ ಶಾಂತಿ ಸಿಗಬಹುದು. ಜೊತೆಗೆ ನನ್ನ ಜೀವನವನ್ನೇ ಕ್ರಿಕೆಟ್‌ಗಾಗಿ ಮುಡಿಪಿಟ್ಟಿದ್ದೇನೆ. ನನಗೆ ಕ್ರಿಕೆಟ್ ಅಲ್ಲದೇ ಬೇರೇನೂ ಬೇಕಿಲ್ಲ. ನನ್ನ ಉದ್ದೇಶವೇ ಕ್ರಿಕೆಟ್ ಜಗತ್ತಿನಲ್ಲಿ ಹೆಸರಾಂತ ಆಟಗಾರ ನಾಗಬೇಕೆಂಬುವುದು ಮಾತ್ರ" ಎಂದು ಹೇಳುತ್ತಾ ಬ್ಯಾಟ್ ಹಿಡಿದು ಸಿದ್ಧವಾಗಿಯೇ ಬಿಡುತ್ತಾರೆ.ಆ ದಿನ ಸೆಂಚುರಿ ಮಾಡಲಾಗಲಿಲ್ಲ. ಆದರೇನಂತೆ, ಕೊಹ್ಲಿಯವರು 87 ರನ್‌ಗಳಿಸಿ ಭರ್ಜರಿ ಆಟ ಆಡಿದರು.



ಅಂದು ಮಾಜಿ ಕೇಂದ್ರ ಸಚಿವ "ದಿ.ಅರುಣ್‌ಜೇಟ್ಲಿ"ದೆಹಲಿ ಕ್ರಿಕೆಟ್ ಬೋರ್ಡ್ ಅಸೋಸಿಯೆಷನ್‌ನ ಚೇರ್‌ಮೆನ್ ಆಗಿದ್ದರು. ಅವರು, ಕೇವಲ 19 ವರ್ಷದ ಹುಡುಗನೊಬ್ಬ ಈ ರೀತಿ ಮನೋಭಾವ ಹೊಂದಿದ್ದಾನೆ ಎಂಬ ವಿಷಯ ತಿಳಿಯುತ್ತಿದ್ದಂತೆ ಅವನನ್ನು ನೋಡಲೇಬೇಕು ಎಂದು ನಿರ್ಧರಿಸಿ, ಕ್ರೀಡಾಂಗಣಕ್ಕೆ ಬಂದುಬಿಟ್ಟಿದ್ದರು. ಅಂದು ಕೊಹ್ಲಿಯವರು ಔಟ್ ಆಗುತ್ತಿದ್ದಂತೆ ಇನ್ನಿತರ ಗಣ್ಯರೊಡಗೂಡಿ ಕೊಹ್ಲಿಯವರನ್ನೂ ಜೊತೆಯಲ್ಲೇ ಮನೆಗೆ ಕರೆಸಿಕೊಂಡು ಸಂತಾಪ ಸೂಚಿಸಿದ್ದರು. ಇನ್ನು ಬಾಕಿ ಉಳಿದಿದ್ದು ಇತಿಹಾಸ. ಇಂದಿನ ದಿನಗಳಲ್ಲಿ ಪ್ರಪಂಚದ ಅತ್ಯುತ್ತಮ ಕ್ರಿಕೆಟ್ ಆಟಗಾರರಾಗಿ ಹೊರಹೊಮ್ಮಿದ್ದಾರೆ. ಜೊತೆಗೆ ನೂರಾರು ಕೋಟಿಗಳಷ್ಟು ಹಣವನ್ನೂ ಗಳಿಸುತ್ತಿದ್ದಾರೆ.

ನೀತಿ: ಸ್ನೇಹಿತರೇ... ಈ ಘಟನೆಯಿಂದ, ಕೇವಲ ಕ್ರಿಕೆಟ್ ಆಟವನ್ನು ಆಡಿದರೆ ಮಾತ್ರ ಯಶಸ್ಸು,ಕೀರ್ತಿ,ಹಣ ಲಭಿಸುತ್ತದೆ ಎಂದು ತಪ್ಪಾಗಿ ಭಾವಿಸಬಾರದು. ಇಂತಹ ಕೆಲವರ ಬಗ್ಗೆ ವಿಷಯ ತಿಳಿದುಕೊಂಡಾಗ ನಿಜವಾಗಿಯೂ ನಮ್ಮ ಜೀವನದಲ್ಲೂ ಒಂದಿಷ್ಟು ಸ್ಫೂರ್ತಿ ಬರುತ್ತದೆ. ನಿಮ್ಮ ಜೀವನದಲ್ಲಿ ಆಯ್ದುಕೊಂಡ ಸ್ವಪ್ನಗುರಿ ಯಾವುದಾದರೂ ಸರಿ, ಅದನ್ನು ತಲುಪಲು ಎಂತಹ ಕಠಿಣ ಪರಿಸ್ಥಿತಿ ಬಂದರೂ ದಿಟ್ಟ ಮನಸ್ಸಿನಿಂದ ಎದುರಿಸಿ, ಸತತ ಪ್ರಯತ್ನಿಸುತ್ತಿರಬೇಕು.



ವಾರಭವಿಷ್ಯ

28.1.2024 ರಿಂದ 3.3.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಚಂದ್ರ-ಸಿಂಹ, ಕನ್ಯಾ, ತುಲಾ, ಕುಜ-ಧನುಸ್ಸು, ಬುಧ-ಧನುಸ್ಸು, ಮಕರ, ಗುರು-ಮೇಷ, ಶುಕ್ರ-ಧನುಸ್ಸು, ಶನಿ-ಕುಂಭ, ರಾಹು-ಮೀನ, ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಪ್ತಾಹದ ಆದಿಗೆ ಹಣಕಾಸಿನ ನಿರ್ವಹಣೆಯಲ್ಲಿ ಎಚ್ಚರಿಕೆಯ ನಡೆ ಇರಲಿ. ನಂಬಿಸಿ ಮೋಸ ಮಾಡುವವರಿಂದ ಎಚ್ಚರವಾಗಿರಿ. ಹಿರಿಯರನ್ನು ಗೌರವಿಸಿ ಅವರ ಅಭಿಪ್ರಾಯಗಳಿಗೂ ಬೆಲೆ ನೀಡಿದರೆ ಒಳಿತಾಗುವುದು. ಕೆಲವೊಂದು ಯೋಜನೆಗಳು ಗುರುಬಲದ ಕೊರತೆಯಿಂದ ಅರ್ಧಕ್ಕೇ ನಿಲ್ಲಬಹುದು. ಅತಿಯಾದ ನಿಷ್ಪ್ರಯೋಜಕ ಓಡಾಟಗಳಿಂದ ದೇಹ ಬಳಲುವುದು.

ಶ್ರೀ ಸಂಕಷ್ಟ ಗಣಪತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೆಣಗಾಡುವಿರಿ. ಎಲ್ಲರೊಂದಿಗೆ ಆತ್ಮೀಯತೆಯಿಂದ ಇರಲು ಪ್ರಯತ್ನಿಸಿ. ಉನ್ನತ ಅಧಿಕಾರಿಗಳೊಂದಿಗೆ ವ್ಯವಹರಿಸುವಾಗ ಗೌರವ ನೀಡಿ. ವಾರ ಮಧ್ಯೆ ಹಣ ಸಂಪಾದನೆಯ ಹೊಸ ಮಾರ್ಗ ತೆರೆದುಕೊಳ್ಳುವುದು. ಮನೋರಂಜನಾ ಖರ್ಚುಗಳು ಹೆಚ್ಚಾಗುವುದು. ಮಕ್ಕಳು ತಪ್ಪುದಾರಿಯಲ್ಲಿ ನಡೆಯುವುದರಿಂದ ಮನಸ್ಸಿಗೆ ಬೇಸರ.

ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ-8



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ವಾರ ದೂರ ಪ್ರಯಾಣದ ಯೋಗ ಕೂಡಿ ಬರಬಹುದು. ಭೋಗ ವಿಲಾಸಗಳಲ್ಲಿ ವಾರ ಕಳೆಯುವುದು. ಶತ್ರುಗಳು ಮಿತ್ರತ್ವ ಬಯಸಿ ಬರುವರು. ಕೋರ್ಟು ವ್ಯವಹಾರದಲ್ಲಿ ಜಯಶೀಲತೆ. ಗುರುಪ್ರೇರಣೆಯಿಂದ ಅಧ್ಯಾತ್ಮ ವಿಷಯಗಳಲ್ಲಿ ಆಸಕ್ತಿ. ಪ್ರೇಮ ಪ್ರಕರಣಗಳು ಸುಖಾಂತ್ಯವಾಗುವುದು. ನಿಮ್ಮ ಆಕಾಂಕ್ಷೆಗಳು ಈಡೇರುವುದು. ವಾಯು ಸಂಬಂಧಿ ಕಾಯಿಲೆ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-3.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಆರಂಭಕ್ಕೆ ಕೈ ಹಾಕಿದ ಕೆಲಸಗಳಲ್ಲಿ ಸಫಲತೆ. ಹಣಕಾಸಿನ ಅನುಕೂಲತೆ, ಮನೋ ಇಚ್ಛಿತ ವಸ್ತುವನ್ನು ಕೊಳ್ಳುವಿರಿ. ಎಲ್ಲವನ್ನೂ ಎಲ್ಲರ ಮುಂದೆ ಹೇಳಿಕೊಳ್ಳಬೇಡಿ. ಮಾತಿನಲ್ಲಿ ಹಿಡಿತವಿರಲಿ. ಅನ್ಯಥಾ ತೊಂದರೆ ಅನುಭವಿಸಬೇಕಾದೀತು. ವಿದ್ಯಾರ್ಥಿಗಳಿಗೆ ಪಾಠ ಪ್ರವಚನದಲ್ಲಿ ಆಸಕ್ತಿ ಇರದು. ಅಷ್ಟಮ ಶನಿದೇವನಿಂದ ಆರೋಗ್ಯಕ್ಕೆ ಕುಂದು, ಮಂಡಿ ನೋವು.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-5.



ಸಿಂಹ (ಮ.ಮಿ.ಮು.ಮೆ.ಮೆ.ಟ.ಟಿ.ಟು.ಟೆ)

ಶ್ರೀ ಗುರು ಸುಸ್ಥಾನದಲ್ಲಿದ್ದಾರೆ. ಕೌಟುಂಬಿಕ ಜೀವನದಲ್ಲಿ ಎದುರಾಗುವ ಎಡರು ತೊಡರುಗಳು ಬೃಹಸ್ಪತಿಯ ಕಟಾಕ್ಷದಿಂದ ನಿವಾರಣೆಯಾಗುವುದು. ನಿಮ್ಮ ಮನೋಭಿಲಾಷೆಗಳು ಪೂರ್ಣಗೊಳ್ಳುವುದು. ಮನೆಯಲ್ಲಿ ಶುಭ ಕಾರ್ಯಗಳು ನಡೆಯುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಸಾಧನೆಯ ಗರಿಮೆ. ಪ್ರೇಮ ಪ್ರಸಂಗಗಳಲ್ಲಿ ಕಡೆಯ ನಗು ನಿಮ್ಮದೆ. ಜಠರ ಸಂಬಂಧಿ ಕಾಯಿಲೆ ಕಾಡಬಹುದು.


ಶ್ರೀ ವಿಷ್ಣು ಅರ್ಚನೆ. ಶುಭ ಸಂಖ್ಯೆ-9.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಹಣಕಾಸಿನ ಪರಿಸ್ಥಿತಿ ಉತಮವಾಗಿದ್ದರೂ ಮಿತಿ ಮೀರಿದ ಖರ್ಚುಗಳು. ವಾರದ ಆದಿಗೆ ಆರೋಗ್ಯವೂ ಅಷ್ಟಕ್ಕಷ್ಟೇ, ಸಣ್ಣ ಪುಟ್ಟ ಕಾಯಿಲೆ, ವೈದ್ಯರ ಭೇಟಿ. ಜನ್ಮ ಕೇತು ಇರುವ ಕಾರಣ ವಿಷಾಹಾರ ಸೇವನೆಯಿಂದ ಸಂಕಷ್ಟಕ್ಕೆ ಗುರಿಯಾಗುವ ಸಂಭವ. ಆಹಾರದಲ್ಲಿ ಪಥ್ಯವಿರಲಿ. ಮನೆಯವರಿಂದ ಬಯಸಿದ ಸಹಾಯ ದೊರೆಯದೆ ಖಿನ್ನತೆಗೆ ಒಳಗಾಗುವಿರಿ.

ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

'ಯದ್ಭಾವಂ ತದ್ಭವತಿ' ಸೂಕ್ತಿಯಂತೆ ಮನದಲ್ಲಿ ಅಂದುಕೊಂಡಂತೆ, ಕಠಿಣ ಪರಿಶ್ರಮಗಳಾದ ನಿಮಗೆ ಮಹತ್ವಾಕಾಂಕ್ಷೆಯ ಕೆಲಸಗಳು ಯಶಸ್ವಿಯಾಗುವುವು. ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು ವಿವಾಹಾಕಾಂಕ್ಷಿಗಳಿಗೆ ಸೂಕ್ತ ಸಂಬಂಧಗಳು ಕೂಡಿ ಬರುವುದು. ಸತಿ-ಪತಿಯರಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ನಿವಾರಣೆ ಆಗುವುದು.

ಶ್ರೀ ದೇವೀ ಸ್ತುತಿ. ಶುಭ ಸಂಖ್ಯೆ-7.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ವಾರದ ಆದಿಗೆ ಪ್ರತಿಫಲವಿಲ್ಲದ ತಿರುಗಾಟಗಳು ಅಧಿಕವಾದ ಖರ್ಚು-ವೆಚ್ಚಗಳು. ಸಾಲ ಕೊಡುವುದಿದ್ದರೆ ಎಚ್ಚರವಿರಿ. ನಂಬಿಸಿ ಮೋಸ ಮಾಡುವವರಿದ್ದಾರೆ. ಸತಿ-ಪತಿಯರು ಪರಸ್ಪರ ಸೋತು ನಡೆದರೆ ಬಾಳು ಸುಖಮಯ. ವಾರದ ಕಡೆಗೆ ಗೆಳೆಯರ ಒಡನಾಟ. ವ್ಯಾಪಾರಿಗಳಿಗೆ ಉತ್ತಮ ಲಾಭ, ಆರ್ಥಿಕ ಸ್ಥಿತಿ ಉತ್ತಮವಾಗಿರುವುದು. ಧಾರ್ಮಿಕ ಕಾರ್ಯಗಳಲ್ಲಿ ಭಾಗಿ ಆಗುವಿರಿ.

ಶ್ರೀ ವಿನಾಯಕ ದರ್ಶನ. ಶುಭ ಸಂಖ್ಯೆ-6



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಎಲ್ಲರೊಟ್ಟಿಗೆ ಆತ್ಮೀಯ ಸಂಬಂಧವನ್ನು ಹೊಂದುವಿರಿ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ಯೋಗ - ಜಪಧ್ಯಾನದಲ್ಲಿ ಆಸಕ್ತಿ ಮೂಡುವುದು. ಜೀವನದಲ್ಲಿ ಎದುರಾಗುವ ಎಡರು ತೊಡರುಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವಿರಿ. ಇದಕ್ಕೆ ಗುರು ಹಿರಿಯರ ಸಹಾಯ ಸಹಕಾರಗಳು ದೊರೆಯುವುದು. ಜೂಜು, ನಶಾ ಪದಾರ್ಥಗಳಿಂದ ದೂರಿವಿರಿ.

ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸ್ತ್ರೀಯರಿಗೆ ಶಾಪಿಂಗ್ ತಿರುಗಾಟ, ದುಬಾರಿ ವಸ್ತುಗಳ ಖರೀದಿಯೊಂದಿಗೆ ವಾರಕ್ಕೆ ಸ್ವಾಗತ. ಪೂಜೆ ಪುನಸ್ಕಾರಗಳಲ್ಲಿ ಭಾಗವಹಿಸುವಿರಿ. ಚಂದ್ರಗ್ರಹದ ಕಟಾಕ್ಷದಿಂದ ಎದುರಾಗುವ ಕಿರಿಕಿರಿಗಳು ತಾನಾಗಿಯೇ ನಿವಾರಣೆ ಆಗುವುದು. ಕೃಷಿ ಕರ್ಮಗಳಿಂದ ಧನಲಾಭ. ಕಪ್ಪು ಧಾನ್ಯ ಫಸಲು ಚೆನ್ನಾಗಿ ಬರುವುದು. ಇಂಜಿನಿಯರ್‌ಗಳಿಗೆ ದೊಡ್ಡ ಪ್ರಾಜೆಕ್ಟ್‌ಗಳು ದೊರೆಯಲಿದೆ. ವಾಹನ ಸಂಚಾರದಲ್ಲಿ ಎಚ್ಚರವಾಗಿರಿ.

ಶ್ರೀ ಶನಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮ್ಮ ಆಲೋಚನೆ, ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿಲ್ಲ ಎಂಬ ಬೇಸರವಿದೆ. ನಿಮ್ಮ ಸ್ವಂತ ಪರಿಶ್ರಮದಿಂದ ಆದಾಯದ ಹೊಸ ಮಾರ್ಗಗಳು ಉಂಟಾಗುತ್ತವೆ. ವೃತ್ತಿಪರ ವ್ಯವಹಾರಗಳಲ್ಲಿ ಪಾಲುಗಾರರೊಂದಿಗೆ ಸಾಮರಸ್ಯದ ಕೊರತೆ. ಮಿತ್ರರೊಂದಿಗೆ ಸಣ್ಣ ಪುಟ್ಟ ವಿವಾದಗಳು ಉಂಟಾಗಬಹುದು. ಸರ್ಕಾರಿ ಉದ್ಯೋಗಿಗಳಿಗೆ ಮೇಲಧಿಕಾರಿಗಳ ಕಿರುಕುಳ ಜಾಸ್ತಿ ಇರುತ್ತದೆ.

ಶ್ರೀ ಮಾರುತಿ ಉಪಾಸನೆ. ಶುಭ ಸಂಖ್ಯೆ-4.



ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)

ಗುರು ಹಿರಿಯರ ಆಶೀರ್ವಾದದಿಂದ ನಿಮ್ಮ ಮನೋಕಾಮನೆಗಳು ಈಡೇರುವುದು. ಪ್ರೇಮಿಗಳಿಗೆ ಇದು ಶುಭವಾರ. ಸುವರ್ಣ ರಜತ ವ್ಯಾಪಾರಿಗಳಿಗೆ ಅಧಿಕ ಲಾಭ ದೊರೆಯುವುದು. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುದು. ಪೂಜೆ, ಪುನಸ್ಕಾರಗಳಲ್ಲಿ ಭಾಗವಹಿಸುವುದರಿಂದ ಧನ್ಯತಾಭಾವ. ಅರ್ಧಕ್ಕೆ ನಿಂತಿದ್ದ ಕೆಲಸಗಳು ಪೂರ್ಣಗೊಳ್ಳುವುದು. ಸ್ನಾಯು, ಕರುಳು ಸಂಬಂಧಿ ರೋಗ ಕಾಡಬಹುದು.

ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ-7.

ಮೂಗೂರಲ್ಲಿ ಅತಿಥಿಗೃಹ ನಿರ್ಮಾಣಕ್ಕೆ ಭೂಮಿ ಪೂಜೆ

ಬಾಕಿ ಅಭಿವೃದ್ಧಿ ಕಾಮಗಾರಿ ಶೀಘ್ರ ಪೂರ್ಣ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ


ತಿ.ನರಸೀಪುರ ತಾಲೂಕಿನ ಮೂಗೂರಲ್ಲಿ ಲೋಕೋಪಯೋಗಿ ಇಲಾಖೆ ಅತಿಥಿ ಗೃಹ ನಿರ್ಮಾಣಕ್ಕೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೂಮಿ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಜ.27– ಧಾರ್ಮಿಕ ಹಿನ್ನೆಲೆ ಹೊಂದಿರುವ ಮೂಗೂರನ್ನು ಪ್ರಮುಖ ಯಾತ್ರಾ ಸ್ಥಳವಾಗಿ ಅಭಿವೃದ್ಧಿಗೊಳಿಸಲು ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಮೂಗೂರು ಗ್ರಾಮದಲ್ಲಿ ಶನಿವಾರ ರಾಷ್ಟ್ರೀಯ ಹೆದ್ದಾರಿ ಬಳಿ 7.50 ಕೋಟಿ ವೆಚ್ಚದ ಲೋಕೋಪಯೋಗಿ ಇಲಾಖೆ ಅತಿಥಿ ಗೃಹ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿ ಕಟ್ಟಡದ ನೀಲನಕ್ಷೆ ಪರಿಶೀಲಿಸಿ ಮಾತನಾಡಿದ ಅವರು, ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯ ಪುನರ್ ನಿರ್ಮಾಣ, ಕಲ್ಯಾಣಿ ಕೊಳ ಅಭಿವೃದ್ಧಿ ಸೇರಿದಂತೆ ಹಲವು ಶಾಶ್ವತ ಅಭಿವೃದ್ಧಿ ಕೆಲಸಗಳು ಈಗಾಗಲೇ ಆಗಿದ್ದು, ತಾಂತ್ರಿಕ ಕಾರಣಗಳಿಂದ ನೆನಗುದಿಗೆ ಬಿದ್ದಿದ್ದ ಅತಿಥಿ ಗೃಹ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಹೆದ್ದಾರಿ ಬಳಿ ನಿರ್ಮಾಣವಾಗುವ ಸರ್ಕಾರಿ ಅತಿಥಿ ಗೃಹ ವಿನ್ಯಾಸಕ್ಕೆ ತಕ್ಕಂತೆ ಗುಣಮಟ್ಟವಿರಬೇಕು. ರಸ್ತೆ ಮಟ್ಟಕ್ಕೆ ಎತ್ತರ ವಿರಲಿ. ಗ್ರಾಮದಲ್ಲಿ ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಲು ಅಧಿಕಾರಿಗಳು ಯೋಜನಾ ವರದಿ ಸಲ್ಲಿಸಬೇಕು. ತಹಸೀಲ್ದಾರ್ ಹಾಗೂ ತಾಪಂ ಇಓ ಚುರುಕಿನಿಂದ ಓಡಾಡಬೇಕು. ಪೊಲೀಸ್ ಇನ್ಸ್‌ಪೆಕ್ಟರ್ ಈಗಿನ ದಕ್ಷತೆ ಕಾಯ್ದುಕೊಳ್ಳಬೇಕು. ತಾಲೂಕು ಮಟ್ಟದ ಅಧಿಕಾರಿಗಳು ಕೆಲಸ ಕಾರ್ಯಕ್ಕೆ ಅರ್ಜಿ ಹಿಡಿದು ಬರುವ ಸಾರ್ವಜನಿಕರ ಕೆಲಸ ಮಾಡಿಕೊಡಬೇಕು. ಬಡವರಿಗೆ ಸಹಾಯ ಮಾಡಬೇಕು ಎಂದು ತಾಕೀತು ಮಾಡಿದರು.

ಇದೇ ವೇಳೆ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಸಚಿವರು ಚಾಲನೆ ನೀಡಿದರು. ನಂತರ ಹಲವು ಮುಖಂಡರ ನಿವಾಸಕ್ಕೆ ತೆರಳಿ, ಹಬ್ಬದ ಸಂಭ್ರಮದಲ್ಲಿ ಭಾಗಿಯಾದರು. ಆದಿಬೆಟ್ಟಹಳ್ಳಿ ಮಾರ್ಗವಾಗಿ ವಾಟಾಳು ಗ್ರಾಮಕ್ಕೆ ತೆರಳುತ್ತಿದ್ದ ಸಚಿವರನ್ನು ರಸ್ತೆಯುದ್ದಕ್ಕೂ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಹಾರ ತುರಾಯಿ ಹಾಕಿ ಸ್ವಾಗತಿಸಿದರು. ಈ ವೇಳೆ ಗ್ರಾಮದ ಸಮಸ್ಯೆಗಳ ಬಗ್ಗೆಯೂ ಗ್ರಾಮಸ್ಥರು ಪ್ರಸ್ತಾಪಿಸಿದರು. ಅಹವಾಲು ಆಲಿಸಿದ ಮಹದೇವಪ್ಪ ಅವರು ಸಮಸ್ಯೆಗಳತ್ತ ಗಮನ ಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಕೆಡಿಪಿ ಸದಸ್ಯ ಸುನೀಲ್ ಬೋಸ್, ಮಾರಾಟ ಸಹಕಾರ ಮಹಾ ಮಂಡಳದ ನಿರ್ದೇಶಕ ವೈ.ಎನ್.ಶಂಕರೇಗೌಡ, ಶ್ರೀನಂಜುಂಡೇಶ್ವರ ಧರ್ಮದರ್ಶಿ ಸಮಿತಿ ಮಾಜಿ ಅಧ್ಯಕ್ಷ ಇಂಧನ ಬಾಬು, ಗಿರೀಶ್, ಮೈಮುಲ್ ನಿರ್ದೇಶಕ ಆರ್.ಚಲುವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಎಸ್ಸಿ/ಎಸ್ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಮಲ್ಲು, ಡೈರಿ ಅಧ್ಯಕ್ಷ ಎಂ.ಎಂ.ಬಸವಣ್ಣ, ಕಾರ್ಯದರ್ಶಿ ಎಂ.ನಾಗೇಂದ್ರ, ಪಿಎಸಿಎಸ್ ಮಾಜಿ ಅಧ್ಯಕ್ಷ ಎ.ಬಿ.ಮಂಜುನಾಥ್, ಉಪನ್ಯಾಸಕ ಕುಮಾರಸ್ವಾಮಿ, ತಹಸೀಲ್ದಾರ್ ಸುರೇಶ್ ಆಚಾರ್, ತಾಪಂ ಇಓ ಸಿ.ಕೃಷ್ಣ, ಬಿಇಓ ಜಿ.ಶೋಭಾ, ಲೋಕೋಪಯೋಗಿ ಎಇಇ ಸತೀಶ್, ಮುಖಂಡರಾದ ಮಾರ್ಕೆಟ್ ನಾಗರಾಜು, ದೇವಾನಂದ, ಎಂ. ಬಿ.ಸಾಗರ್ ಹಾಗೂ ಇನ್ನಿತರರಿದ್ದರು.

ಮಹದೇವಪ್ಪ ಬಾವಿ ಸಿಎಂ: ಸಿಎಸ್‌ಪಿ

ಶ್ರೀ ತ್ರಿಪುರ ಸುಂದರಿ ಅಮ್ಮನವರ ರಥೋತ್ಸವಕ್ಕೆ ಸಚಿವರನ್ನು ಆಹ್ವಾನಿಸಲು ಆಗಮಿಸಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಬಾವಿ ಮುಖ್ಯಮಂತ್ರಿ ಡಾ.ಹೆಚ್.ಸಿ.ಮಹದೇವಪ್ಪ ಎನ್ನುವ ಮೂಲಕ ಎಲ್ಲರ ಗಮನ ಸೆಳೆದರು.

ಇದೇ ವೇಳೆ ಆತ್ಮೀಯವಾಗಿ ರಾಜಕೀಯ ವಿಚಾರಗಳನ್ನು ಉಭಯ ನಾಯಕರು ವಿನಿಮಯ ಮಾಡಿಕೊಂಡರು. ಬಾವಿ ಸಿಎಂ ಎಂದು ಆಶಯ ವ್ಯಕ್ತಪಡಿಸಿದ್ದಕ್ಕೆ ಪ್ರತಿಯಾಗಿ ಮಹದೇವಪ್ಪ ಅವರು ಲೋಕಸಭೆಗೆ ತಿಂಗಳಷ್ಟೇ ಬಾಕಿ ಇದೆ. ಕಾಂಗ್ರೆಸ್‌ಗೆ ಬಂದರೆ ನಿಮ್ಮನ್ನೇ ಮಂಡ್ಯದ ಕೈ ಅಭ್ಯರ್ಥಿಯಾಗಿ ಘೋಷಣೆ ಮಾಡಿ ಬಿಡುತ್ತೇವೆ ಎಂದು ಸಿ.ಎಸ್.ಪುಟ್ಟರಾಜು ಅವರನ್ನು ಆಹ್ವಾನಿಸಿದರು.

ಅರಸಿನಕೆರೆ ಶಾಲೆಯಲ್ಲಿ ಗಣರಾಜ್ಯೋತ್ಸವ



ಜಯಪುರ, ಜ.27– ಇಲ್ಲಿನ ಅರಸಿನಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮಾಜ ಸೇವಕ ಎಸ್.ಶ್ರೀಕಾಂತ್ 75ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿದರು. ಇದೇ ವೇಳೆ ಬೆಂಗಳೂರಿನ ಸಾಫ್ಟ್‌ವೇರ್ ಉದ್ಯೋಗಿ ಇಂಚರ ಎಂಬುವರು ಶಾಲೆಗೆ 2 ಲ್ಯಾಪ್‌ಟಾಪ್ ಕೊಡುಗೆ ನೀಡಿದರು. ಶಾಲೆ ವತಿಯಿಂದ ಸಮಾಜ ಸೇವಕ ಶ್ರೀಕಾಂತ್ ಮತ್ತು ಇಂಚರ ಅವರನ್ನು ಅಭಿನಂದಿಸಲಾಯಿತು.

ಶಾಲೆ ಮುಖ್ಯ ಶಿಕ್ಷಕ ಜಿ.ಅಶೋಕ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಸ್.ಸಿದ್ದರಾಜು, ಸದಸ್ಯರಾದ ಗುರುಮೂರ್ತಿ, ಗುಜ್ಜಪ್ಪ ನಾಯಕ, ಗುರುಸ್ವಾಮಿ, ಕವಿತಾ, ನಿಂಗಣ್ಣಸ್ವಾಮಿ, ರಂಗಸ್ವಾಮಿ, ಮಮತಾ, ಯಶೋಧ, ಸುಮಿತ್ರ, ಆಶಾ, ಶಿಕ್ಷಕರಾದ ರಾಜೇಂದ್ರ, ಕೆಂಡಗಣ್ಣ ಸ್ವಾಮಿಚಾರಿ, ಮರಿಯಾ ವಸಂತ ಪಾಲ್ಗೊಂಡಿದ್ದರು.

ಸಮ ಸಮಾಜ ನಿರ್ಮಾಣಕ್ಕೆ ಬದ್ಧ: ಶಾಸಕ ಡಿ.ರವಿಶಂಕರ್


ಕೆ.ಆರ್.ನಗರದಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಜ.27– ಸಂವಿಧಾನದ ಆಶಯದಂತೆ ಸಮ ಸಮಾಜ ನಿರ್ಮಾಣ ಮಾಡಲು ಬದ್ಧನಾಗಿದ್ದು, ಇದಕ್ಕೆ ಆಡಳಿತ ವರ್ಗ ಹಾಗೂ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಪುರಸಭೆ ಬಯಲು ರಂಗ ಮಂದಿರದಲ್ಲಿ ನಡೆದ 75ನೇ ಗಣರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್‌ರವರು ರಚಿಸಿದ ಸಂವಿಧಾನ ಜಗತ್ತಿಗೆ ಮಾದರಿಯಾಗಿದೆ. ಇದನ್ನು ಅರಿತಿರುವ ನಮ್ಮ ಸರ್ಕಾರ ಅದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಿದೆ ಎಂದರು.


ಸರ್ವರೂ ಸಮಾನತೆಯಿಂದ ಬದುಕಲು ಸಂವಿಧಾನ ರಚಿಸಿಕೊಟ್ಟ ಸಂವಿಧಾನ ಶಿಲ್ಪಿಯನ್ನು ನಾವು ನಿತ್ಯ ನೆನೆದು ಗೌರವ ಸಲ್ಲಿಸಬೇಕೆಂದ ಶಾಸಕರು ಚುನಾವಣಾ ಪೂರ್ವ ಕಾಂಗ್ರೆಸ್ ನೀಡಿದ್ದ ಗ್ಯಾರಂಟಿಗಳನ್ನು ಜಾರಿಗೆ ತಂದು ನಾವು ನುಡಿದಂತೆ ನಡೆದಿದ್ದೇವೆಂದು ತಿಳಿಸಿದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳನ್ನು ಬರಪೀಡಿತ ಪಟ್ಟಿಗೆ ಸರ್ಕಾರ ಸೇರ್ಪಡೆ ಮಾಡಿದ್ದು, ಪರಿಹಾರ ನೀಡಲು ಈಗಾಗಲೇ ಹಣ ಮಂಜೂರಾಗಿರುವುದರಿಂದ ಪ್ರತಿಯೊಬ್ಬ ರೈತರು ತಪ್ಪದೆ ಎಫ್‌ಐಡಿ ನೋಂದಣಿ ಮಾಡಿಸಿ ಸವಲತ್ತು ಪಡೆಯಬೇಕು ಎಂದರು.

ತಹಸೀಲ್ದಾರ್ ಸಿ.ಎಸ್.ಪೂರ್ಣಿಮಾ ಧ್ವಜಾರೋಹಣ ನೆರವೇರಿಸಿ ಗಣರಾಜ್ಯೋತ್ಸವ ಸಂದೇಶ ನೀಡಿದರು. ಈ ವೇಳೆ ಉಪನ್ಯಾಸಕ ಡಿ.ಶ್ರೀನಿವಾಸ್, ಪ್ರಪೂತಿ ತಜ್ಞೆಡಾ.ದಿವ್ಯಾ, ಶಿರಸ್ತೇದಾರ್ ಅಸ್ಲಂಭಾಷಾ, ಆರೋಗ್ಯ ಇಲಾಖೆ ಪ್ರಕಾಶ್, ಸರ್ವೇಯರ್ ಕೋಪಾಲ್ ಸೇರಿದಂತೆ ಮತ್ತಿತರರನ್ನು ಸನ್ಮಾನಿಸಲಾಯಿತು.

ಪುರಸಭೆ ಮಾಜಿ ಅಧ್ಯಕ್ಷ ಪ್ರಕಾಶ್, ಸದಸ್ಯರಾದ ಶಂಕರ್‌ಸ್ವಾಮಿ, ನಟರಾಜು, ಕೆ.ಬಿ.ವೀಣಾ, ಶಂಕರ್, ಮಾಜಿ ಸದಸ್ಯ ಕೆ.ವಿನಯ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ವಕ್ತಾರ ಸೈಯದ್ ಜಾಬೀರ್, ಟಿಎಪಿಸಿಎಂಎಸ್ ನಿರ್ದೇಶಕ ರವಿ, ತಾಪಂ ಇಓ ಜಿ.ಕೆ.ಹರೀಶ್, ಬಿಇಓ ಆರ್.ಕೃಷ್ಣಪ್ಪ, ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ. ನಟರಾಜು, ಸಿಡಿಪಿಓ ಅಣ್ಣಯ್ಯ, ಶಿಕ್ಷಣ ಸಂಯೋಜಕರಾದ ದಾಸಪ್ಪ, ಜಗದೀಶ್, ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ತಿಮ್ಮಶೆಟ್ಟಿ ಮತ್ತಿತರರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಸಂಭ್ರಮದ ಗಣರಾಜ್ಯೋತ್ಸವ


ಸಂವಿಧಾನದ ಪೀಠಿಕೆ ಹಾಗೂ ಅಂಬೇಡ್ಕರ್ ಭಾವಚಿತ್ರಕ್ಕೆ ಶಾಸಕ ಅನಿಲ್ ಪುಷ್ಪಾರ್ಚನೆ

ಹೆಚ್.ಡಿ.ಕೋಟೆ, ಜ.27– ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚಿಸದಿದ್ದರೇ ಇಂದು ನಾವು ಸಮಾನತೆಯಿಂದ ಬದುಕಲು ಸಾಧ್ಯವಾಗುತ್ತಿರಲಿಲ್ಲ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಹಮ್ಮಿಕೊಂಡಿದ್ದ 75ನೇ ಗಣರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಪಂ ಸದಸ್ಯನಿಂದ ಹಿಡಿದು ದೇಶದ ಪ್ರಧಾನಿ ಹುದ್ದೆ ಅಲಂಕರಿಸಲು ಸಂವಿಧಾನ ಕಾರಣವಾಗಿದೆ. ಕೇವಲ ಒಂದು ವರ್ಗ, ಜಾತಿಗೆ ಅಂಬೇಡ್ಕರ್ ಸಂವಿಧಾನ ರಚನೆ ಮಾಡಿಲ್ಲ. ಪ್ರತಿಯೊಬ್ಬ ಪ್ರಜೆಗೂ ಸಂವಿಧಾನ ನೀಡಿದ್ದಾರೆ. ಅದನ್ನು ಅರ್ಥ ಮಾಡಿಕೊಂಡು ಸಾಗಬೇಕು ಎಂದರು.

ಪ್ರಪಂಚದ ಹಲವು ದೇಶಗಳ ಸಂವಿಧಾನ ಅಧ್ಯಯನ ಮಾಡಿ ಭಾರತಕ್ಕೆ ಇಡೀ ವಿಶ್ವವೇ ಒಪ್ಪಿಕೊಳ್ಳುವ ಸಂವಿಧಾನ ನೀಡಿದ್ದರಿಂದ ಅಂಬೇಡ್ಕರ್ ವಿಶ್ವಮಾನವ ಆಗಲು ಸಾಧ್ಯವಾಗಿದೆ. ಹಾಗಾಗಿ ಅವರಿಗೆ ಗೌರವ ಕೊಡುವ ಕೆಲಸವನ್ನು ಎಲ್ಲರೂ ಮಾಡಬೇಕು ಎಂದರು.

ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಜಾರಿಗೆ ತಂದಿದೆ. ಪ್ರತಿಯೊಬ್ಬರೂ ಸಂವಿಧಾನ ಪೀಠಿಕೆ ಪಠಣ ಮಾಡಿದರೆ ಸಾಲದು ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಂವಿಧಾನಕ್ಕೆ ಗೌರವ ಸಲ್ಲಿಸಿದಂತೆ ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಬಿಇಓ ಮೈಮುನಿಸ ಬೇಗಂ ಮುಖ್ಯ ಭಾಷಣ ಮಾಡಿದರು. ತಹಸೀಲ್ದಾರ್ ಶ್ರೀನಿವಾಸ್ ಧ್ವಜರೋಹಣ ಮಾಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ ತಾಲೂಕಿನ ಆದಿವಾಸಿ ಮುಖಂಡ ಮೊತ್ತ ಸೋಮಣ್ಣ ಅವರನ್ನು ಶಾಸಕ ಅನಿಲ್ ಚಿಕ್ಕಮಾದು ಗೌರವಿಸಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಇಓ ಧರಣೇಶ್, ಬಿಇಓ ಮಾರಯ್ಯ, ಪುರಸಭೆ ಸದಸ್ಯ ನರಸಿಂಹಮೂರ್ತಿ, ಮುದ್ದುಮಲ್ಲಯ್ಯ, ಸಣ್ಣ ಕುಮಾರ್, ಸಣ್ಣರಾಮಪ್ಪ, ಶಿವರಾಜು, ಅಶೋಕ್, ಶಿವಣ್ಣ, ಬಸವರಾಜ, ಮಂಚಯ್ಯ, ಸಿಡಿಪಿಓ ಆಶಾ, ಬಿಸಿಎಂ ಅಧಿಕಾರಿ ಶಶಿಕಲಾ ಇದ್ದರು.

ಡಿ.ದೇವರಾಜ ಅರಸು ಅವರಿಂದ ಸಂವಿಧಾನದ ಆಶಯ ಜಾರಿ


ಹುಣಸೂರಿನಲ್ಲಿ ಗಣರಾಜ್ಯೋತ್ಸವ ಆಚರಣೆ

ಹುಣಸೂರು, ಜ.27– ಸಂವಿಧಾನದ ಆಶಯಗಳನ್ನು ಆಡಳಿತದಲ್ಲಿ ಜಾರಿಗೊಳಿಸಿದ ಕೀರ್ತಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರಿಗೆ ಸಲ್ಲುತ್ತದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ 75ನೇ ಗಣರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂವಿಧಾನದ ಆಶಯಗಳಂತೆ ನಾವೆಲ್ಲರೂ ಬದುಕುತ್ತಿದ್ದೇವೆ. ಸಂವಿಧಾನದ ಆಶಯದಂತೆ ಆಡಳಿತ ನಡೆಸಿದ ಡಿ.ದೇವರಾಜ ಅರಸು ಅವರು ಎಲ್ಲಾರಿಗೂ ಸಾಮಾಜಿಕ ನ್ಯಾಯ ನೀಡಿ ಇಡೀ ದೇಶಕ್ಕೆ ಮಾದರಿಯಾಗಿದ್ದರು. ಪ್ರತಿಯೊಬ್ಬರೂ ಸಂವಿಧಾನವನ್ನು ಗೌರವಿಸಬೇಕು ಎಂದರು.

ಧ್ವಜಾರೋಹಣ ನೆರವೇರಿಸಿ, ಧ್ವಜವಂದನೆ ಸ್ವೀಕರಿಸಿ ಮಾತನಾಡಿದ ಮೊಹಮ್ಮದ್ ಹ್ಯಾರೀಸ್ ಸುಮೇದ್ ಮಾತನಾಡಿ, ಸ್ವಾತಂತ್ರ್ಯ ನಂತರ ಪ್ರತಿಯೊಬ್ಬ ನಾಗರಿಕರಿಗೂ ಸಂವಿಧಾನ ಬದ್ಧವಾದ ಮೂಲಭೂತ ಹಕ್ಕು ನೀಡಿ ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಲಾಗಿದೆ ಎಂದರು.

ಇದೇ ವೇಳೆ ಕರ್ನಾಟಕ ಕಟ್ಟಡ ಕಾರ್ಮಿಕರ ಮಂಡಳಿಯಿಂದ ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 30 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನ ನಗರದ ವಿವಿಧ ಶಾಲೆಗಳ ಮಕ್ಕಳಿಂದ ಆಕರ್ಷಕ ಪಥ ಬ್ಯಾಂಡ್‌ಸೆಟ್ ಸಂಚಲನ ನಡೆಯಿತು. ತಹಸೀಲ್ದಾರ್ ಮಂಜುನಾಥ್, ಇಓ ಮನು, ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ, ಸರವಣ, ವಿವೇಕ್, ಬಿಇಓ ಎಸ್.ರೇವಣ್ಣ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸದಸ್ಯರಾದ ಪಿ.ಆರ್.ರಾಚಪ್ಪ, ಹೆಚ್.ಪಿ. ಸುಬ್ಬಾರಾವ್, ಎಸ್.ಜಯರಾಂ, ಹೆಚ್.ವಿ. ಭಾಸ್ಕರ್ ಸೇರಿದಂತೆ ಇನ್ನಿತರರಿದ್ದರು.

ಕಾಲು ಜಾರಿ ನದಿಗೆ ಬಿದ್ದು ಮಹಿಳೆ ಸಾವು

ನಂಜನಗೂಡು, ಜ.27– ಮಹಿಳೆಯೊಬ್ಬರು ಕಾಲು ಜಾರಿ ಕಪಿಲಾ ನದಿಗೆ ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಸಂಗಮ ಕ್ಷೇತ್ರದ ಮಹದೇವ ತಾತ ಗದ್ದುಗೆ ಬಳಿ ಶುಕ್ರವಾರ ನಡೆದಿದೆ. ನಂಜನಗೂಡಿನ ಕಮಲಮ್ಮ ಕಲ್ಯಾಣ ಮಂಟಪದ ಮಾಲೀಕ ಮಂಜುನಾಥ್ ಅವರ ಸಹೋದರಿ, ಮೈಸೂರಿನ ಕುವೆಂಪು ನಗರ ನಿವಾಸಿ ಹೆಚ್.ಎನ್.ನಂಜಪ್ಪಸ್ವಾಮಿ ಪತ್ನಿ ಶಕುಂತಲಾ(48) ಸಾವನ್ನಪ್ಪಿದವರು. ಸಂಗಮ ಕ್ಷೇತ್ರಕ್ಕೆ ದೇವರ ದರ್ಶನಕ್ಕೆ ಆಗಮಿಸಿದ್ದ ದಂಪತಿ ಕಪಿಲಾ ನದಿಗೆ ಇಳಿದು ಕಾಲು ತೊಳೆಯುತ್ತಿದ್ದ ವೇಳೆ ಶಕುಂತಲಾ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಪತ್ನಿ ರಕ್ಷಣೆಗೆಂದು ನಂಜಪ್ಪಸ್ವಾಮಿ ಕೂಡ ನದಿಗೆ ಇಳಿದು ಪ್ರಯತ್ನಿಸಿದ್ದಾರೆ. ಆದರೆ ರಕ್ಷಣೆ ಸಾಧ್ಯವಾಗದಿದ್ದಾಗ ಇವರ ನೆರವಿಗೆ ಸ್ಥಳೀಯರು ಬಂದು ಶಕುಂತಲಾ ಅವರನ್ನು ನದಿಯಿಂದ ಮೇಲೆತ್ತಿದ್ದಾರೆ. ಈ ವೇಳೆಗಾಗಲೇ ಅವರು ಸಾವನ್ನಪ್ಪಿದ್ದರು ಎಂದು ಹುಲ್ಲಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಿಜೃಂಭಣೆಯ ಶ್ರೀ ತ್ರಿಪುರ ಸುಂದರಿ ಅಮ್ಮನವರ ರಥೋತ್ಸವ



ಮೂಗೂರು, ಜ.27– ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಮಹಾ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ಮುಂಜಾನೆಯಿಂದಲೇ ದೇವಾಲಯದಲ್ಲಿ ಸಾಂಪ್ರದಾಯಿಕ ಪೂಜಾ ಕೈಂಕರ್ಯಗಳು ನೆರವೇರಿದವು. ಮಧ್ಯಾಹ್ನ 3 ಗಂಟೆಗೆ ಅಲಂಕೃತಗೊಂಡ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ, ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ವಾಟಾಳು ಶ್ರೀ, ಕೆಡಿಪಿ ಸದಸ್ಯ ಸುನೀಲ್ ಬೋಸ್, ತಹಸೀಲ್ದಾರ್ ಸುರೇಶ್ ಆಚಾರ್ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ಮೂಗೂರು ಗೆಳೆಯರ ಬಳಗದವರು ನೂತನ ರಥಕ್ಕೆ ಬೃಹತ್ ಗಾತ್ರದ ಹೂವಿನ ಹಾರ ಅರ್ಪಿಸಿದರು. ಈ ಸಂದರ್ಭ ನೆರೆದಿದ್ದ ಸಾವಿರಾರು ಭಕ್ತರು ತಿಬ್ಬಾದೇವಿಗೆ ಜೈ ಎಂದು ಘೋಷಣೆ ಕೂಗಿ ರಥ ಎಳೆದರು. ಅಲ್ಲದೇ ಇಷ್ಟಾರ್ಥ ಸಿದ್ಧಿಗಾಗಿ ಹಣ್ಣು ಜವನ ಎಸೆದು ಪುನೀತರಾದರು.

ಬೆಳಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತು ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರು ದರ್ಶನ ಪಡೆದರು. ಅಲ್ಲಲ್ಲಿ ಭಕ್ತರು ಪ್ರಸಾದ ವಿನಿಯೋಗ ಮಾಡಿದರು. ಪ್ರತಿ ವರ್ಷದಂತೆ ಈ ಬಾರಿಯೂ ಮಂಡ್ಯದ ಶ್ರೀತ್ರಿಪುರ ಸುಂದರಿ ಅಮ್ಮನವರ ಸೇವಾ ಸಮಿತಿಯಿಂದ ಭಕ್ತರಿಗೆ ಸಿಹಿ ಊಟ ಏರ್ಪಡಿಸಿದ್ದರು.

ಸಚಿವ ಮಹದೇವಪ್ಪ ಮಾತನಾಡಿ, ಸಕಾಲಕ್ಕೆ ಮಳೆ ಬೆಳೆಯಾಗಿ ರೈತರು ಸಂತೃಪ್ತರಾಗಲಿ. ಗ್ರಾಮದ ಹಾಗೂ ನಾಡಿನ ಜನತೆಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು. ಈ ವೇಳೆ ಉಪ ತಹಸೀಲ್ದಾರ್ ಲಕ್ಷ್ಮಿ, ತಾಪಂ ಮಾಜಿ ಸದಸ್ಯ ಎಂ.ಚಂದ್ರಶೇಖರ್, ಗೌಡರ ಎಂ.ಪಿ.ನಾಗರಾಜು, ಮುಖಂಡರಾದ ಎಂ.ಡಿ.ಬಸವರಾಜು, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ನಂಜುಂಡಸ್ವಾಮಿ, ಪಾರುಪತ್ತೇದಾರ ಸಾಗರ್, ಮಾಜಿ ಅಧ್ಯಕ್ಷ ಜಗದೀಶಮೂರ್ತಿ, ಎಂ.ಕೆ.ಸಿದ್ದರಾಜು, ನಾಗೇಂದ್ರ ಕುಮಾರಸ್ವಾಮಿ ಸೇರಿದಂತೆ ಗ್ರಾಮಸ್ಥರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬ್ಲ್ಯೂ ಸ್ಟಾರ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಫೈಟರ್ (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಾಟೇರ (ಕ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬ್ಯಾಚುಲರ್ ಪಾರ್ಟಿ (ಕ): ಬೆ.10.10ಕ್ಕೆ, ಮ.1ಕ್ಕೆ, ರಾ.7.10ಕ್ಕೆ, ಕಾಟೇರ (ಕ): ಮ.3.50ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.10.05ಕ್ಕೆ.
ಸ್ಕ್ರೀನ್ 2	ಅಲೆಕ್ಸಾ (ಕ): ಬೆ.10.15ಕ್ಕೆ, ಕೇಸ್ ಆಫ್ ಕೊಂಡಾಣ (ಕ): ಮ.1ಕ್ಕೆ, ಹನುಮಾನ್ (ಕ): ಮ.3.50ಕ್ಕೆ, ಫೈಟರ್ (3ಡಿ)(ಹಿಂ): ಸಂ.6.55ಕ್ಕೆ, ಫೈಟರ್ (ಹಿಂ): ರಾ.10.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಕಾಟೇರ (ಕ): ರಾ.10ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.9.40ಕ್ಕೆ, ಮ.12.50ಕ್ಕೆ, ಸಂ.4ಕ್ಕೆ, ರಾ.10.25ಕ್ಕೆ, ಫೈಟರ್ (ಹಿಂ): ರಾ.7.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ.9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ, ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥರ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಚಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗಂಡನ ಮನೆಯವರ ಕಿರುಕುಳ: ಗೃಹಿಣಿ ಆತ್ಮಹತ್ಯೆ

ನಂಜನಗೂಡು, ಜ.27– ಗಂಡನ ಮನೆಯವರ ಮಾನಸಿಕ ಹಾಗೂ ದೈಹಿಕ ಕಿರುಕುಳ ತಾಳಲಾರದೇ ಗೃಹಿಣಿಯೊಬ್ಬಳು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಹೊಸಕೋಟೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಮಹದೇವಮೂರ್ತಿ ಅವರ ಪುತ್ರ ಹರೀಶ್ ಪತ್ನಿ ವಿಜಯಲಕ್ಷ್ಮಿ(35) ಆತ್ಮಹತ್ಯೆಗೆ ಶರಣಾದವರು. ಇವರಿಗೆ 12 ವರ್ಷದ ವೈಷ್ಣವಿ ಮತ್ತು 10 ವರ್ಷದ ಗೌರವ್ ಎಂಬ ಮಕ್ಕಳಿದ್ದಾರೆ.

ಕಳೆದ 12 ವರ್ಷಗಳ ಹಿಂದೆ ಮೈಸೂರು ತಾಲೂಕಿನ ಬೊಮ್ಮೇನಹಳ್ಳಿಯ ವಿಜಯಲಕ್ಷ್ಮಿ ಹೊಸಕೋಟೆ ಗ್ರಾಮದ ಹರೀಶ್ ಎಂಬುವರನ್ನು ಮದುವೆಯಾಗಿದ್ದರು. 7 ವರ್ಷಗಳ ಕಾಲ ಅನ್ಯೋನ್ಯವಾಗಿದ್ದರು. ಆದರೆ ನಂತರದ ದಿನಗಳಲ್ಲಿ ಕುಟುಂಬದಲ್ಲಿ ಆಗಾಗ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ. ಈ ಬಗ್ಗೆ ಮಹದೇವಮೂರ್ತಿ ಕುಟುಂಬದ ಮೇಲೆ ವಿಜಯಲಕ್ಷ್ಮಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ವಿಜಯಲಕ್ಷ್ಮಿಗೆ ಗಂಡನ ಮನೆಯವರು ಮಾನಸಿಕ, ದೈಹಿಕ ಹಿಂಸೆ ನೀಡುತ್ತಿದ್ದ ಕಾರಣ, ಈಕೆ ವಿಚ್ಛೇದನ ಕೋರಿ ಮೈಸೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು.

ಜ.24ರಂದು ಮತ್ತೆ ಜಗಳವಾಗಿದ್ದು, ಈ ವೇಳೆ ಪತಿ ಹರೀಶ್, ಮಾವ ಮಹದೇವಮೂರ್ತಿ, ಅತ್ತೆ ಮಲ್ಲಿಗಮ್ಮ, ಮೈದುನರಾದ ಮಹೇಂದ್ರ, ಹಾಗೂ ರಾಘವೇಂದ್ರ, ಮಹದೇವಮೂರ್ತಿ ಅವರ ತಂಗಿ ಶಿವಮ್ಮ ನೀನು ಮನೆಯಿಂದ ಹೊರಗೆ ಹೋಗು, ನೀನು ಇರುವುದಕ್ಕಿಂತ ಏನಾದರೂ ಮಾಡಿಕೊಂಡು ಸಾಯಿ ಎಂದು ಅವಮಾನ ಮಾಡಿ, ಮಾನಸಿಕ ಹಿಂಸೆ ನೀಡಿ, ದೈಹಿಕ ಹಲ್ಲೆ ನಡೆಸಿದ ಕಾರಣ ವಿಜಯಲಕ್ಷ್ಮಿ ವಿಷ ಸೇವಿಸಿದ್ದರು. ತಕ್ಷಣ ಆಕೆಗೆ ಹೊಸಕೋಟೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ನಿಧನರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನನ್ನ ಮಗಳಿಗೆ ದೈಹಿಕ, ಮಾನಸಿಕ ಹಿಂಸೆ ನೀಡಿ ಅವಳ ಸಾವಿಗೆ ಕಾರಣರಾದವರ ವಿರುದ್ಧ ಕ್ರಮ ಕೈಗೊಂಡು ಬಂಧಿಸಬೇಕು ಎಂದು ವಿಜಯಲಕ್ಷ್ಮಿ ತಾಯಿ ಮಹದೇವಮ್ಮ ಬಿಳಿಗೆರೆ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಬಿಳಿಗೆರೆ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ನಾಗರಾಜ್ ಹೆಬ್ಬಾರ್ ನಿಧನ



ಹುಣಸೂರು, ಜ.27– ನಗರದ ಗಣೇಶನಗುಡಿ ಬೀದಿ ನಿವಾಸಿ, ದ್ವಾರಕ ಹೋಟೆಲ್ ಮಾಲೀಕ ನಾಗರಾಜ್ ಹೆಬ್ಬಾರ್ ಉರುಫ್ ಅಪ್ಪಿ ನಾಗರಾಜು (58) ಜ.25ರಂದು ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕು ಕಚೇರಿ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸವಿನೆನಪು



ಶ್ರೀಮತಿ ಚೆಲುವಮ್ಮ ಯಜಮಾನ್ ಶ್ರೀ ವೆಂಕಟೇಶ್‌ಗೌಡ್ರು

ನೀವು ನಮ್ಮನ್ನಗಲಿ ಹಲವು ವರ್ಷಗಳಾಗಿದ್ದರೂ ನಿಮ್ಮ ಮಾರ್ಗದರ್ಶನ, ಕೃಪಾಶೀರ್ವಾದದಿಂದ ಮುನ್ನಡೆಯುತ್ತಿದ್ದೇವೆ. ಭೌತಿಕವಾಗಿ ನೀವಿಲ್ಲದಿದ್ದರೂ ನಮ್ಮ ಮನದಲ್ಲಿ ಸದಾ ಚಿರ ಸ್ಥಾಯಿಯಾಗಿ ನೆಲೆಸಿದ್ದೀರಿ.

ದು:ಖತಪ್ತರು: ಶ್ರೀನಿವಾಸ್–ಪ್ರೇಮಕುಮಾರಿ, ನಾಗೇಂದ್ರ (ರಮೇಶ್)– ಹೇಮಾವತಿ, ಪದ್ಮ, ವರಲಕ್ಷ್ಮಿ, ವಿಜಯ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಉಸ್ತಾದ್ ಯಾಲಕ್ಕಿಗೌಡರ ಕುಟುಂಬವರ್ಗ, ಕೆ.ಜಿ. ಕೊಪ್ಪಲು.

25ನೇ ವಿವಾಹ ವಾರ್ಷಿಕೋತ್ಸವ



ಶ್ರೀಮತಿ ಚಂದ್ರಕಲಾ ಮತ್ತು ಶ್ರೀ ಮಹೇಶ್ ಹಾಗೂ

ಶ್ರೀಮತಿ ಭಾಗ್ಯಶ್ರೀ ಮತ್ತು ಶ್ರೀ ಹೆಚ್.ಕೆ.ಮಹದೇವೆಗೌಡ ಇವರಿಗೆ

ಶುಭಕೋರುವವರು: ನಿತ್ಯಾಶ್ರೀ, ಯೋಗೇಶ್, ಲಾವಣ್ಯ, ಧನುಶ್ರೀ, ಸುಹಾಸ್, ಸಣ್ಣಮ್ಮ ಮತ್ತು ಕುಟುಂಬವರ್ಗ

STAR OF MYSORE

SPECIAL ISSUE

Star of Mysore is completing 46 years of service on 16th February 2024 and entering 47th year of publication. As in the past, this year too we will be publishing a Special Issue.

We request our advertisers and patrons to release their advertisements before 12th February to facilitate printing as per schedule.

HEAD OFFICE

0821-2496520 (5-LINES)

Ad Dept. - 0821-2496522 / 23

Email : ad@starofmysore.com

Maria G. Fernandes
Advt. Manager: 94485-25060

Joy Anthony Dove
Sr. Executive-Ad Sales
89516-68960

Prema
Sr. Executive Advertising
98805-49879

K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud : 98805-09200 / 99016-02226
T.N. Pura : 94483-05750
Hassan : 94484-01175
Bengaluru : 98440-46761

ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ..

ತಿ.ನರಸೀಪುರ ಇದರ ರಿಟರ್ನಿಂಗ್ ಆಫೀಸರ್ ರವರ ಕಾರ್ಯಾಲಯ

ಚುನಾವಣೆ ಪ್ರಕಟಣೆ


ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ತಿ.ನರಸೀಪುರ ಇದರ ಆಡಳಿತ ಮಂಡಳಿ ನಿರ್ದೇಶಕರುಗಳ ಸಾಮಾನ್ಯ ಚುನಾವಣೆಯು ದಿನಾಂಕ:11–02–2024 ರಂದು ಭಾನುವಾರ ಬೆಳಿಗ್ಗೆ 9–00 ಗಂಟೆಯಿಂದ ಸಂಜೆ 4–00 ಗಂಟೆಯ ವರೆಗೆ ವಿದ್ಯೋದಯ ಬಾಲಿಕಾ ಪ್ರೌಢಶಾಲೆ, ತಿ.ನರಸೀಪುರ ಇಲ್ಲಿ ಜರುಗಲಿದ್ದು, ನಾಮಪತ್ರಗಳನ್ನು ದಿನಾಂಕ:28–01–2024 ರಿಂದ 03–02–2024ರ ವರೆಗಿನ ಅವಧಿಯಲ್ಲಿ ಪ್ರತಿ ದಿನ ಬೆಳಿಗ್ಗೆ 11–00 ಗಂಟೆಯಿಂದ ಅಪರಾಹ್ನ 3–00 ಗಂಟೆಯ ವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ನಾಮ ಪತ್ರಗಳ ಪರಿಶೀಲನೆಯನ್ನು ದಿನಾಂಕ:04–02–2024 ರಂದು ಭಾನುವಾರ ಬೆಳಿಗ್ಗೆ 11–00 ಗಂಟೆಗೆ ಸಂಘದ ಕಛೇರಿಯಲ್ಲಿ ನಡೆಸಲಾಗುವುದು. ಚುನಾವಣಾ ವೇಳಾಪಟ್ಟಿಯನ್ನು ಅರ್ಹ ಮತದಾರರಿಗೆ ಅಂಚೆ ಮೂಲಕ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಸಂಘದ ಕಾರ್ಯದರ್ಶಿ ಹಾಗೂ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸುವುದು.

ಸಹಿ/–(ಹೆಚ್.ಕೆ ಸತೀಶ್)
ರಿಟರ್ನಿಂಗ್ ಆಫೀಸರ್

ಅರ್ಹ ಮತದಾರರು ಸಂಘದ ಚುನಾವಣೆಯಲ್ಲಿ ಮತ ಚಲಾಯಿಸಲು ಸಂಘದ ಗುರುತಿನ ಕಾರ್ಡ್ ಕಡ್ಡಾಯವಾಗಿದ್ದು, ಗುರುತಿನ ಕಾರ್ಡ್ ಪಡೆಯಲು ಇತ್ತೀಚಿನ 02 ಭಾವಚಿತ್ರಗಳೊಂದಿಗೆ ಕಛೇರಿ ವೇಳೆಯಲ್ಲಿ ಖುದ್ದು ಸಂಘಕ್ಕೆ ಹಾಜರಾಗಿ ಗುರುತಿನ ಕಾರ್ಡ್ ಪಡೆದುಕೊಳ್ಳಲು ಕೋರಿದೆ.

ಸಹಿ/– ಕಾರ್ಯದರ್ಶಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ತಿ.ನರಸೀಪುರ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಮರವೇಗೌಡರು

ಇವರು ದಿನಾಂಕ 18.01.2024 ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 28.01.2024ನೇ ಭಾನುವಾರ ಬೆಳಗ್ಗೆ 11.30 ಗಂಟೆಗೆ ಮರುಳೇಶ್ವರ ದೇವಸ್ಥಾನ ಆವರಣ, ಕಾವೇರಿ ಶಾಲೆ ಎದುರು, ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಪತ್ನಿ ಸರಸ್ವತಮ್ಮ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

ವಿಶೇಷ ಸೂಚನೆ: ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ